











ಸಿದ್ಧಗಂಗಾ

ಸಂಚಿಕೆ ೨

1968.





ಶ್ರೀ ಸಿದ್ಧಗಂಗಾ ಮಠ

ತುಮಕೂರು ಜಿಲ್ಲಾ



ಭಕ್ತಮಹಾಶಯರಲ್ಲಿ.

ಈ ಕ್ಷೇತ್ರವು ಪುರಾತನ ಕಾಲದಿಂದ **ಶಿವಯೋಗಿಗಳ, ಸಿದ್ಧಪುರುಷರ ಆವಾಸಸ್ಥಾನವಾಗಿದೆ.** ಈ ಮಹಾಮಹಿಮರ ಶ್ರೇಣಿಯಲ್ಲಿ ಪ್ರಾತಃಸ್ಮರಣೀಯರಾದ **ಶ್ರೀ ಶ್ರೀ ಉದ್ದಾನ ಸ್ವಾಮಿಗಳು** ಸರ್ವಸಮಾಜದ ಕಲ್ಯಾಣವನ್ನು ಬಯಸಿ ಈಗ್ಗೆ ಸುಮಾರು ೫೦ ವರ್ಷಗಳ ಹಿಂದೆಯೇ ಶ್ರೀಕ್ಷೇತ್ರದಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನೂ. ವೇದಪಾಠಶಾಲೆಯನ್ನೂ ಸ್ಥಾಪಿಸಿದರು. ಇಂದು ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿರುವ ದಾಸೋಹ ಮತ್ತು ಇತರ ಇನ್ನೂ ಅನೇಕ ವಿದ್ಯಾಸಂಸ್ಥೆಗಳ ಜೊತೆಗೆ ಈ ಉಚಿತ ವಿದ್ಯಾರ್ಥಿ ನಿಲಯವು ಈಗಿನ ಕ್ಷೇತ್ರಾಧ್ಯಕ್ಷರಾದ **ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ** ಅವಿಶ್ರಾಂತ ಶ್ರಮದ ಫಲವಾಗಿ ಈಗ ೩,೮೦೦ ಕ್ಕೂ ಮೇಲ್ಪಟ್ಟು ಎಲ್ಲಾ ಮತದ ವಿದ್ಯಾರ್ಥಿಗಳಿಗೂ ಉಚಿತ ಅಶನ-ವಸತಿಗಳನ್ನು ಒದಗಿಸುತ್ತಾ ದೇಶದಲ್ಲಿ ಏಕೈಕ ಸಂಸ್ಥೆಯಾಗಿದೆ. ವೇದ ಪಾಠಶಾಲೆಯು ಈಗ ವೇದ ಮತ್ತು ಸಂಸ್ಕೃತ ಮಹಾಪಾಠಶಾಲೆಯಾಗಿ ೩೦೦೦ ಕ್ಕೂ ಹೆಚ್ಚಿದ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದೆ.

ಈ ಸಂಸ್ಥೆಗಳು ಕಳೆದ ೫೦ ವರ್ಷಗಳು ಸಮಾಜಕ್ಕೆ ಸಲ್ಲಿಸಿದ ಸೇವೆಯ ಸವಿನೆನಪಿಗಾಗಿ ಅವುಗಳ **ಸುವರ್ಣ ಮಹೋತ್ಸವವನ್ನು** ಇದೇ ಸಂವತ್ಸರದಲ್ಲಿ ಆಚರಿಸಿ ಇನ್ನು ಮುಂದೆಯೂ ಇದೇ ರೀತಿ ಈ ಸಂಸ್ಥೆಗಳು ನಡೆಯುವ ಸಲುವಾಗಿ ಇದಕ್ಕೆ ತಕ್ಕ ಪ್ರಮಾಣದ ನಿಧಿಯೊಂದನ್ನು ಏರ್ಪಡಿಸುವುದು ಅತ್ಯಾವಶ್ಯಕವೆನಿಸಿ. ದೇಶದಾದ್ಯಂತ ಈ ನಿಧಿಸಂಗ್ರಹಣೆಯನ್ನು ಕೈಗೊಳ್ಳಲಾಗಿದೆ. ಭಕ್ತಮಹಾಶಯರು ಉದಾರವಾಗಿ ಈ ನಿಧಿಗೆ ಸಹಾಯಮಾಡುವುದರ ಮೂಲಕ ಈ ಸಮಿತಿಯ ಕಾರ್ಯಗಳನ್ನು ಯಶಸ್ವಿಗೊಳಿಸಲು ವಿನಂತಿ ಮಾಡುತ್ತೇವೆ.

ಇತಿ ತಮ್ಮ ವಿಶ್ವಾಸಿಗಳು,

ಉಚಿತ ವಿದ್ಯಾರ್ಥಿನಿಲಯ ಮತ್ತು ವೇದ, ಸಂಸ್ಕೃತ ಮಹಾಪಾಠಶಾಲಾ
ಸುವರ್ಣಮಹೋತ್ಸವ ನಿಧಿ ಸಮಿತಿಯ ಅಪ್ಪಣೆಯಂತೆ

ಕೆ. ಜಿ. ರಂಗಯ್ಯ,
ಕಾರ್ಯದರ್ಶಿ.

‘ಸಿದ್ಧಗಂಗಾ’

(ತ್ರೈಮಾಸಿಕ)

ಸಂಚಿಕೆ ೨

೧೯೬೮



ವಿನಮ್ರ ಪ್ರಾರ್ಥನೆ



ಮಹಾಶಯರೇ,

"ಸಿದ್ಧಗಂಗಾ ತ್ರೈಮಾಸಿಕದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಪ್ರಥಮ ವರ್ಗದ ಪತ್ರಿಕೆಯನ್ನಾಗಿ ಮಾಡಲು ವಾಚಕ ವೃಂದ ಹಾಗೂ ಜನತೆಯ ವಿಶೇಷ ಆರ್ಥಿಕ ನೆರವನ್ನು ಆಶಿಸಿದ್ದೇವೆ.

ಪತ್ರಿಕೋದ್ಯಮದ ಯಶಸ್ಸಿಗೆ ಸ್ವಂತ ಮುದ್ರಣಾಲಯ, ವಿಚಾರಪೂರಿತ ಲೇಖನಗಳೂ ಅತ್ಯಗತ್ಯ. ಇದಕ್ಕಾಗಿ ಈ ಕೆಳಕಂಡಂತೆ ಆರ್ಥಿಕ ಸಹಾಯವನ್ನು ತಮ್ಮಿಂದ ಬಯಸಿದ್ದೇವೆ.

1) 200 ರೂ. ಮೇಲೆ ನೀಡುವವರು-ಪೋಷಕರು
2) 150 ರೂ. ಕೊಡುವವರು-ಪ್ರೋತ್ಸಾಹಕರು.
3) 100 ರೂ. ಕೊಡುವವರು-ಸಹಾಯಕರು.
4) 50 ರೂ., ಕೊಡುವವರು-ಹಿತೈಷಿಗಳು.

ಹೀಗೆ ಆದರಪೂರ್ವಕವಾಗಿ ಧನಸಹಾಯ ಮಾಡುವ ಮಹನೀಯರ ಹೆಸರುಗಳನ್ನು ಪತ್ರಿಕೆಯಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸಿ ಪ್ರಕಟಿಸಲಾಗುವುದು.

ಚಂದಾದಾರರಲ್ಲಿ ವಿನಂತಿ

ಮಾನ್ಯ ಚಂದಾದಾರರು ತಮ್ಮ ಚಂದಾ ಹಣವನ್ನು ತೀವ್ರ ಕಳುಹಿಸಿ, ತನ್ಮೂಲಕ ಪತ್ರಿಕೆಯ ಪುರೋಭಿವೃದ್ಧಿಗೆ ನೆರವು ನೀಡಬೇಕಾಗಿ ಪ್ರಾರ್ಥಿಸಲಾಗಿದೆ. ಅವಧಿ ಮುಗಿದನಂತರ ಮಾನ್ಯ ಚಂದಾದಾರರು ಹಿಂದಿನಿಂದ ಇಟ್ಟಿರುವ ಅಭಿಮಾನದಂತೆಯೇ ಈ ಹೊಸ ವರುಷದ ಚಂದಾವನ್ನು ಕಳಿಸಿ ಪತ್ರಿಕೆಯನ್ನು ಯಶಸ್ವಿಯಾಗಿ ಹೊರಬರುವಂತೆ ಸಹಕರಿಸಬೇಕಾಗಿ ವಿನಂತಿ.

ಸಿದ್ಧಗಂಗಾ

ಸಂಪಾದಕ ಮಂಡಳಿ :—

ಪಂಡಿತ್ ಚನ್ನಪ್ಪ ಎರೇಸೀಮೆ
ಪಂಡಿತ್ ಕೆ. ಪಿ. ಶಿವಲಿಂಗಯ್ಯ, ಬಿ.ಎ.,
ರಾಜೀವಲೋಚನ, ಎಂ.ಎ.,

ಮುದ್ರಕರು :

ಸಿ. ಚಂದ್ರಶೇಖರರಾವ್, ಬಿ.ಎಸ್‌ಸಿ.,
ಲಿಯೋ ಪ್ರಿಂಟರ್ಸ್, ಸೌರಾಷ್ಟ್ರಪೇಟೆ
ಬೆಂಗಳೂರು–2.

ಪತ್ರಿಕೆ ಹೊರಡುವ ಸ್ಥಳ :

ಶ್ರೀ ಸಿದ್ಧಗಂಗಾ ಕ್ಷೇತ್ರ

ಪತ್ರಿಕೆ ಹೊರಡುವ ಮಾಸಗಳು :

ಜನವರಿ
ಏಪ್ರಿಲ್
ಜುಲೈ
ಅಕ್ಟೋಬರ್

ಲೇಖಕರಲ್ಲಿ ವಿನಂತಿ

"ಸಿದ್ಧಗಂಗಾ" ಪತ್ರಿಕೆಗೆ ಮಾನ್ಯ ಲೇಖಕರಿಂದ ಸಾಹಿತ್ಯದ ವಿವಿಧ ಪ್ರಕಾರಗಳ ಲೇಖನಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು ತಮ್ಮ ಹೆಸರು. ವಿಳಾಸಗಳ ಸಹಿತ ಕಾಗದದ ಒಂದು ಮಗ್ಗಲು, ಲೇಖನಗಳನ್ನು ಸ್ಪಷ್ಟವಾಗಿ ಬರೆದು ಕಳುಹಿಸಲು ಪ್ರಾರ್ಥನೆ ಧರ್ಮ, ಸಂಸ್ಕೃತಿ, ಕಲೆ, ಸಾಹಿತ್ಯ, ವಿಜ್ಞಾನ, ಶಿಕ್ಷಣ ಮುಂತಾದ ವಿಚಾರಗಳನ್ನೊಳಗೊಂಡ ಲೇಖನಗಳಿಗೆ ಮಾನ್ಯತೆ ಹೆಚ್ಚು. ಲೇಖಕರು ತಮ್ಮಲ್ಲಿ ಲೇಖನದ ಪ್ರತಿಯನ್ನು ಕಾಯ್ದಿಟ್ಟುಕೊಳ್ಳಲು ಪ್ರಾರ್ಥನೆ. ಲೇಖನಗಳನ್ನೂ, ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಸಂಪಾದಕರ ವಿಳಾಸಕ್ಕೆ ದಯವಿಟ್ಟು ಕಳುಹಿಸಬೇಕು.

ವಿಷಯಾನುಕ್ರಮಣಿಕೆ

1968-69 ನೇ ಸಾಲಿನ ಕಾರ್ಯಕಾರಿ ಸಮಿತಿ

(ಹಳೆಯ ವಿದ್ಯಾರ್ಥಿಗಳ ಸಂಘ)

ಅಧ್ಯಕ್ಷರು :-ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು.

ಉಪಾಧ್ಯಕ್ಷರು :-ಶ್ರೀ ಶ್ರೀ ಚನ್ನವೀರದೇಶಿಕೇಂದ್ರ ಸ್ವಾಮಿಗಳು, ದೊಡ್ಡಮಠ, ಬೆಂಗಳೂರು.

ಪ್ರಧಾನ ಕಾರ್ಯದರ್ಶಿ :-ವಿದ್ವಾನ್ ಎಸ್. ಪಿ. ಶಿವಶಂಕರ್.

ಶಾಖೆಗಳ ಕಾರ್ಯದರ್ಶಿಗಳು

1. ವಸ್ತುಪ್ರದರ್ಶನ ಸಮಿತಿ :- ಡಿ. ಚಂದ್ರಶೇಖರಯ್ಯನವರು
2. ಪತ್ರಿಕಾ ವಿಭಾಗ :- ಹೆಚ್. ಬಿ. ಗಂಗಾಧರಯ್ಯನವರು B.Sc., B.Ed.,
3. ಪ್ರಧಾನ ಸಂಪಾದಕರು :- ಪಂಡಿತ್ ಚನ್ನಪ್ಪ ಎರೇಸೀಮೆ
4. ರಜತ ಮಹೋತ್ಸವ ಸಮಿತಿ :- ಸಿ. ಎಸ್. ಸಿದ್ಧಲಿಂಗಯ್ಯನವರುM.Sc , B.Ed.,
5. ಚಂದಾ ವಸೂಲಿ ಸಮಿತಿ :- ಸದ್ಯಕ್ಕೆ ಚಂದಾ ವಸೂಲಿ ಇಲ್ಲದಿರುವದರಿಂದ ಈ ಸಾಲಿಗೆ ಕಾರ್ಯದರ್ಶಿ ಬೇಕಿಲ್ಲವೆಂದು ಸಭೆ ತೀರ್ಮಾನಿಸಿತು.
6. ಸುವರ್ಣ ಮಹೋತ್ಸವ ಸಮಿತಿ :- ಈ ಶಾಖೆಯ ಕಾರ್ಯದರ್ಶಿಯನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಸಭೆಯು ಕಾರ್ಯಕಾರಿ ಸಮಿತಿಗೆ ಕೊಟ್ಟಿತು. ಶ್ರೀ K. G. ರಂಗಯ್ಯ B.Sc., B.Ed., ರವರನ್ನು ಚುನಾಯಿಸಿತು.

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರುಗಳು

1. ಬಿ. ಟಿ. ರಂಗಧಾಮಯ್ಯನವರು
2. ಸಿ. ಎಸ್. ರಾಮದಾಸ್‌ರವರು B.A.,
3. ಜಿ. ಮಹಲಿಂಗಯ್ಯನವರು B.A., B.Ed.,
4. ಹೆಚ್. ಬಿ. ಬೈರೇಗೌಡರು B.A., B.Ed.,
6. ಹೆಚ್. ಎಸ್. ಸಿದ್ಧಲಿಂಗಯ್ಯನವರು B.Sc.,
6. ವಿ. ಪಿ. ಗಂಗಣ್ಣನವರು B.Sc., B.Ed.,
7. ಪಿ. ಎಸ್. ಪುಟ್ಟಶಂಕರಯ್ಯನವರು B.A.,
8. ಆರ್. ಶಿವಣ್ಣನವರು B.A., B.Ed.,
9. ವಿದ್ವಾನ್ ಬಿ. ಗಂಗಪ್ಪನವರು
10. ಎಸ್. ಸಿ. ಸಿದ್ಧಗಂಗಯ್ಯನವರು
11. ಕೆ. ಜಿ. ರಂಗಯ್ಯನವರು B.Sc., B.Ed.,
12. ಎಂ. ರೇಣುಕಾರಾಧ್ಯರು (ಮಾದೇನಹಳ್ಳಿ)

ಸಂಪಾದಕೀಯ

ಸಿದ್ಧಗಂಗಾ, ಈ ವರ್ಷದ ತನ್ನ ದ್ವಿತೀಯ ಸಂಚಿಕೆಯನ್ನು ಹೊರತರುವ ಶುಭಾವಸರದಲ್ಲಿ ನೂತನರಾಗಿ ಕರ್ನಾಟಕದ ಮುಖ್ಯಮಂತ್ರಿಗಳಾಗಿ ಆಯ್ಕೆಯಾಗಿರುವ ಶ್ರೀ ವೀರೇಂದ್ರ ಪಾಟೀಲ್‌ರವರನ್ನು, ಅವರ ಸಂಪುಟದ ಸದಸ್ಯವರ್ಗವನ್ನೂ ಅಭಿನಂದಿಸುತ್ತದೆಯಲ್ಲದೆ, ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ–ವಿಶಾಲ ಕಾರ್ಯಕ್ಷೇತ್ರವನ್ನು ಪ್ರವೇಶಿಸಿರುವ 'ಕರ್ನಾಟಕ ನಿರ್ಮಾತೃ' ಶ್ರೀ ಎಸ್. ನಿಜಲಿಂಗಪ್ಪನವರಿಗೆ ಹಾರ್ದಿಕವಾದ ಬೀಳ್ಕೊಡಿಗೆಯನ್ನು ನೀಡಬಯಸುತ್ತದೆ.

ಲೋಕಹಿತಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದು ಇತ್ತೀಚೆಗೆ ನಮ್ಮನ್ನಗಲಿದ ಸರ್ವಶ್ರೀ — ನೀಗ್ರೋ ಗಾಂಧಿ ಡಾ|| ಮಾರ್ಟಿನ್ ಲೂಥರ್ ಕಿಂಗ್, ಕನ್ನಡ ಕವಿ ಕಡೆಂಗೋಡ್ಲು ಶಂಕರ ಭಟ್ಟರು, ಮಾಜಿ ಸಚಿವ ಸಾಲಿ ಮರಿಯಪ್ಪ, ಮಾಜಿ ಆರ್ಚ್ ಬಿಷಪ್ ಡಾ|| ಪೋತಕಮುರಿ, ಸಂಗೀತರತ್ನ–ಬಡೇ ಗುಲಾಂ ಆಲಿಖಾನ್, ಖ್ಯಾತ ಕಲಾವಿದ ವೆಂಕಟಾಚಲಂ, ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಆರಾಧಕ ಗಂಗಾಧರ ದೇವರು, ಸೆನೇಟರ್ ರಾಬರ್ಟ್ ಕೆನಡಿ, ಸ್ಪೀಕರ್ ವೈಕುಂಠ ಬಾಳಿಗಾ ಮತ್ತು ಸಂಗೀತ ಕಲಾನಿಧಿ ಮಧುರೆ ಮಣಿ ಅಯ್ಯರ್ ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವುದರ ಮೂಲಕ ಸಂಪಾದಕ ಮಂಡಲಿ ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಈ ತ್ರೈಮಾಸಿಕ ಜನ್ಮತಾಳಿದಂದಿನಿಂದ ಈವರೆಗೆ ಸಂಪಾದಕರಾಗಿ ಪತ್ರಿಕೆಯ ಸರ್ವತೋಮುಖವಾದ ಅಭಿವೃದ್ಧಿಗೆ ದುಡಿದು ಇದೀಗ ನಿವೃತ್ತರಾಗಿರುವ ಸಂಗೀತ ವಿದ್ವಾನ್ ಶ್ರೀ ಟಿ. ವಿ. ಮುತ್ತಾಚಾರ್ಯ ಬಿ. ಎ., (ಆನರ್ಸ್) ಬಿ. ಇಡಿ-ಅವರಿಗೆ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುವುದಲ್ಲದೆ, ಇನ್ನು ಮುಂದೆಯೂ ಅವರ ವಿದ್ವತ್ಪೂರ್ಣ ಸಹಕಾರವನ್ನು ನಿರೀಕ್ಷಿಸುತ್ತೇವೆ.

ಕಳೆದ ಹನ್ನೆರಡು ತಿಂಗಳುಗಳಿಂದಲೂ ಶ್ರೀಕ್ಷೇತ್ರದಲ್ಲಿ ಅನುಭವಗೋಷ್ಠಿಗಳನ್ನು ಯಶಸ್ವಿಯಾಗಿ ನಡೆಸಿ, ಅಲ್ಲಿನ ಪಂಡಿತ-ವಿದ್ಯಾರ್ಥಿಗಳಿಗೂ ಆಸಕ್ತ ವಿದ್ವಾಂಸರಿಗೂ ಆ ಬಗೆಗೆ ಅಭಿರುಚಿ ಹೆಚ್ಚುವಂತೆ ಮಾಡಿದ 'ಸ್ಮೃತಿ ಸಮೀಕ್ಷಾ ಗೋಷ್ಠಿ'ಯ ಕಾರ್ಯ ಪ್ರಶಂಸನೀಯವೇ ಸರಿ. ಅದರ ಕಾರ್ಯಕರ್ತರ ಮಾರ್ಗದರ್ಶನವನ್ನು ಎಲ್ಲ ವಿದ್ವಾಂಸರೂ ಅನುಸರಿಸಿದರೆ, ಅನೇಕ ಸ್ಮೃತಿಗಳ ಸಮೀಕ್ಷೆ ಚೆನ್ನಾಗಿ ನಡೆದೀತೆಂದು ನಮ್ರಭಾವದಿಂದ ಆಶಿಸುತ್ತೇವೆ.

ಈ ಎಲ್ಲಕಾರ್ಯಗಳಿಗೂ ಮೂಲಭೂತ ಶಕ್ತಿ ನಮ್ಮ ಪೂಜ್ಯ "ಗುರುದೇವ"ರು. ಅವರ ಕೃಪಾಶೀರ್ವಾದ, ನಮ್ಮ ಕಾರ್ಯಗಳು ಇನ್ನೂ ಹೆಚ್ಚು ಶಕ್ತಿಯುತವಾಗಿ ಕೈಗೂಡಲು ಸದಾ ದಾರಿದೀಪವಾಗಲೆಂದು ಪ್ರಾರ್ಥಿಸುತ್ತೇವೆ.

ಶ್ರೀವಾಣಿ

" ವಿಧೇಯತೆ "



ಪ್ರಾಜ್ಞ ಪುರುಷರ ದಿವ್ಯ ಸಂದೇಶಗಳಿಗೆ, ಆಚರಿಸಲು ಯೋಗ್ಯವಾದ ಅಮರ ತತ್ವಗಳಿಗೆ, ಸುಧಾರಣೆಗಾಗಿ ಸ್ಥಾಪಿಸಲ್ಪಟ್ಟ ಸುವ್ಯವಸ್ಥೆಗಳಿಗೆ ಅಧೀನವಾಗಿ ಬಾಳಿ, ಅವುಗಳನ್ನಾಚರಿಸುವುದು ದಾಸ್ಯವೆಂಬುದು ಶುದ್ಧಾಂಗ ತಪ್ಪು ಭಾವನೆ. ಅದು ಸತ್ಯಕ್ಕೆ ನಿಲುಕದ ಮಾತು ತಂದೆ ತಾಯಂದಿರಿಗೆ, ಗುರು-ಹಿರಿಯರಿಗೆ. ಯುಗ ಪ್ರವರ್ತಕ ಮಹಾವ್ಯಕ್ತಿಗಳಿಗೆ ಅವರ ವಾಣಿಗಳಿಗೆ ಮಣಿದು ಬಾಳುವ ಬಾಳ್ವೆಯು ಜೀವನದ ಮುನ್ನಡೆಯ ಹೆಗ್ಗುರುತು. ವಿಧೇಯತೆಯು ಪ್ರಗತಿಪರ ಬಾಳ್ವೆಯ ಸಂಕೇತ.

ನಮ್ಮ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಆಂದೋಳನದ ಪ್ರಮುಖ ನಾಯಕರುಗಳು ಸನ್ನಿವೇಶವನ್ನು ವೀಕ್ಷಿಸಿ, ಪ್ರಚಾರಮಾಡಿ, ವಿದ್ಯಾರ್ಥಿಗಳಿಗೆ, ಸಹಾಯಕರಾಗಿ ಬಂದು ಸಹಕರಿಸಲು ಕರೆಯಿತ್ತರು. ಅಂತೆಯೇ ತರುಣ ಜನಾಂಗ ಸ್ಫೂರ್ತಿದಾಯಕವಾಗಿ ಮನಸ್ಪೂರ್ವಕವಾಗಿ ಮುನ್ನುಗ್ಗುವ ಮುಖಂಡರಾದರು. ಪ್ರಶಂಸಾರ್ಹವಾದ ವಿಷಯವೇ ಹೌದು. ನಾಯಕರ ಕರೆಗೆ ಓಗೊಟ್ಟರು. ಅವರಿಗೆ ವಿಧೇಯರಾಗಿಯೂ ನಡೆದರು. ಸ್ವಾತಂತ್ರ್ಯವೆಂಬ "ದಿವ್ಯರತ್ನ" ಸಂಪಾದನೆಯಲ್ಲಿ ಭಾಗಿಗಳಾದರು. ಅದೇ ವಿದ್ಯಾರ್ಥಿಗಳು ಇಂದಿನ ನಾಯಕರುಗಳ ಕರೆಗೂ ಓಗೊಟ್ಟು ಸನ್ನಿವೇಶಕ್ಕನುಗುಣವಾಗಿ ಮಾರ್ಪಾಡಾಗಬೇಕಾಗಿತ್ತು ; ರಾಷ್ಟ್ರಪ್ರಗತಿಯಲ್ಲಿ ಭಾಗಿಗಳಾಗಿ ದುಡಿಯುವ ಸಂಕಲ್ಪ ಮಾಡಬೇಕಿತ್ತು. ಆದರೆ, ಇಂದಿನ ತರುಣ ಜನಾಂಗ ಮುಷ್ಕರಗಳನ್ನು ಅಧಿಕ ಸಂಖ್ಯೆಯಲ್ಲಿ ಎಸಗುತ್ತಿದ್ದಾರೆ. ಕಾರಣ ದುರಭ್ಯಾಸಗಳು ಸುಲಭಗ್ರಾಹ್ಯವಾದುವು. ಆದೇ ಒಳ್ಳೆಯ ಅಭ್ಯಾಸಗಳು ಆಚರಿಸಲೂ ಅಸಾಧ್ಯವಾದುವು, ಗ್ರಹಿಸಲೂ ಕಠಿಣವಾದುವು. ಈ ಮನಸ್ಪ್ರವರ್ತನೆಗಳು ರಾಷ್ಟ್ರಪ್ರಗತಿಗೆ ಕುಂಠಿತವಾಗಿವೆ. ವಿದ್ಯಾರ್ಥಿಗಳು ವಿಧೇಯರಾಗಿ ಬಾಳುವುದು ದಾಸ್ಯತ್ವವೆಂದು ಭಾವಿಸುತ್ತಿದ್ದಾರೆ.

ಇದೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾವಿರಾರು ಭಾರತೀಯ ಯುವಕರೂ, ವೃದ್ಧರೂ, ಬಾಲರೂ. ನಾ ಮುಂದು ತಾ ಮುಂದು ಎಂದು ನುಗ್ಗಿ ಬಂದರು. ರಾಷ್ಟ್ರಸೇವೆಗಾಗಿ ಕಂಕಣಬದ್ಧರಾದರು. ಮನೆಗಳನ್ನು ಮರೆತರು. ಸ್ವಂತ ಮನೆಗಳ ಕಡೆ ಮಡದಿ ಮಕ್ಕಳ ಕಡೆ ಅವರ ಮನಸ್ಸಿನಲ್ಲಿ ಆಲೋಚಿಸಲೂ ಎಡೆಯಿರಲಿಲ್ಲ. ರಾಷ್ಟ್ರಕವಿ ರವೀಂದ್ರರು ಎಲ್ಲವನ್ನೂ ನೋಡಿ, ಆನಾಕ್ರಾಂದರು. ದಿಗ್ಭ್ರಮೆಗೊಂಡರು. ಅವರಿಗಾಗಿ, ಅವರ ಮನೆ ಮಠಗಳಿಗಾಗಿ ಮರುಗಿದರು. ಭವಿಷ್ಯದ ಬಗ್ಗೆ ಚಿಂತಿಸಿದರು. ಎಷ್ಟಾದರೂ ಕವಿಗಳಲ್ಲವೇ ? ಅಂದಿನ ಆ ಅನುಭವವು ಮರುದಿನವೇ ಕಾವ್ಯವಾಗಿ ಹೊರಬಂದಿತು. "The Home and the world" ಎಂಬ ಗ್ರಂಥ ಪ್ರಕಟವಾಯಿತು ಅದರಲ್ಲಿ ದೇಶ ಸೇವಾ ನಿರತರಾಗಿ ಬರುವ ಜನ ಮನೆಗಳನ್ನು ತೊರೆದು ಬರುವುದು ವಿನಾಶಕಾರಿ ! ಕಾರಣ ಮನೆಗಳ ಸಮುದಾಯವೇ ಹಳ್ಳಿ. ಹಳ್ಳಿಗಳ ಸಮುದಾಯವೇ ರಾಷ್ಟ್ರ. ಮನೆಗಳ ಏಳಿಗೆಯೇ ಹಳ್ಳಿಗಳ ಏಳಿಗೆ, ರಾಷ್ಟ್ರದ ಏಳಿಗೆ. ಮನುಷ್ಯ ಶರೀರದ ಅಂಗಾಂಗಗಳಲ್ಲಿ ಯಾವುದಾದರೂ ಒಂದು ಅಪಾಯಕ್ಕೀಡಾದರೆ ಅವನ ದೇಹಕ್ಕೆಲ್ಲಾ ಬಾಧೆಯಾಗಿ

ಕೆಲಸಕಾರ್ಯಗಳು ಕುಂಠಿತವಾಗುವಂತೆ ಪ್ರತಿಯೊಂದು ಮನೆಯ ವಿನಾಶವೂ ರಾಷ್ಟ್ರದ ಪ್ರಗತಿಗೆ ಧಕ್ಕೆ. ಆ ಕಾರಣದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಗಳಾಗುವ ಜನ ಮನೆಗಳನ್ನು ಮರೆಯಬಾರದು. ಮುಂದೆ ಮರುಗಬೇಕಾಗುತ್ತದೆ" ಎಂದು ಘೋಷಿಸಿದ್ದರು. ಪುಸ್ತಕ ಸಹೃದಯರ ಕೈ ತಲುಪಿತು. ಓದಿದ ಜನತೆ ಕೆರಳಿತು ಕೋಪದ ಕಿಡಿಗಳನ್ನೇ ಕಾರಿತು. ರಾಷ್ಟ್ರಕವಿ ರವೀಂದ್ರರನ್ನು "ರಾಷ್ಟ್ರದ್ರೋಹಿ" ಎಂದು ಘೋಷಿಸಿತು. ಅವರನ್ನು ಹೀನಾಯವಾಗಿ ಜರೆಯಿತು. ಟೀಕೆಗಳ ಸುರಿಮಳೆಯೇ ಆಯಿತು ರವೀಂದ್ರರು ವಿಚಾರವಂತರು ಅವು ಮೂಡುವವರೆಗೆ ಆತುರಪಡಲಿಲ್ಲ. ಧೈರ್ಯವನ್ನೂ ಬಿಡಲಿಲ್ಲ.


ಹಲವಾರು ದಿನ ಸಂಗ್ರಾಮ ಬಿರುಸಾಗಿ ನಡೆಯಿತು. ಜನ ತಮ್ಮ ಮನಸಪಣಿಸಿ ಹೋರಾಡಿದರು. ಸಂಗ್ರಾಮ ಮುಂದುವರಿಯುತ್ತಲೇ ಇತ್ತು. ಮನೆಮಠಗಳು ದಿನೇ ದಿನೇ ಒಂದೊಂದಾಗಿ ವಿನಾಶದ ಹಾದಿಯನ್ನು ಹಿಡಿದುವು. ಕ್ರಮೇಣ ಎಲ್ಲಾ ಮನೆಗಳೂ ಪಾಳು ಬಿದ್ದವು. ಅವರಿಗೆ, ಅವರ ಹೆಂಡತಿ ಮಕ್ಕಳಿಗೆ ತಿನ್ನಲು ಅನ್ನವಿಲ್ಲದಾಯಿತು. ನಿಲ್ಲುವ ನೆಲೆಗಳೂ ಶ್ಮಶಾನ ಸದೃಶವಾದುವು, ಉಡುವ ಬಟ್ಟೆಗೂ ತೊಂದರೆಯಾಯಿತು. ಬೀದಿಯ ಭಿಕಾರಿಗಳಾದರು. ಆ ಜೀವನದಲ್ಲಿ ಬೇಸರವುಂಟಾಯಿತು. ಸಕಲವೂ ಬೇಡವೆನಿಸಿತು. ಆಗ ರವೀಂದ್ರರ ಹಿತೋಕ್ತಿಗಳ ಮಾಹಾತ್ಮ್ಯದ ಅರಿವಾಯಿತು. ಆ ಮಹಾತ್ಮನನ್ನು ಜನ ಸನ್ಮಾನಿಸಿ ಸತ್ಕರಿಸಿದರು. ಗೈದ ಅಪರಾಧಕ್ಕೆ ಕ್ಷಮೆ ಯಾಚಿಸಿದರು. ರಾಷ್ಟ್ರಕವಿಯನ್ನು "ರಾಷ್ಟ್ರದ ಹಿತಾಕಾಂಕ್ಷಿ" ಎಂದು ಬಾಯಾರ ಹೊಗಳಿದರು.

ಅವಕಾರಣ ಸನ್ನಿವೇಶಕ್ಕನುಗುಣವಾಗಿ ಸಮಾಲೋಚಿಸಿ ಉದಾತ್ತ ಬೋಧನೆಗಳಿಗೆ ವಿಧೇಯರಾಗಿರುವುದು ಔಚಿತ್ಯ ಪೂರ್ಣವಾದುದು. ವಿಧೇಯತೆಯೆಂಬುದೊಂದು ಮಹಾತತ್ತ್ವ; ಸಜ್ಜನಿಕೆಯ ಸಂಕೇತ ಉಲ್ಲೇಖನೀಯ ಸುಗುಣವದು. ಒಂದು ಪವಿತ್ರ ವಸ್ತು. ಅದನ್ನು ದಾಸ್ಯ (ತ್ವ) ವೆನ್ನುವುದು ಶತಾಪರಾಧ.

(ಪೂಜ್ಯಪಾದರು ದಿನಾಂಕ ೧೦-೭-೧೯೬೭ ರ ಸಂಜೆ ಪ್ರಾರ್ಥನಾಸಭೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಿದ ಹಿತನುಡಿಗಳ ಸಾರ)



ಶ್ರೀ ಗಂಗಾಧರ ದೇವರು



"ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಎಂಬ ವಾಣಿಯನ್ನು ಸಾರ್ಥಕಗೊಳಿಸಿದ ಮಹಾನುಭಾವರು ನಮ್ಮ ಸಮಕಾಲೀನರಾಗಿದ್ದರು – ಎಂದು ನಾವು ಹೆಮ್ಮೆ ಪಟ್ಟುಕೊಳ್ಳುವಂತೆ ಬಾಳಿದವರು (ಶ್ರೀ ಸಿದ್ಧಗಂಗೆ) ಬೆಟ್ಟದ ಮೇಲಿನ ಗಂಗಾಧರ ದೇವರು. ಪ್ರಸಂಗಾವಧಾನವನ್ನರಿಯದೆ ಸುಮ್ಮನೆ ಗಳಪುವ ವ್ಯಕ್ತಿಯನ್ನು ಕುರಿತು "ಕೊಂಚ ದೇವರಾಗಿ" ಎಂದು ಹೇಳಿ ಸುಮ್ಮನಿರಿಸುವ ಪರಿಪಾಠಿಯುಂಟು. ಇವರಾದರೋ ಸದಾ 'ದೇವರು' ಆಗಿರುತ್ತಿದ್ದರು. ಆತ್ಮೀಯರೊಂದಿಗೆ ಮಾತ್ರ ಮನ ಬಿಚ್ಚಿ ಮಾತನಾಡುತ್ತಿದ್ದರು. 'ಹಳ್ಳಿ-ದಿಳ್ಳಿ' ಎಂಬ ಭೇದವಿಲ್ಲದೆ ಎಂತಹವರು ತಮ್ಮ ಕಷ್ಟವನ್ನು ಹೇಳಿಕೊಂಡರೂ ಕೇಳಿ, ಅವರಿಗೆ ಕೈಲಾದ ನೆರವನ್ನು —ವಿಶೇಷವಾಗಿ ಜ್ಯೋತಿಷ್ಯ ಹೇಳುವದರ ಮೂಲಕ—ನೀಡುತ್ತಿದ್ದರು.

ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಗುಂಡೇಗಾಲ ಇವರ ಜನ್ಮಸ್ಥಳ. ತಂದೆ-ಭೋಗಪ್ಪ ಶಾಸ್ತ್ರಿಗಳೆಂಬ ಶಿವಕಥಾ ವಿದ್ವಾಂಸರು ತಾಯಿ

ಜಪನಮ್ಮನವರು. ಈ ಪುಣ್ಯದಂಪತಿಗಳಿಗೆ ಮೂರನೆಯ ಮಗುವಾಗಿ ಕ್ರಿ.ಶ. 1903 ನೆಯ ಇಸವಿಯಲ್ಲಿ ಜನಿಸಿದರು ಗಂಗಾಧರ ದೇವರು.

ತಮ್ಮ 20ನೆಯ ವಯಸ್ಸಿನಲ್ಲಿ ಅಂದರೆ 1923 ನೆಯ ಇಸವಿಯಲ್ಲಿ ಶ್ರೀ ಕ್ಷೇತ್ರಕ್ಕೆ ಆಗಮಿಸಿದ ಇವರನ್ನು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯು ಆಕರ್ಷಿಸಿ ತನ ಸೇವೆಗೆ ಇರಿಸಿಕೊಂಡದ್ದು ಪೂರ್ವಸುಕೃ ಸರಿ. ಬಾಲ್ಯದಿಂದಲೂ ಜ್ಯೋತಿಷ್ಯ ಶಾಸ್ತ್ರಾಭ್ಯಾಸ ನಡೆಸಿದ ಇವರು ಮಠದಲ್ಲಿ ಸಂಸ್ಕೃತ ರಗತಿ ರೆ ಸೇರಿ 'ಕಾವ್ಯ' ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಅಲ್ಲಿಂದ ಮುಂದೆ ಸ್ವಾಮಿಯ ಆರಾಧನೆಗೇ ತನ್ನ ಜೀವನವನ್ನು ಮುಡುಪಾಗಿರಿಸಿದರು.

ಅವರೇ ಒಮ್ಮೆ ಈ ರೀತಿ ಹೇಳಿದ್ದುಂಟು "ನಾನು ಊರಿಗೆ ಹೋದರೆ ಖಾಯಿಲೆ ಬರುತ್ತಿದ್ದಿತು ; ಸ್ವಾಮಿ ಸನ್ನಿಧಿಗೆ ಬಂದರೆ ಹಾಯಾಗಿರುತ್ತಿದ್ದೆ. ಇಂತಹ ಮೂರ್ತಿಯನ್ನಾಗಲಿ, ಮಹಿಮೆಯನ್ನಾಗಲಿ ನಾವು ಮತ್ತೆ ಕಾಣಲಾರೆವು."

ಅಖಂಡ ಬ್ರಹ್ಮಚರ್ಯದಿಂದ ಪರಿಶೋಭಿಸಿದ ಈ ಮಹಾವ್ಯಕ್ತಿ ಶ್ರೀ ಸಿದ್ಧಲಿಂಗೇಶ್ವರನಲ್ಲಿ ಎಷ್ಟು ಭಕ್ತಿಯನ್ನಿಟ್ಟದ್ದರೊ ಕ್ಷೇತ್ರಾಧ್ಯಕ್ಷರಾದ 'ಗುರದೇವ' ರಲ್ಲಿಯೂ ಅಷ್ಟೇ ನಿಷ್ಠೆಯುಳ್ಳವರಾಗಿದ್ದರು. ನಲವತ್ತೈದು ವರ್ಷಗಳ ಅನುಪಮ ಸೇವೆಗೈದು ದಿನಾಂಕ 31-3-68 ನೆಯ ಭಾನುವಾರ ಬೆಳಗಿನ ಝಾವ 4-10ರಲ್ಲಿ ಲಿಂಗೈಕ್ಯರಾದರು.

"ಕನಕವ ಕಲ್ - ಮಣ್ಣಿಗಣೆಯಾಗಿ ಕಾಣ್ಬನೆ ದೇವರ ದೇವ"ಎಂಬ ಶ್ರೀ ಸರ್ಪಭೂಷಣ ಶಿವಯೋಗಿಗಳ ನುಡಿಯನ್ನು ನಡೆಯಲ್ಲಿ ತಂದು ತೋರಿದ-ಈ ಮಹನೀಯರ ಆತ್ಮಕ್ಕೆ ಚಿರಶಾಂತಿಕೋರಿ, ನಮ್ಮ ಹೃತ್ಪೂರ್ವಕ ಬಾಷ್ಪಾಂಜಲಿಯನ್ನು ಅರ್ಪಿಸುತ್ತೇವೆ

—"ಕೆ. ಪಿ. ತಿ."

Ref. No.....................

ಗುರುಕುಲಾಶ್ರಮವೂ, ಬೃಹತ್ ವಿದ್ಯಾಸಂಸ್ಥೆಗಳನ್ನೊಳಗೊಂಡ
ಜ್ಞಾನಪೀಠವೂ, ಪುಣ್ಯಕ್ಷೇತ್ರವೂ ಆದ ಶ್ರೀ ಸಿದ್ಧಗಂಗಾ ಕ್ಷೇತ್ರದಿಂದ

ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರ

ಕೃಪಾಶ್ರಯದಲ್ಲಿ

'ಸಿದ್ಧಗಂಗಾ'

ಎಂಬ ತ್ರೈಮಾಸಿಕ ಪತ್ರಿಕೆ ಪ್ರಕಟವಾಗುತ್ತಿದ್ದು ನಾಲ್ಕನೆಯ ವರ್ಷಕ್ಕೆ ಅಡಿ ಇಟ್ಟಿರುವ ಸಂತೋಷಪ್ರದ ಸಂಗತಿಯನ್ನು ತಿಳಿಸಲು ನಮಗೆ ಅತೀವ ಹೆಮ್ಮೆಯಾಗುತ್ತಿದೆ.

ಆದ್ದರಿಂದ ತಾವು ಈ ಪತ್ರಿಕೆಯ ಸರ್ವತೋಮುಖವಾದ ಅಭಿವೃದ್ಧಿಗೆ ಚಂದಾದಾರರಾಗುವ ಮೂಲಕ ಆರ್ಥಿಕ ಸಹಾಯನೀಡಿ ಪ್ರೋತ್ಸಾಹಿಸಲು ಪ್ರಾರ್ಥಿಸುತ್ತೇವೆ.

ನಮ್ಮ ಸರ್ಕಾರದ ವಿದ್ಯಾ ಇಲಾಖೆಯ ಮಾನ್ಯ ಡೈರೆಕ್ಟರ್ ಅವರು CL417–4/65-66 [29-4-66] ಮೂಲಕ ಪ್ರಾಥಮಿಕಶಾಲೆ, ಪ್ರೌಢಶಾಲೆ, ಶಿಕ್ಷಣಶಾಲೆ ಹಾಗೂ ಸಾರ್ವಜನಿಕ ಗ್ರಂಥ-ಭಂಡಾರಗಳು ಈ ಪತ್ರಿಕೆಯನ್ನು ಕೊಂಡುಕೊಳ್ಳಬಹುದೆಂದು ಆಜ್ಞೆ ಹೊರಡಿಸಿರುವರು.

ವಾರ್ಷಿಕ ಚಂದಾ : ರೂ. 6·00. (ಅಂಚೆ ವೆಚ್ಚ ಸೇರಿ)

ಪ್ರಕಾಶಕರು,

ಹಳೆಯ ವಿದ್ಯಾರ್ಥಿ ಸಂಘ,

ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು ಜಿಲ್ಲೆ

॥ ಓಂ ॥

ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಪರಮಪೂಜ್ಯ ಮಹಾಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ

ಸತ್ಕೃತಿ ಸಮೀಕ್ಷಾ ಗೋಷ್ಠಿ

ಯವರು 1967ನೆಯ ಜುಲೈ ತಿಂಗಳಿನಿಂದ 1968ನೆಯ ಜೂನ್ ಮಾಹೆ ಪೂರ್ತಾ ನಡೆಸಿದ ಸಮೀಕ್ಷೆಗಳ ವಿವರ:-

ದಿನಾಂಕ	ಗ್ರಂಥ ಯಾ ವಿಷಯ	ಉಪನ್ಯಾಸಕರು
		ಸರ್ವಶ್ರೀ—
2—7—1967	ಹರಿಹರನ 'ಗಿರಿಜಾಕಲ್ಯಾಣ'	ಪಂಡಿತ ಹೆಚ್. ಎಮ್. ರಾಮಾರಾಧ್ಯ (ವಾಗೀಶ)
6—8—1967	ಭೀಮಕವಿಯ 'ಬಸವ ಪುರಾಣ'	ಬಿ. ಶ್ರೀ. ಪಾಂಡುರಂಗರಾವ್ ಮತ್ತು ಶ್ರೀಮತಿ ಶಕುಂತಳಾಬಾಯಿ
3—9—1967	(i) ಪ್ರಭುದೇವರ ವೈಚಾರಿಕ ಕ್ರಾಂತಿ (ii) ಗುಬ್ಬಿ ಮಲ್ಲಣಾರ್ಯರ 'ಭಾವಚಿಂತಾರತ್ನ'	(i) ಪಂಡಿತ ಚ. ಮು. ಎರೇಸೀಮೆ (ii) ಎಂ.ಜಿ. ನಾಗರಾಜ ಎಂ.ಎಸ್.ಸಿ., ಬಿ.ಇಡಿ.
1—10—1967	(i) ಬಸವ ಬಿನ್ನಪ (ii) ತಿರುನೀಲಕಂಠ-ರಗಳೆ	ವಚನಶಾಸ್ತ್ರಾಚಾರ್ಯ (i) ಜೀರಗೆ ಕಟ್ಟಿಬಸವಪ್ಪ ಬಿ.ಎ., ಸಂಗೀತ ವಿದ್ವಾನ್ ಟಿ.ವಿ.ಮುತ್ತಾಚಾರ್ಯ ಬಿ.ಎ.,(ಆನರ್ಸ್) ಬಿ.ಇಡಿ.
5—11—1967	ಷಡಕ್ಷರಕವಿಯ 'ರಾಜಶೇಖರ ವಿಳಾಸ'	ಪ್ರವಚನ ಪ್ರವೀಣ ಟಿ. ಎನ್. ಚನ್ನಪ್ಪ
3—12—1967	ಹರಿಹರಕವಿಯ 'ಬಸವರಾಜದೇವರ ರಗಳೆ'	ಡಾ॥ ಜಿ.ಎಸ್.ಶಿವರುದ್ರಪ್ಪ ಎಂ.ಎ., ಪಿಹೆಚ್.ಡಿ.
7—1—1968	(i) ರಾಘವಾಂಕ ಪಂಡಿತನ 'ಹರಿಶ್ಚಂದ್ರಕಾವ್ಯ' (ii) ಸರ್ಪಭೂಷಣರ 'ಜ್ಞಾನ ಶತಕ'	(i) ಎಸ್. ಆರ್ ಮಳಗಿ ಎಂ.ಎ., ಬಿ.ಟಿ. (ii) ವಿದ್ವಾನ್ ಎಸ್. ವಿ. ಶಾಮಭಟ್ಟ
4—2—1968	ಪದ್ಮಣಾಂಕ ವಿರಚಿತ 'ಪದ್ಮರಾಜ ಪುರಾಣ'	ಜಿ. ವಿ. ನಾರಾಯಣಮೂರ್ತಿ ಬಿ.ಎ.,
10—3—1968	ನೀಲಾಂಬಿಕೆಯ ವಚನಗಳು	ಸಿ. ಕೆ ಪರಶುರಾಮಯ್ಯ ಎಂ.ಎ.,
7—4—1968	ಕೃತಜ್ಞತೆ ಮತ್ತು ವಿವೇಕಪ್ರಜ್ಞೆ	ದ.ರಾ.ಬೇಂದ್ರೆ ಎಂ.ಎ., (ಅಂಬಿಕಾತನಯದತ್ತ)
5—5—1968	ಸೋಮೇಶ್ವರ ಶತಕ	ಕೆ. ಜಿ. ನಾಗರಾಜಪ್ಪ ಎಂ.ಎ.,
9—6—1968	ಸಿದ್ಧರಾಮೇಶ್ವರ ವಿರಚಿತ ಸಾಹಿತ್ಯ	ಪಂಡಿತ ಕೆ. ಪಿ. ಶಿವಲಿಂಗಯ್ಯ ಬಿ.ಎ., (ಪುಲಿಕೇಶಿ)

ಮೇಲ್ಕಂಡಂತೆ 12 ತಿಂಗಳ ಕಾರ್ಯಕ್ರಮಗಳಲ್ಲಿ 14 ಸಾಹಿತ್ಯ-ಕೃತಿಗಳ ಸಮೀಕ್ಷೆ ನಡಸಿದ್ದಲ್ಲದೆ, ಒಂದು ಉಪನ್ಯಾಸವನ್ನೂ ಏರ್ಪಡಿಸಲಾಗಿದ್ದಿತು. ಮೊದಲೇ ಪ್ರಕಟಿಸಿದ್ದಂತೆ ಎಲ್ಲ ಸಮೀಕ್ಷೆಗಳನ್ನೂ ಕುರಿತು ದಿನಾಂಕ 10-6-1968। ರಂದು ಸ್ಪರ್ಧಾ-ಪರೀಕ್ಷೆಯನ್ನು ನಡೆಸಲಾಯಿತು.

ತಾ॥ 30-6-68ನೆಯ ಭಾನುವಾರ ಮಧ್ಯಾಹ್ನ 3-30ಕ್ಕೆ ಗೋಷ್ಠಿಯ ಸಮಾರೋಪ ಭಾಷಣವನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಡಾ॥ ರಂ. ಶ್ರೀ. ಮುಗಳಿಯವರು ಮಾಡುವರು. ಪೂಜ್ಯ ಶ್ರೀ 'ಗುರುದೇವ'ರು ಬಹುಮಾನ ವಿತರಣೆ ಮಾಡಲಿದ್ದು ಅನುಗ್ರಹ ಭಾಷಣವನ್ನು ದಯಪಾಲಿಸುವರು.

ಈ ಸತ್ಕಾರ್ಯದಲ್ಲಿ ಪ್ರತ್ಯಕ್ಷ—ಪರೋಕ್ಷವಾಗಿ ಪಾಲ್ಗೊಂಡ ಸರ್ವರಿಗೂ ಗೋಷ್ಠಿ ಆಭಾರಿಯಾಗಿರುತ್ತದೆಯಲ್ಲದೆ, ಈ ರೀತಿ ಅನುಭವ-ಮಂಟಪ ನಡೆಯಲು ಅವಕಾಶವಿತ್ತು, ಆಶೀರ್ವದಿಸಿ ನಿರಂತರ ಪ್ರೋತ್ಸಾಹಿಸುತ್ತಿರುವ ಪೂಜ್ಯ 'ಗುರುದೇವ'ರ ದಿವ್ಯ—ಸನ್ನಿಧಿಯಲ್ಲಿ ಕೃತಜ್ಞತಾಪೂರ್ವಕವಾದ ಸಾಷ್ಟಾಂಗ ಪ್ರಣಾಮಗಳನ್ನರ್ಪಿಸುತ್ತದೆ.

ಇದೇ ರೀತಿ ಇನ್ನು ಮುಂದೆಯೂ ಇದರಲ್ಲಿ ಪಾಲ್ಗೊಂಡು ಪ್ರೋತ್ಸಾಹಿಸಬೇಕಲ್ಲದೆ, ಗೋಷ್ಠಿಯ ಪೂರ್ಣ ಪ್ರಯೋಜನವು ಎಲ್ಲರಿಗೂ ಒದಗುವಂತೆ ಸಹಕರಿಸಬೇಕಾಗಿ ಪ್ರಾರ್ಥನೆ.

ತಾ॥ 20—6—68
ವಿಳಾಸ
ಸತ್ಕೃತಿ ಸಮೀಕ್ಷಾ ಗೋಷ್ಠಿ
"ವಾಗ್ವಿಲಾಸ" 2317 ಎ II ಸ್ಟೇಜ್
ರಾಜಾಜಿ ನಗರ, ಬೆಂಗಳೂರು-10

ಬಿ. ಎಸ್. ಶಿವಶಂಕರ್
ಗೋಷ್ಠಿಯ ಪರವಾಗಿ

ಸಂಸಾರ ವಿಷವೃಕ್ಷಸ್ಯ ದ್ವೇಫಲೇಹ್ಯಮೃತೋಪಮೇ ।
ಕಾವ್ಯಾಮೃತ ರಸಾಸ್ವಾದಃ ಸಂಗಮಃ ಸಜ್ಜನೈಸ್ಸಹ ॥

ಐತಿಹಾಸಿಕ ಕಾದಂಬರಿಗಳು

—ಹಂಪ ನಾಗರಾಜಯ್ಯ

ಹಿಂದಿನ ಲೇಖನದಲ್ಲಿ ಕಾದಂಬರಿಯ ಬೆಳವಣಿಗೆಯ ಇತಿಹಾಸವನ್ನು ನೋಡಿದೆವು. ಕಾದಂಬರಿಯ ಪ್ರಭೇದಗಳಲ್ಲಿ ಒಂದಾದ ಐತಿಹಾಸಿಕ ಕಾದಂಬರಿಗಳನ್ನು ಕುರಿತು ಈ ಲೇಖನದಲ್ಲಿ ಕೆಲವು ವಿಚಾರಗಳನ್ನು ಪ್ರತಿಪಾದಿಸಲಾಗುವುದು. ಇತಿಹಾಸದ ಗಣಿಯಲ್ಲಿ ನಿಕ್ಷಿಪ್ತವಾದ ಚಾರಿತ್ರಿಕ ವಸ್ತುವನ್ನು ಕಾದಂಬರಿಗೆ ಅಳವಡಿಸುವಾಗ ಕಾದಂಬರಿಕಾರ ಹಲವು ವಿಧಾನಗಳನ್ನು ಅನುಸರಿಸುತ್ತಾನೆ. ಇದರಲ್ಲಿ ಕಾದಂಬರಿಕಾರ ತುಂಬ ಜಾಗರೂಕನಾಗಿರಬೇಕು. ವಾಸ್ತವವಾಗಿ ಸಾಮಾಜಿಕ ಅಥವಾ ಪತ್ತೇದಾರಿ ಇಲ್ಲವೇ ಪೌರಾಣಿಕ ಕಾದಂಬರಿಕಾರನಿಗಿಂತಲೂ ಐತಿಹಾಸಿಕ ಕಾದಂಬರಿಕಾರನ ಜವಾಬ್ದಾರಿ ಹೆಚ್ಚು ಗುರುತರವಾದುದು. ಆತನ ವ್ಯಸನಗಳೆಲ್ಲ ಕಣ್ಣಾಗಿ ಹತ್ತೂಕಡೆ ಗಮನಿಸುತ್ತಿರಬೇಕಾಗುತ್ತದೆ. ಆತನ ದೃಷ್ಟಿಯೆಲ್ಲ ಯಾವ ಒಂದು ಅಂಶದಲ್ಲೆ ಆಗಲಿ ಒಂದೇ ಕಡೆ ಕೇಂದ್ರೀಕೃತವಾಯಿತೆಂದರೆ ಉಳಿದ ಕಡೆ ಎಡವಿಬಿದ್ದು ಮುಗ್ಗರಿಸುವ ಸಂಭವವಿದೆ.

ಆದುದರಿಂದ ಚಾರಿತ್ರಿಕ ಕಾದಂಬರಿ ಯಾವ ಏರುಪೇರುಗಳಿಗೂ ಅತಿಯಾದ ಅವಕಾಶವಿಲ್ಲದೆ ಸಮತೋಲನ (balance) ಸ್ಥಾಪಿತವಾಗಬೇಕಾದರೆ ಕಾದಂಬರಿಕಾರನಿಗೆ ಎಲ್ಲ ಅವಧಾನವೂ ಅಗತ್ಯ. ಅವನು ಬರೆಯುವ ಇತಿಹಾಸ ಸಂಬಂಧ ಕಾದಂಬರಿಗಳಲ್ಲಿ ದೇಶಕಾಲವಿರುದ್ಧವಾದ (anachronisms) ಅಂಶಗಳಾಗಲಿ, ಚರಿತ್ರೆಯಲ್ಲಿರುವ ವಿವರಗಳನ್ನು ತಪ್ಪುತಪ್ಪಾಗಿ ಸೇರಿಸಿ (napotisms) ಕಲಸುಮೇಲೋಗರ ಮಾಡುವುದಾಗಲಿ ಆಗಕೂಡದು. ಅದರಲ್ಲಿ ನ್ಯಾಯವಿರುದ್ಧ, ದೇಶರುದ್ಧ, ಸಮಯವಿರುದ್ಧ, ಕಲಾವಿರುದ್ಧ, ಕಾಲವಿರುದ್ಧ, ಲೋಕವಿರುದ್ಧವಾದ ಯಾವ ವಿವರಣೆಯೂ ಬರಕೂಡದು. ನಿರೂಪಣೆಯಲ್ಲಿ ಗೌರವದೋಷ ಇಲ್ಲವೇ ವಚನದೋಷ ಆಗಬಾರದು. ಆದುದರಿಂದ ಐತಿಹಾಸಿಕ ಕಾದಂಬರಿ ಒಂದು ಅಸಿಧಾರಾವ್ರತದಂತೆ ಕಷ್ಟಸಾಧ್ಯವಾದ ಕಾರ್ಯ. ಈ ಇಕ್ಕಟ್ಟಾದ ಕಣಿವೆಯಲ್ಲಿ ನಡೆಯುವಾಗ ಕಾದಂಬರಿಕಾರ ಒಮ್ಮೆ ಎಚ್ಚರ ತಪ್ಪಿ ಅಲ್ಪಸ್ವಲ್ಪ ಅಲುಗಿದರೂ ಪತನವೇ ಪರಿಣಾಮ.

ಚಾರಿತ್ರಿಕ ಕಾದಂಬರಿಕಾರನ ಕೆಲಸ ಕೇವಲ ವೀರಪೂಜೆ (hero worship) ಆಗಲಿ, ನೀರಸವಾದ ದರಬಾರೀ ವಿವರಣೆಯ ಚರಿತ್ರಕಾರನ ಕೆಲಸವಾಗಲೀ ಅಲ್ಲ. ಚಾರಿತ್ರಿಕ ಕಾದಂಬರಿಕಾರ, ಚರಿತ್ರಕಾರನ ಹೆಗಲಮೇಲೆ ನಿಂತು, ಅದರಿಂದಾಗಿ ಅವನಿಗಿಂತಲೂ ದೊಡ್ಡವನಾಗಿ ಕಾಣಿಸುತ್ತಾನೆ. ಐತಿಹಾಸಿಕ ಕಾದಂಬರಿಕಾರನ ಮೊಟ್ಟಮೊದಲನೆಯ ಮುಖ್ಯಕೆಲಸವೆಂದರೆ ಆತ ತನ್ನ ಕೃತಿಯಲ್ಲಿ ಪ್ರಧಾನವಾದ ಪಾತ್ರಗಳ ಹಾಗೂ ಅದರಲ್ಲಿ ಬರುವ ಅನೇಕಾನೇಕ ಸನ್ನಿವೇಶಗಳ ಮೂಲಕ ಒಂದು ವಿಶಿಷ್ಟ ಯುಗದ-ಪ್ರಾಚೀನ (ಆ ಕಾಲದ) ಸಮಾಜದ ಜನತೆಯನ್ನೂ ಜನಜೀವನವನ್ನೂ ಜನರ ಚಿತ್ತವೃತ್ತಿಯನ್ನೂ ಸಮಗ್ರವಾಗಿ ಸಮರ್ಪಕವಾಗಿ ಚಿತ್ರಿಸುವುದು. ಈ ಕಾರಣಕ್ಕಾಗಿ ಪರಿಣತನಾದ ಪಳಗಿದ ಚಾರಿತ್ರಿಕ

ಕಾದಂಬರಿಕಾರ ಇತಿಹಾಸ ನಿಕ್ಷಿಪ್ತ ನೀರಸ ಇಲ್ಲವೇ ಆಸ್ವಾದು ಅರೋಚಕ ವಸ್ತುವನ್ನು ಆರಿಸಿಕೊಂಡು ಅನಂತರ ಅದನ್ನು ತನ್ನ ಅಸಾಧಾರಣ ಕಲ್ಪನೆಯ ಕುಂಚ ದಿಂದ ರಂಜಿತಗೊಳಿಸುವನು. ಇದರಿಂದಾಗಿ ಸಾಮಾನ್ಯ ವಾಗಿದ್ದುದು ಒಮ್ಮೆಲೇ ರಮ್ಯತೆಪಡೆದು ಓದುಗರಿಗೆ ತುಂಬ ಆಸ್ವಾದ್ಯವಾಗುತ್ತದೆ. ನಿಜವಾಗಿಯೂ ಇದನ್ನು ಒಂದು ಅದ್ಭುತ ಪವಾಡವೆನ್ನಬಹುದು. ಕಸವನ್ನು ರಸ ವನ್ನಾಗಿ ಮಾಡುವ ಕಾವ್ಯಕ್ರಿಯೆಗೆ ಸಮಾನವಾದುದು, ಕವಿಕಾರ್ಯಕ್ಕೆ ಸದೃಶವಾದುದು ಐತಿಹಾಸಿಕ ಕಾದಂ ಬರಿಯ ಕ್ರಿಯೆ.

ಆದರೆ ಇಲ್ಲಿ ಮತ್ತೊಂದು ಮುಖ್ಯವಾದ ಎಚ್ಚರಿ ಕೆಯ ಮಾತಿದೆ. ಎಷ್ಟೇ ಶ್ರೇಷ್ಠ ಕಾದಂಬರಿಕಾರನಾದರೂ ಎಡವಬಹುದಾದ ಸಂಭವ ಈ ಕ್ರಿಯೆಯಲ್ಲಿರುತ್ತದೆ. ಆತನಿಗೆ ಸತ್ಯ ಇಲ್ಲವೆ ವಸ್ತುಸ್ಥಿತಿ ಮತ್ತು ಕಲ್ಪನೆಗಳ ಸಮ ಪಾಕ ಸಂಮಿಶ್ರಣದಲ್ಲಿಯೂ ಸಮತೋಲನದ ಪ್ರಮಾಣ ಜ್ಞಾನ (sense of propriety) ಬಹಳ ಇರ ಬೇಕು. ಇದೊಂದು ಇಬ್ಬಗೆಯ ಅಲಗಿನಂತೆ. ಕಲ್ಪನೆ ಯೊಂದೇ ಕುಡಿಯಿಡಲು ಬಿಡಬಾರದು. ಹಾಗೆಯೇ ಕೇವಲ ಚರಿತ್ರೆಯ ವಾರ್ತೆಯನ್ನೇ ಯಥಾವತ್ತಾಗಿ ತಂದು ಕಾದಂಬರಿಯಲ್ಲಿ ತುಂಬಬಾರದು. ಏಕೆಂದರೆ ಬರೀ ಸುದ್ದಿ ಕೊಡುವ ಚಾರಿತ್ರಿಕ ಕಾದಂಬರಿ, ಸುದ್ದಿ ಕೊಡುವ ದಿನಪತ್ರಿಕೆಯಂತೆ ವಾರ್ತಾಮೇನಾಂ ಪ್ರಚಕ್ಷತೇ! ಆ ರೀತಿಯಾದರೆ ಒಂದು ಕಾದಂಬರಿ ಬರೆಯುವ ಅಗತ್ಯ ವಾದರೂ ಏನಿತ್ತು? ಎನ್ನಿಸುತ್ತದೆ. ಚರಿತ್ರೆಯನ್ನೇ ಓದಿಕೊಳ್ಳಬಹುದಲ್ಲಾ ಎಂಬ ಉದ್ಗಾರ ಒರುತ್ತದೆ. ಆದುದರಿಂದ ಐತಿಹಾಸಿಕ ಘಟನೆಗಳನ್ನು ಯಥೇಚ್ಛ ವಾಗಿ ತಂದು ತುರುಕುವ ಆತುರಕ್ರಮ ಸರಿಯಲ್ಲ.

ಹೀಗೆಂದು ಇತಿಹಾಸಕ್ಕೆ ತಾತ್ಪರ್ಯಗೈದು ಸತ್ಯಕ್ಕೂ ವಸ್ತುಸ್ಥಿತಿಗೂ ನಿರ್ಲಕ್ಷ್ಯತೋರಿ ತುಂಬ ಸ್ವಾತಂತ್ರ್ಯ ವಹಿಸಿ ಬರಿಯ ಕಲ್ಪನಾವಿಲಾಸಕ್ಕೆ ಪ್ರಾಶಸ್ತ್ಯವಿತ್ತರೆ ಆಗ ಚರಿತ್ರೆಗೆ ದೊಡ್ಡ ದ್ರೋಹವನ್ನೂ ಅತಿಯಾದ ಅಪ ಚಾರವನ್ನೂ ಮಾಡಿದಂತೆ ಆಗುತ್ತದೆ. ಹೀಗಾಗಿ ಇದೊಂದು ಇತ್ತದರಿ ಅತ್ತಪುಲಿ ಎಂಬ ಸಂಕಟದ ಕತ್ತರಿ ಪ್ರಸಂಗವಾಗಿದೆ. ಇದರಿಂದ ಪಾರಾಗಬೇಕಾದರೆ ವಸ್ತುಸ್ಥಿತಿಯ ಸತ್ಯ ಸ್ವರೂಪ ಹಾಗೂ ಪ್ರತಿಭಾದ ಕಲ್ಪನಾಶ್ರೀ ಇವೆರಡರ ಅಪೂರ್ವ ಸಮ್ಮಿಲನವಾಗಬೇ ಆ ಬಗೆಯ ಪರಿಣತ ಹದವಾದ ಸಮರಸವೇ ಹಾಸಿಕ ಕಾದಂಬರಿಯ ಜೀವಜೀವಾಳ. ಅಂತಹ ಒಂ ಸುವರ್ಣ ಸಂಯೋಗದಲ್ಲಿ ಐತಿಹಾಸಿಕ ಕಾದಂಬರಿ ರ ಸಲು ಬೇಕಾದ ಕಲೆಯ ಮರ್ಮ ಹಾಗೂ ಅದರ ರ ನೆಯ ಗುಟ್ಟು ಅಂತರ್ನಿಹಿತವಾಗಿರುತ್ತದೆ.

ಇದುವರೆಗಿನ ವಿವರಣೆಯ ಮಾನದಂಡದ ಆಧಾ ದಿಂದ ಐತಿಹಾಸಿಕ ಕಾದಂಬರಿಗಳನ್ನು ವಿಮರ್ಶಕ ಮೂರು ಮುಖ್ಯ ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ವರ್ಗೀಕರಣಗಳು ಇಂತಿವೆ:

೧. ಪರಿಮಿತಾವಧಿಯ ಕಾದಂಬರಿ: Histor cal Novel of a particular period.

ಸಾವಿರಾರು ವರ್ಷಗಳ ನಿರಂತರವಾದ ಅಪಾರವಾ ರುವ ಇತಿಹಾಸದ ಅನಂತ ಕಾಲದ ವಿವರಣೆಯಲ್ಲಿ ಯಾ ದಾದರೂ ಒಂದು ಪರಿಮಿತ ಇಲ್ಲವೇ ಕ್ಲುಪ್ತವಾದ ಅ ಧಿಯ ಚಿತ್ರವನ್ನು ಕೊಡುವ ಕಾದಂಬರಿಗಳು ಒಂ ವರ್ಗಕ್ಕೆ ಸೇರುತ್ತವೆ. ಈ ಸೀಮಿತ ಕಾಲದ ಚಿತ್ರ ವಿರುವ ಕಾದಂಬರಿಗಳನ್ನು ರಚಿಸುವಾಗ ಲೇಖಕ ದೃಷ್ಟಿಯೇನಿದ್ದರೂ ಚರಿತ್ರೆಯ ಸಂಶೋಧನೆ ಮೇಲೆಯೇ ಕೇಂದ್ರೀಕೃತವಾಗಿರುತ್ತದೆನ್ನಬಹುದು. ಆ ಚರಿತ್ರೆಯಲ್ಲಿ ಆರಿಸಿಕೊಂಡ ಭಾಗವನ್ನು ಸೂಕ್ಷ್ಮಾ ವಲೋಕನ ಮಾಡಬೇಕು. ಈ ಬಗೆಯ ಕಾದಂಬ ಗಳನ್ನು ಬಹಳ ಹಿಂದಿನಿಂದಲೂ ಬರೆದಿದ್ದಾರೆ. ೧೭೮ ರಲ್ಲಿ ಬಾರ್ಥೆಲೇಮಿಯು ಬರೆದ "ಅನಾಕಾರ್ಸಿಸ್ ಇನ್ ಗ್ರೀಸ್" ಎಂಬ ಐತಿಹಾಸಿಕ ಕಾದಂಬರಿಯನ್ನ ಕನ್ನಡದ ಶಾಂತಲಾ ಚನ್ನಬಸವನಾಯಕ ಕಾದಂಬ ಗಳನ್ನೂ ಈ ವರ್ಗಕ್ಕೆ ಸೇರಿದ ಒಂದು ಮಾದರಿ ಕಾದ ಬರಿಗಳಾಗಿ ಉದಾಹರಿಸಬಹುದು

೨. ಐತಿಹ್ಯ ಪ್ರಧಾನವಾದ ಕಾದಂಬರಿಗಳು Historical Romance ಇತಿಹಾಸದಲ್ಲಿ ನಿಗೂ

ಸುವ ವಸ್ತುಸ್ಥಿತಿಯು ಸತ್ಯ ಸಂಗತಿಗಳಿಗಿಂತ ಅದಕ್ಕೆ ಸಂಬಂಧಿಸಿದ ಐತಿಹ್ಯಗಳನ್ನೂ, ಜನತೆಯಲ್ಲಿ ಪ್ರಚಲಿತವಾಗಿರುವ ಕಥೆ ದಂತಕಥೆಗಳನ್ನೂ ಹೆಚ್ಚಿನ ಆಧಾರವಾಗಿಟ್ಟುಕೊಂಡು ರಚಿಸುವ ಚಾರಿತ್ರಿಕ ಕಾದಂಬರಿ ಇನ್ನೊಂದು ವರ್ಗಕ್ಕೆ ಸೇರುತ್ತದೆ. ಇಂಗ್ಲೀಷಿನಲ್ಲಿ ಈ ಬಗೆಯ ಕಾದಂಬರಿಗಳನ್ನು 'ಚಾರಿತ್ರಿಕ ರೋಮಾನ್ಸ್' ಕಾದಂಬರಿಗಳೆಂದು ಕರೆಯುವರು. ಅಂದರೆ ಇದರಲ್ಲಿ ಇತಿಹಾಸಕ್ಕೆ ಮನ್ನಣೆಯೇ ಇಲ್ಲವೆಂದಲ್ಲ. ಆದರೆ ಚರಿತ್ರೆಯಲ್ಲಿ ಗೌಣವಾಗಿ, ಜನಜನಿತ ಕಥೆಯೇ ಪ್ರಧಾನಪಾತ್ರ ವಹಿಸುತ್ತದೆ. ಅಲೆಕ್ಸಾಂಡರ್ ಡ್ಯೂಮಾ, ಲಿಟ್ಟನ್, ಸರ್ ವಾಲ್ಟರ್ ಸ್ಕಾಟ್ ಮುಂತಾದ ಪಾಶ್ಚಾತ್ಯ ಲೇಖಕರ ಹಾಗೂ ಕನ್ನಡದಲ್ಲಿ ತ.ರಾ.ಸು. ರವರ ಹಂಸಗೀತೆ, ಶಿಲ್ಪಶ್ರೀ ಎಂಬ ಐತಿಹಾಸಿಕ ಕಾದಂಬರಿಗಳನ್ನೂ ಈ ವರ್ಗಕ್ಕೆ ಉತ್ತಮ ನಿದರ್ಶನವಾಗಿ ಹೆಸರಿಸಬಹುದು.

೩. ಚಾರಿತ್ರಿಕ ಇಲ್ಲವೇ ಐತಿಹಾಸಿಕ ಕಾದಂಬರಿ : Historical Novel.

ಈ ವರ್ಗದ ಕಾದಂಬರಿಗಳಲ್ಲಿ ವಿಶೇಷವಾಗಿ ಚರಿತ್ರೆಗೆ ಹತ್ತಿರವಾದ ಘಟನೆ ಹಾಗೂ ಸನ್ನಿವೇಶಗಳ ಚಿತ್ರ ದೊರೆಯುತ್ತದೆ. ಎಲ್ಲ ಭಾಷೆಗಳಲ್ಲೂ ಈ ಬಗೆಯ ಕಾದಂಬರಿಗಳೇ ಹೆಚ್ಚು ರಚಿತವಾಗಿರುವುದು. ಥ್ಯಾಕರೆಯಿಂದ ರಚಿತವಾದ ರೊಮೊಲಾ, ಹೆನ್ರಿಏಸ್ಮಾಂಡ್. ಮೊದಲಾದ ಚಾರಿತ್ರಿಕ ಕಾದಂಬರಿಗಳೂ, ತ.ರಾ.ಸು, ರವರ ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಮಾಲೆಯೂ ಈ ಪಂಗಡಕ್ಕೆ ಒಂಗಡಿತವಾಗುತ್ತದೆ.

ಇನ್ನು ಇತಿಹಾಸದ ವಸ್ತುವನ್ನು ಕಾದಂಬರಿಕಾರ ಕಾದಂಬರಿಗೆ ಅಳವಡಿಸುವ ವಿಧಾನಗಳನ್ನು ನೋಡಬಹುದು. ಇದಕ್ಕೆ ಸಂಬಂಧಿಸಿದಂತೆ ಪಾಶ್ಚಾತ್ಯರು ಆರು ಕ್ರಮಗಳನ್ನು ನಿರೂಪಿಸಿದ್ದಾರೆ ಅವು ಕ್ರಮವಾಗಿ ಇಂತಿವೆ :

೧. ಭೂಗೋಳ ಶಾಸ್ತ್ರವನ್ನು ಯಾವ ರೀತಿ ಪ್ರಯಾಣಿಕರಿಗೆ ಅಥವಾ ಪ್ರವಾಸಿಗಳಿಗೆ ಮಾರ್ಗದರ್ಶನ ಮಾಡಲ್ಲ ಪುಸ್ತಕವನ್ನಾಗಿ ಯಾವರೀತಿ ಅನುಕೂಲಕರವಾಗಿ ಮಾರ್ಪಡಿಸಬಹುದೋ ಅದೇ ರೀತಿಯಲ್ಲಿ ಚರಿತ್ರೆ ಒದಗಿಸುವ ಆಧಾರಗಳು ಹಾಗೂ ಸಾಮಾಗ್ರಿಗಳಿಂದ ಕಾದಂಬರಿಯನ್ನು ಸಿದ್ಧಪಡಿಸಬಹುದು. ಸಿದ್ಧವಸ್ತುವಿನ ನೆರವಿನಿಂದ ಪ್ರಸಿದ್ಧ ಕಾದಂಬರಿಯನ್ನು ನೇಯುವುದು ಸುಲಭ. ಇತಿಹಾಸವೆಂಬುದು ಒಂದು ಲೋಹವಿದ್ದಂತೆ. ಕಾದಂಬರಿಕಾರ ಅದರಿಂದ ತನಗೆ ಬೇಕುಬೇಕಾದ ಅಲಂಕಾರಿಕವಾದ ಆಕಾರಗಳನ್ನೂ ಆಭರಣಗಳನ್ನೂ ಮಾಡಿಕೊಳ್ಳಬಹುದು. ಚಾರಿತ್ರಿಕ ಪಾತ್ರ ಹಾಗೂ ಘಟನೆಗಳ ಜೊತೆಗೆ ಕಾಲ್ಪನಿಕ ಪಾತ್ರಗಳನ್ನೂ ಘಟನೆಗಳನ್ನೂ, ಸರಸ ಸಂಭಾಷಣೆಯನ್ನೂ ಮಾಲೆಮಾಲೆಯಾಗಿ ಸ್ವಯಂ ಸೃಷ್ಟಿಸಿ ಚರಿತ್ರೆ ಕಾದಂಬರಿಯ ಮಾಧ್ಯಮಿಕ ಮೂಲಕ ಮಾತನಾಡುವಂತೆ ಮಾಡುತ್ತಾನೆ. ಆದರೆ ಅವನು ನಿಜವಾದ ಚಾರಿತ್ರಿಕ ಪಾತ್ರಗಳನ್ನಾಗಲಿ, ಕಾಲಾನುಸಾರದಿಂದ ಬಂದ ನಿಯಮಾವಳಿಯನ್ನಾಗಲಿ, ಬಲತ್ಕಾರದಿಂದ ತನ್ನ ಕಥಾವಸ್ತು ಸರಪಣಿಗೆ ಪೋಣಿಸುವುದು ಸಾಧ್ಯವಿಲ್ಲ, ಸರಿಯಲ್ಲ. ಆತ ಚರಿತ್ರೆಗೆ ಯಾವ ಊನವನ್ನೂ ಮಾಡಬೇಕಾಗಿಲ್ಲ. ಅದರಂತೆ ಕಥಾ ಚಿತ್ರಕ್ಕೆ ಅಳವಡುವಂತೆ ಚರಿತ್ರೆಯಲ್ಲಿ ಬರುವ ಪಾತ್ರಗಳನ್ನು ಹೆಚ್ಚು ಕಡಮೆ ಮಾಡಬೇಕಾಗಿಲ್ಲ. ಆದುದರಿಂದ ಎಲ್ಲಿಯವರೆಗೆ ಕಾದಂಬರಿಕಾರನ ಕಾಲಕ್ಕಿಂತಲೂ ಹಿಂದಿನ ಜನಜೀವನದಲ್ಲಿ ನಡೆದುಹೋದ ಘಟನೆಗಳ ಸಂಶೋಧನೆ ಸತ್ಯವಾಗಿ ಇರುತ್ತದೆಯೋ ಅಲ್ಲಿಯವರೆಗೆ ಇದು ವ್ಯವಸ್ಥಿತವಾಗಿರುತ್ತದೆ.

೨. ಚರಿತ್ರೆಯ ವಸ್ತುಸ್ಥಿತಿ ಹಾಗೂ ಪರಂಪರಾನುಗತವಾಗಿ ಬಂದಿರುವ ಬಹಿರಂಗ ಘಟನೆಗಳ ಕ್ಷಯಿಸುವಿಕೆಯೇ ಎರಡನೆಯ ವಿಧಾನ. ಇದನ್ನು ತುಲನಾತ್ಮಕವಾದ ಯಾಂತ್ರಿಕ ವಿಧಾನವೆನ್ನಬಹುದು. ಇತಿಹಾಸದಿಂದ ಆರಿಸಿಕೊಂಡ ಒಂದು ಕಥೆ ಅಥವಾ ಪ್ರಸಂಗ ಕಾದಂಬರಿಯಲ್ಲಿ ವಿಸ್ತೃತವಾಗಬೇಕು. ಅಲ್ಲಿಯ ಕೆಲಸ ಜೋಡಾಣಿಕೆಯನ್ನು ತರುವುದು. ಅಂದರೆ ಚರಿತ್ರೆಯಿಂದ ತೆಗೆದುಕೊಂಡ ಒಂದು ಕಥೆಯನ್ನು ತನ್ನ ಇಷ್ಟ ಅಭಿರುಚಿಗಳಿಗೆ ಅನುಗುಣವಾಗಿ ಬೆಳೆಸಬಹುದು. ಕೆಲವು ಸಲ ಆತ ಚರಿತ್ರೆಯ ಮೂಲವಸ್ತುವಿಗೆ ಕೊಂಚ ತಿರುವು ಕೊಡಬಹುದು ; ಆದರೆ ಅದು ಸದಾ ಕಾದಂಬರಿಯ ಕಥಾಪ್ರವಾಹದ ಮೂಲ ಹೊಂದಾಣಿಕೆಗೋಸ್ಕರ ಮಾಡಿದ ಮಾರ್ಪಾಟಾಗಿರಬೇಕು. ನಿಜ, ಕೆಲವು ಸಲ ಕಾದಂ

ಬರಿಯ ರುಚಿಗೆ ತಕ್ಕಂತೆ ಅಳವಡಿಸಲು ಚರಿತ್ರೆಯನ್ನು ಅಲ್ಪ ಸ್ವಲ್ಪ ತಿರುಗಿಸಬೇಕಾಗುತ್ತದೆ. ಆದರೂ ಇತಿಹಾಸದ ಘಟನೆಗಳನ್ನು ಪ್ರಾಮಾಣಿಕವಾಗಿ ನಿರೂಪಿಸಬೇಕಾಗುತ್ತದೆ. ಸರ್‌ವಾಲ್ಟರ್ ಸ್ಕಾಟನ ಕೆನಿಲ್‌ವರ್ತ್ ಕಾದಂಬರಿ ಇದಕ್ಕೆ ಸಾಕ್ಷಿ.

೧ ಮತ್ತು ೨ ನೆಯ ವಿಧಾನಗಳು ಬೇರೆ ಬೇರೆಯಾದರೂ ಒಂದೇ ಕಾದಂಬರಿಯಲ್ಲಿ ಇವೆರಡೂ ಮೇಳವಿಸಬಹುದು. ಮಾಧವಕರುಣವಿಲಾಸವನ್ನು ಇದಕ್ಕೆ ಉದಾಹರಣೆಯಾಗಿ ಹೆಸರಿಸಬಹುದು.

೩. ಕಥಾನಾಯಕನ ಪ್ರಾಪಂಚಿಕವಾದ ಅನುಭವ ಸಮೂಹವನ್ನು ಸವಿಸ್ತಾರವಾಗಿ ಹೇಳುವುದು ಮೂರನೆಯ ವಿಧಾನ. ಇದರಲ್ಲಿ ವಸ್ತುವಿರಚನೆ ಹಾಗೂ ಒಂದಾದ ಮೇಲೊಂದರಂತೆ ಆಗುವ ಘಟನಾವಳಿಗೆ ಆಸ್ಪದವಿಲ್ಲ. ಅಷ್ಟೇ ಅಲ್ಲದೆ ಬರುವ ಕೆಲವೇ ಘಟನೆಗಳಲ್ಲಿ ಒಂದಕ್ಕೊಂದು ಹೊಂದಾಣಿಕೆಯಿಂದ ಸೇರಿಕೊಂಡಿರಬೇಕಾದುದೂ ಇಲ್ಲ. ಅಥವಾ ಒಂದೇ ಸಮನೆ ನಡೆಯುವ ಘಟನೆಗಳ ಮಾಲೆ ಇದ್ದರೆ ಆಗ ಕಥಾನಾಯಕ ಪ್ರಪಂಚವನ್ನು ಸುತ್ತುವಾಗ ಯಾವ ರೀತಿ ಅವನ್ನು ಎದುರಿಸಿದನೆಂಬ ವಿವರಣೆಯಿರುತ್ತದೆ. ಏನೇ ಆದರೂ ವಸ್ತುವಿನಿಂದಾಗಲೀ ಪಾತ್ರಗಳಿಂದಾಗಲೀ ಸಂನಿವೇಶಗಳಿಂದಾಗಲೀ ನಡೆಯುವ ಕಾರ್ಯವೇನೂ ಇರುವುದಿಲ್ಲ. ಹೀಗಾಗಿ ಕಾದಂಬರಿಕಾರನ ಕೆಲಸ ಸುಗಮವಾಗಿರುತ್ತದೆ ಏಕೆಂದರೆ ಆತ ಬಿಡಿಸಬೇಕಾದ ಸಿಕ್ಕುಗಳಾಗಲಿ ತೊಡಕುಗಳಾಗಲಿ ಬೃಹತ್ ಸಮಸ್ಯೆಯಾಗಲಿ ಇರುವುದಿಲ್ಲ.

ಘಟನೆಗಳಲ್ಲಿ ಯಾವ ರೀತಿಯ ಪರಸ್ಪರ ಸಂಬಂಧವೂ ಇರದೆ ಅವು ಕೇವಲ ಒಂದರನಂತರ ಮತ್ತೊಂದು ಬಂದು ಒಂದರೊಡನೆ ಮತ್ತೊಂದನ್ನು ಸುಮ್ಮನೆ ಜೋಡಿಸಿರುವುದರಿಂದ ಅದು ಕೇವಲ ಕ್ರಿಯೆಗಳ ಮಾಲೆಯಾಗಿರುತ್ತದೆ. ಇದರಲ್ಲಿ ಒಂದು ಉಪಕಥೆ ಅಥವಾ ಪ್ರಸಂಗ ಮತ್ತೊಂದು ಉಪಕಥೆ ಅಥವಾ ಪ್ರಸಂಗದೊಡನೆ ಬೆಳೆಯುವುದಿಲ್ಲ. ಅವು ಒಂದೊಂದೂ ಬೇರೆ ಬೇರೆ ಆಳವನ್ನು ಕುರಿತುದಾಗಿರುತ್ತವೆ. ಹೀಗಾಗಿ ಕಥಾನಾಯಕನಾದವನು ಗತಕಾಲದ ಇತಿಹಾಸದಲ್ಲಿ ಸುಮ್ಮನೆ ಪ್ರಯಾಣ ಮಾಡುವವನಾಗುತ್ತಾನೆ. ಆದುರಿಂದ ಇದು ಚರಿತ್ರೆಯನ್ನು ಕಾದಂಬರಿಗೆ ಅಳವಡಿಸು[illegible] ವಿಧಾನಗಳಲ್ಲಿ ಅತ್ಯಂತ ಸಾಧಾರಣವಾದುದು.
ಬಗೆಯ ಕಾದಂಬರಿಗಳು ಅವು ಆರಿಸಿಕೊಂಡ ಕ[illegible] ವನ್ನು ಎರಡು ರೀತಿಗಳಲ್ಲಿ ಕಥೆಗೆ ಅಳವಡಿಸಿಕೊ[illegible] ಬಹುದು :

(ಅ) ಯಾವುದೋ ಒಂದು ನಿಗದಿಯಾದನಿರ್ದಿ[illegible] ಕಾಲವನ್ನು ತೆಗೆದುಕೊಂಡು ಅದರ ಅಂಚುಗಳನ್[illegible] ಆಚೆ-ಈಚೆ ಮೀರದೆ ಕತೆ ಹೇಳುವುದು. ಅಂದರೆ ಯಾ[illegible] ಒಂದು ಕಾಲದ ಸ್ಥಿತಿ ಕಥೆಯ ಹಿನ್ನೆಲೆಯಾಗಿ ಬ[illegible] ದೆಯೋ ಅದು ಅಚಲಿತವಾಗಿದ್ದು ಕೆಲವು ನಿಯಮಿ[illegible] ವಾದ ನಿಬಂಧನೆಯ ನಡುವೆ ಈ ಕಥೆ ವಿಕಾಸ ಹೊಂ[illegible] ತ್ತದೆ. ಈ ರೀತಿಯ ಕಾದಂಬರಿಗೆ ಉದಾಹರಣೆಯಾ[illegible] ಚಾರ್ಲ್ಸ್ ರೀಡ್ ಬರೆದ 'ಕ್ಲಾಯಿಸ್ಟರ್ ಅನ್[illegible] ಹಾರ್ಥ್' ಎಂಬ ಕಾಂಬರಿಯನ್ನು ನೋಡಬಹುದು. ಇದರಂತೆ ಚಾರ್ಲ್ಸ್ ಡಿಕನ್ಸ್ ಬರೆದ 'ಎ ಟೇಲ್ ಆ[illegible] ಟು ಸಿಟೀಸ್' ಎಂಬ ಕಾದಂಬರಿ ಕೂಡ.

(ಆ) ಎರಡನೆಯದಾಗಿ ವೇಗವಾಗಿ ಬದಲಾಗುತ[illegible] ಹೋಗುವ ಸಂನಿವೇಶಗಳನ್ನು ಸೇರಿಸಿ ಕಾದಂಬರಿ ರಚಿ[illegible] ವುದು. ಇದರಲ್ಲಿ ಸ್ಥಿತಿಗತಿಗಳು ಬಹು ಜಾಗ್ರತೆಯಾ[illegible] ವ್ಯತ್ಯಾಸವನ್ನು ಹೊಂದುತ್ತಾ ಚಲಿತವಾಗುತ್ತಿರುತ್ತ[illegible] ಕಾದಂಬರಿಕಾರ ಅದರ ಹಿನ್ನೆಲೆಯನ್ನು ವರ್ಣಿಸಬೇಕ[illegible] ಈ ಕ್ಷಿಪ್ರಮಾರ್ಪಾಡಿನ ಹಿನ್ನೆಲೆಯನ್ನು ತಿಳಿಸದಿದ್[illegible] ವಿವರಿಸದಿದ್ದರೆ ಅರ್ಥಮಾಡುವುದು ಕಷ್ಟವಾಗುತ್[illegible] ಚಾರ್ಲ್ಸ್ ಡಿಕನ್ಸ್ ಬರೆದ 'ಬಾರ್ನಬಿರಡ್ಜ್' ಎ[illegible] ಕಾದಂಬರಿ ಇದಕ್ಕೆ ಒಳ್ಳೆಯ ನಿದರ್ಶನ. ಈ ಕಾದ[illegible] ರಿಯ ಮೊದಲ ಅರೆಪಾಲು ಒಲವಿನ, ಕಾದಲಿನ ಕ[illegible] ಆದರೆ ಈ ಪ್ರಣಯ ಕಥೆಯ ಹಿನ್ನೆಲೆಯಾಗಿ ಚರಿತ್ರೆ[illegible] ಇಲ್ಲ ಅಲ್ಲಿ ಬಂದಿರುವುದು ಸಾಮಾಜಿಕ ಹವ್ಯಾ[illegible] ಹಾಗೂ ಪದ್ಧತಿಗಳು. ಆದರೆ ಅವೂ ಕೂಡ ಚಾರಿತ್ರಿ[illegible] ಗುಣಗಳಂತೆ ಸಹಜವಾಗಿ ನಿರೂಪಿತವಾಗಿವೆ. ಮು[illegible] ಕಾದಂಬರಿಯ ಮಧ್ಯಭಾಗಕ್ಕೆ ಬಂದಾಗ 'ಗೋರ್ಡ[illegible] ದಂಗೆ' (Gorden Riots) ಎಂಬ ದಂಗೆ ಬರುತ್[illegible]

ಈ ದಂಗೆ ಕಥೆಯು ಅದುವರೆಗಿನ ಓಟವನ್ನೇ ಬದಲಿಸಿ ಮೂಲ ಕಥೆಯನ್ನು ಮುಚ್ಚುತ್ತದೆ. ಕಾದಂಬರಿಕಾರ ಅಲ್ಲಿಂದ ಮುಂದೆ ಹಿಂದಿನದನ್ನು ಬಿಟ್ಟು ದಂಗೆಯನ್ನೇ ಮುಂದುವರಿಸಿಕೊಂಡು ಹೋಗುತ್ತಾನೆ. ಕನ್ನಡದಲ್ಲಿ ಔದಾರ್ಯದ ಉರುಳು ಕಾದಂಬರಿ ಈ ತೆರನಾಗಿದೆ.

ಚಾರಿತ್ರಿಕ ಘಟನೆಗಳನ್ನು ಈ ಎರಡು ರೀತಿಯಲ್ಲಿ ಹೇಗೆ ಬೇಕಾದರೂ ನೇರ್ಪುಗೊಳಿಸಿಕೊಳ್ಳಬಹುದು.

೪. ಉಪಕಥಾತ್ಮಕವಾದ ಚಾರಿತ್ರಿಕ ಕಾದಂಬರಿ : ದಂತಕಥೆಗಳ ಮಾಲೆ. ಇದನ್ನು ಸಂದರ್ಭ ಪ್ರಾಧಾನ್ಯ ಕಾದಂಬರಿಯೆಂದೂ ಕರೆಯಬಹುದು. ಚರಿತ್ರೆಯನ್ನು ಹಲವು ವಿವಿಧ ಕಾಲಗಳಲ್ಲಿ ಸಂಭವಿಸಿದ ಬೇರೆ ಬೇರೆ ಸಂದರ್ಭಗಳ ಒಂದು ದಾಖಲೆ ಎನ್ನುವುದಾದರೆ ಇದನ್ನೇ ಮೂಲವಸ್ತುವನ್ನಾಗಿ ಇಟ್ಟುಕೊಂಡ ಬರೆದ ಕಾದಂಬರಿ ಈ ವಿಧಾನಕ್ಕೆ ಸೇರುತ್ತದೆ. ಕಾದಂಬರಿಕಾರ ಒಂದು ಪ್ರಸಿದ್ಧವಾದ ಚಳವಳಿಯನ್ನು ತರುವುದಾಗಲಿ, ಒಬ್ಬ ಪ್ರಮುಖನಾದ ಚಾರಿತ್ರಿಕ ವ್ಯಕ್ತಿಯ ಪಾತ್ರಕ್ಕೆ ಆಗಲಿ ಅಷ್ಟಾಗಿ ಗಮನ ಕೊಡುವುದಿಲ್ಲ. ಅಂದರೆ ಅವುಗಳನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲವೆಂದಲ್ಲ. ಆದರೆ ಉಪಕಥಾತ್ಮಕವಾದ ಕಾದಂಬರಿಗೆ ಅವು ಪ್ರಧಾನವಾಗಿರುವುದಿಲ್ಲ. ಅವುಗಳಿಂದ ಕಾದಂಬರಿಕಾರನ ಕೆಲಸ ನಡೆಯುವುದಿಲ್ಲ. ಎಂ. ಎಸ್. ಪುಟ್ಟಣ್ಣನವರ ಮುಸುಗ ತೆಗೆಯೆ ಮಾಯಾಂಗನೆ ಕಾದಂಬರಿ ಈ ತೆರನಾದುದು. ಆ ಕಾಲದ ಜನರ ಸ್ಥಿತಿ ಮತ್ತು ದೇಶದ ಸ್ಥಿತಿಗಳನ್ನು ಚಿತ್ರಿಸಿ, ಹಲವು ಬೇರೆ ಬೇರೆ ಕಥೆಗಳನ್ನು ಸೇರಿಸಿ ಒಂದು ದೊಡ್ಡ ಕಥೆಯನ್ನು ನೆಯ್ದಿರುತ್ತಾನೆ. ಇತಿಹಾಸದಲ್ಲಿ ಸಿಗಬಹುದಾದ ಹಲವು ಉಪಕಥೆಗಳನ್ನು, ಘಟನೆಗಳನ್ನು ತಂದು ಕಾದಂಬರಿಯಲ್ಲಿ ಹಾಗೆಯೇ ಇಡುತ್ತಾನೆ. ಒಂದು ಘಟನೆಗೂ ಇನ್ನೊಂದು ಘಟನೆಗೂ ಹೊಂದಾಣಿಕೆ ಇರುವುದಿಲ್ಲ. ಅವೆಲ್ಲ ಬಿಡಿಬಿಡಿಯಾಗಿ ಕಾಣುತ್ತವೆ. ಅವುಗಳನ್ನೆಲ್ಲ ಸೇರಿಸಿದ ಒಟ್ಟು ನೆಯ್ಗೆ ಭದ್ರವಾಗಿರುವುದಿಲ್ಲ. ಅಂತು ಇದು ದಂತಕಥೆಗಳಿಗೆ ಚರಿತ್ರೆಯನ್ನೂ ಬೆರೆಸಿ ಕಾದಂಬರಿ ರಚಿಸುವ ಒಂದು ವಿಧಾನ. ಮಾಸ್ತಿಯವರ ಚೆನ್ನಬಸವನಾಯಕ ಕಾದಂಬರಿ ಈ ವರ್ಗಕ್ಕೆ ಒಳಪಡುತ್ತದೆ. ಬಿದನೂರಿನ ಸುತ್ತ ಮುತ್ತಲಿನ ಜನತೆಯಲ್ಲಿ ರೂಢಿಯಲ್ಲಿರುವ ಹಲವು ದಂತಕಥೆಗಳು ಚರಿತ್ರೆಯೊಡನೆ ಸೇರಿ ಈ ಕಾದಂಬರಿ ಸಿದ್ಧವಾಗಿದೆ. ಈ ವಿಧವಾದ ಕಾದಂಬರಿಗಳನ್ನು ಬರೆಯುವವನಿಗೆ ಚರಿತ್ರೆ ಒಂದು ಉಪಕಥೆಗಳ ಗಣಿಯಂತೆ ತೋರುತ್ತದೆ.

೫. ಇತಿಹಾಸ ಮಹಾವ್ಯಕ್ತಿಗಳು ನಟಿಸುವ ಒಂದು ರಂಗಸ್ಥಳ. ಅನೇಕ ಶ್ರೇಷ್ಠ ಮನುಷ್ಯರು ಅದರ ಮೇಲೆ ಬಂದು ಹೋಗುವರು. ಅವರು ಇಡಿಯ ದೇಶದ ಚರಿತ್ರೆಯನ್ನೇ ಅಥವಾ ಚರಿತ್ರೆಯ ಒಂದು ಹೊಸ ಅಧ್ಯಾಯವನ್ನೇ ಸೃಷ್ಟಿಸಿದ ಮಹಾಪುರುಷರೂ ಆಗಿರಬಹುದು. ಇವರಲ್ಲಿ ಚಾವುಂಡರಾಯನಂಥ ಯೋಧರು, ನೆಹರೂರವರಂಥ ಜನನಾಯಕರು, ಗಾಂಧೀಜಿಯವರಂಥ ಮಹಾತ್ಮರು, ಸುಭಾಷ್ ಚಂದ್ರಬೋಸರಂಥ ಸ್ವಾತಂತ್ರ್ಯ ವೀರರು, ವಿನೋಬಾಜಿಯವರಂಥ ಆಲೋಚಕರು, ಡಾ॥ ಸಿ. ವಿ. ರಾಮನ್‌ರವರಂಥ ವಿಜ್ಞಾನಿಗಳು, ಪಂಪನಂಥ ಮಹಾಕವಿಗಳು —ಹೀಗೆ ಎಲ್ಲರೂ ಇರುತ್ತಾರೆ ಇಲ್ಲವೇ ಇರಬಹುದು. ಹೀಗೆ ಒಬ್ಬ ಜನತೆಯ ಮುಂದಾಳುವಿನಿಂದ ದೇಶಭಕ್ತ ಹಾಗೂ ವೇದಾಂತಿ, ಸೈನಿಕ, ವಿಜ್ಞಾನಿಯ ತನಕ ಯಾರನ್ನು ಬೇಕಾದರೂ ಕಾದಂಬರಿಕಾರ ಮುಖ್ಯ ವ್ಯಕ್ತಿಯನ್ನಾಗಿ ಆರಿಸಿಕೊಳ್ಳಬಹುದು. ಪಾಶ್ಚಾತ್ಯರಲ್ಲಿ ಸೀಸರ್. ಕ್ರಾಮ್ವೆಲ್. ನೆಪೋಲಿಯನ್, ಮಿಲ್ಟನ್ ಮುಂತಾದವರನ್ನು ಆರಿಸಿಕೊಂಡು ರಚಿತವಾದ ಕಾದಂಬರಿಗಳಿವೆ ಕನ್ನಡದಲ್ಲಿ ಮಾಧವಕರುಣಾ ವಿಲಾಸ, ಖಾರವೇಲ, ಸತ್ಯಾಶ್ರಯ ಸಾಮ್ರಾಜ್ಯ ಮುಂತಾದ ಕಾದಂಬರಿಗಳು ಈ ಬಗೆಯವು. ಕಾದಂಬರಿಕಾರ ಇಂಥ ಕಾದಂಬರಿಗಳನ್ನು ಬರೆಯುವಾಗ ಆ ಮುಖ್ಯ ಪಾತ್ರಗಳ ಅದೃಷ್ಟದ, ವ್ಯಕ್ತಿತ್ವದ ಆಳಕ್ಕೆ ಇಳಿಯಬೇಕಾಗುತ್ತದೆ. ಈ ವ್ಯಕ್ತಿಗಳ ಹಿಂದಿರುವ ಮಹತ್ಕಾರ್ಯವನ್ನು ಅರಿಯಬೇಕಾಗುತ್ತದೆ. ಅವರ ಅದೃಷ್ಟ ದುರಾದೃಷ್ಟಗಳಲ್ಲಿ ಕಾದಂಬರಿಕಾರನೂ ನುಗ್ಗಿ ಹೋಗಬೇಕಾಗುತ್ತದೆ. ಕೆಲವೊಮ್ಮೆ ಹೀಗಾದಾಗ ಚರಿತ್ರೆ ಯಾರದೋ ಒಬ್ಬನ ವೈಯಕ್ತಿಕ ವಿಚಾರವಾದಂತೆಯೂ ತೋರಬಹುದು.

೬. ಒಂದು ಜನತಾ ಸಮುದಾಯದ ಸಾಮೂಹಿಕ ಅನುಭವಗಳ ದಾಖಲೆಯೂ ಚರಿತ್ರೆಯಾಗುತ್ತದೆ. ಆಗ ಅದು ಜನರ ಅನುಭವ ಮಾಲೆಯ ಸ್ಮರಣೆಯಾಗಿರುತ್ತದೆ. ಅಲ್ಲಿ ವ್ಯಕ್ತಿಯ ವೈಯಕ್ತಿಕ ಜೀವನವೇ ಮುಖ್ಯವಾಗಿ ತೋರಬಹುದು. ಪ್ರಕೃತಿಯ ಪ್ರಕೋಪ ಉಗ್ರರೂಪ, ಕ್ಷಾಮಡಾಮರ, ಸಮಾಜದಲ್ಲಿ ಬಡತನ ಹಾಗೂ ಅಸಮಾನತೆ, ರೋಗ ರುಜಿನಗಳ ರಿಂಗಣ ಕುಣಿತ, ಇವುಗಳ ವಿರುದ್ಧ ನಡೆದ ಜನರ ಹೋರಾಟ ಹಾಗೂ ಮನೋಭಾವ ಇವೆಲ್ಲ ಇಂಥ ಕಾದಂಬರಿಗೆ ವಸ್ತುವಾಗಬಹುದು. ಚರಿತ್ರೆಯೆಂಬುದು ಕೇವಲ ಮಾನವನ ಪಂಥ ಇಲ್ಲವೇ ಅದ್ಭುತ ಕಾರ್ಯಗಳ ದಾಖಲೆಯಲ್ಲ. ಅದು ಮಾನವನ ಮಹಾಪುರಾಣ, ಅವನ ನಿರಂತರವಾದ ಸಂಸ್ಕೃತಿ ಮತ್ತು ನಾಗರಿಕತೆಗಳ ಬೆಳವಣಿಗೆ. ಇದು ಭೂತಕಾಲದ ಒಂದು ಸಂಯೋಗ ಇವೆಲ್ಲಕ್ಕೂ ಹಿನ್ನೆಲೆಯಾಗಿ ಒಂದು ಜೀವಂತ ಮೂಲಸೂತ್ರ ಕೆಲಸ ಮಾಡುತ್ತಿರುತ್ತದೆ. ಸಮುದ್ರದ ಅಲೆಗಳು ಹೇಗೆ ನೊರೆಯನ್ನು ಮುಂದಕ್ಕೆ ದಡಕ್ಕೆ ತರುತ್ತದೆಯೋ ಹಾಗೆ ಈ ಸಂಜೀವ ಮೂಲಸೂತ್ರ ಮನುಷ್ಯನನ್ನು ಮುಂದಕ್ಕೆ ತರುತ್ತದೆ. ಇದು ಒಂದು ಸಂಪದ್ಯುಕ್ತವಾದ ನಿರ್ಮಾಣ ಹಾಗೂ ಆದರ್ಶಮಯ ಕೌಶಲ್ಯದ ಕುಡಿ. ಇದರ ಕಥಾನಾಯಕ ಕೇವಲ ಒಬ್ಬ ಮಾನವನಲ್ಲ, ಅವನು ಮಹಾಶಕ್ತಿಯ ಪ್ರಣಾಲಿಕೆಯಾಗಿ ಪರಿಣಮಿಸುತ್ತಾನೆ.

ಚರಿತ್ರೆ ಆಗ ಕೇವಲ ಜನತೆಯ ಒಟ್ಟು ಕಥೆ ಮಾತ್ರವಲ್ಲ ಅವರ ಆವಶ್ಯಕತೆಗಳ, ಸಾಹಸಗಳ ಕಥೆಯೂ ಆಗುತ್ತದೆ. ಅಷ್ಟೇ ಅಲ್ಲದೆ ಈ ಬಗೆಯ ಕಾದಂಬರಿ ಒಂದು ಮಹಾ ಕಾವ್ಯವೂ ಆಗಬಹುದು. ಲಿಯೊ ಟಾಲ್‌ಸ್ಟಾಯ್ 'ವಾರ್ ಅಂಡ್ ಪೀಸ್' (ಯುದ್ಧ ಮತ್ತು ಶಾಂತಿ) ಮತ್ತು 'ರಿಸರಕ್ಷನ್' (ಪುನರುತ್ಥಾನ-ದೇಜಗೌ) ಕಾದಂಬರಿಗಳು ಈ ರೀತಿಯ ಕೃತಿಗಳಾಗಿವೆ. ಇಂಥ ಕಾದಂಬರಿಗಳು ಮಾನವರ ಸಂಸ್ಕೃತಿ ನಾಗರಿಕತೆಗಳ ಪುನರುದಯದ ಕಥೆಯೇ ಆಗುತ್ತದೆ. ಲೇಖಕ ಹಿಂದಿನದನ್ನು ವಿಶ್ಲೇಷಿಸಿ, ಸಂಯೋಜಿಸಿ ಕಥೆ ಕಟ್ಟುತ್ತಾನೆ. ವಿಕ್ಟರ್ ಹ್ಯೂಗೊ ಎಂಬ ಫ್ರೆಂಚ್ ಲೇಖಕ ಈ ಕ್ಷೇತ್ರದಲ್ಲಿ ಮಹಾಸಾಧಕನಾಗಿ ಹಿರಿಯ ಯಜಮಾನನಾಗಿದ್ದಾನೆ. ಅವನ Toilers of the Sea ಎಂಬುದಂತೂ ಇದಕ್ಕೆ ಚೆನ್ನಾದ ನಿದರ್ಶನ. ಬಂಕಿಮ ಚಂದ್ರರ ಆನಂದ ಮಠ ಭಾರತೀಯ ಕಾದಂಬರಿಗಳಲ್ಲಿ ಈ ಸಾಲಿಗೆ ಸೇರುತ್ತದೆ. ಗಳಗನಾಥರ ಕೆಲವು ಕಾದಂಬರಿಗಳು ಈ ತೆರನಾದ ಗ್ರಂಥಗಳು.

ಕಾಲವೆಂಬುದು ಯಾರ ಹಿಡಿತಕ್ಕೂ ಸಿಗದೆ ನಾಗಾಲೋಟದಿಂದ ಓಡುತ್ತಿರುತ್ತದೆ. ಆದರೆ ಕಾಲ ಹಿಂದೆ ಹಿಂದೆ ಸರಿದರೂ ಆಗ ನಡೆದ ಘಟನಾವಳಿಯ ಮಹತ್ವ ಅಳಿಯದೆ ಉಳಿದಿರುತ್ತದೆ. ನಾವು ಇಂದಿಗೆ ಸಂಬಂಧಿಸಿದಂತೆ ಗತಕಾಲದ ಇತಿಹಾಸದ ಪುನರ್ ದರ್ಶನ ಮಾಡುವುದು ನಮ್ಮ ಆರೋಗ್ಯಕ್ಕೆ ಅವಶ್ಯ. ಏಕೆಂದರೆ ನಮ್ಮ ನಾಡಿಗೆ ಇರುವ ಸಾವಿರಾರು ವರ್ಷಗಳ ಸಮೃದ್ಧವಾದ ಅಸ್ತಿತ್ವ ಮತ್ತು ವೈಶಿಷ್ಟ್ಯಗಳ ಪ್ರಚಂಡ ಪ್ರಜ್ಞೆ ಪಡೆಯುವುದು ನಮ್ಮ ಮೇಲ್ಮೆಗಾಗಿ ಅಗತ್ಯ. ನಮ್ಮ ನಾಡಿನ ಗತಗರಿಮೆಯ ಗೊಟ್ಟಗಾನ ಮಾಡಿದ ಐತಿಹಾಸಿಕ ಕಾದಂಬರಿಗಳು ಜನರ ನಾಡಿಯಲ್ಲಿ ವಿಲಕ್ಷಣ ಪ್ರೇಮಾದರಗಳು ಮಿಡಿಯುವಂತೆ ಮಾಡುತ್ತವೆ. ಪ್ರತ್ಯಕ್ಷ ಸಾಕ್ಷಿಯೊಬ್ಬನ ನಿರೂಪಣೆಯಂತೆ ರಚಿತವಾದ ಈ ಕಾದಂಬರಿಗಳು ಓದುಗರ ಮೇಲೆ ಗಾಢವಾದ ಪರೋಕ್ಷ ಪ್ರಭಾವ ಬೀರುತ್ತವೆ. ಆದರೆ ಅದಕ್ಕೆಲ್ಲ ಕಾದಂಬರಿಕಾರ ವಿಶೇಷ ಶಕ್ತಿ ಸಂಪಾದಿಸಿಕೊಳ್ಳಬೇಕು. ಇತಿಹಾಸದ ಆಳವಾದ ಅಭ್ಯಾಸ ಅವಲೋಕನಗಳ ಜೊತೆಗೆ ಮುಟ್ಟಿದ್ದನ್ನೆಲ್ಲ ಚಿನ್ನವನ್ನಾಗಿ ಮಾಡುವ ರಂಜಕ ಕಲಾವಂತಿಕೆ ಇರಬೇಕು ಆತ ಮೊದಲು ತನ್ನ ದೇಶದ ಇತಿಹಾಸವನ್ನು ಚೆನ್ನಾಗಿ ತಿಳಿದಿರಬೇಕು. ತನ್ನ ತಾಯ್ ನಾಡಿನ, ತಾಯ್ ನುಡಿಯ ಪ್ರೇಮ ಸಲಿಲದ ತುಂಬು ಪ್ರವಾಹ ಅವನ ಹೃದಯದಲ್ಲಿ ಅವಿಚ್ಛಿನ್ನವಾಗಿ ಪ್ರವಹಿಸುತ್ತಿರಬೇಕು. ಜೊತೆಗೆ ಕಥೆ ಹೇಳುವ ಕಲೆ, ಕಲ್ಪನೆ, ಪ್ರತಿಭೆ ಇವೆಲ್ಲ ಇರಬೇಕು. ನಿರೂಪಣೆಗೆ ತಕ್ಕ ಹದವಾದ ಸರಸವಾದ ಶೈಲಿಯಿರಬೇಕು. ಅಲ್ಲದೆ ಚರಿತ್ರೆಯ ಸಮಗ್ರ ಪರಿಚಯದ ಜೊತೆಗೆ ಭೂಗೋಳದ ನಿಕಟ ಪರಿಚಯವೂ ಆಗಿರಬೇಕು.

ಐತಿಹಾಸಿಕ ಕಾದಂಬರಿಕಾರನಿಗೆ ಇರಬೇಕಾದ ಈ ಅತ್ಯಾವಶ್ಯಕ ಗುಣಗಳೆಲ್ಲ ಸರ್ ವಾಲ್ಟರ್ ಸ್ಕಾಟ್‌ನಲ್ಲಿ ವಿಶೇಷವಾಗಿದ್ದುವು. ಮೊಟ್ಟ ಮೊದಲನೆಯದಾಗಿ ಸ್ಕಾಟ್‌ಗೆ ಕಥೆ ಹೇಳುವ ಕಲೆ ಕರಗತ. ಅವನ ದೊಡ್ಡ ದೊಡ್ಡ ಕಾದಂಬರಿಗಳಲ್ಲಿ ವರ್ಣಿತವಾಗಿರುವ ಅನೇಕ ಪಾತ್ರಗಳು, ವಿಶೇಷತಃ ರೈತ ಪಾತ್ರಗಳು ಚಿರಪರಿಚಿತವಾದ ಜೀವಂತ ಚಿತ್ರಗಳು. ಇಂಗ್ಲಿಷ್ ಭಾಷೆಯಲ್ಲಿ ಐತಿಹಾಕ ಕಾದಂಬರಿಗಳ ಪ್ರಚಾರ ನಡಸಿ ಜನತೆಯಲ್ಲಿ ಅದರ ಬಗೆಗೆ ಆಸಕ್ತಿ, ಅಭಿರುಚಿಗಳನ್ನು ಹುಟ್ಟಿಸಿ ಬೆಳೆಸಿದ ಕೀರ್ತಿ ಅವನಿಗೇ ಸಲ್ಲತಕ್ಕದ್ದು. ಪಾಶ್ಚಾತ್ಯ ವಿಮರ್ಶಕರು ಸ್ಕಾಟ್‌ನನ್ನು ಐತಿಹಾಸಿಕ ಕಾದಂಬರಿಗಳ ಜನಕನೆಂದು ಕರೆದಿದ್ದಾರೆ ಸಾಹಿತ್ಯ ಲೋಕಕ್ಕೆ ಚಾರಿತ್ರಿಕ ಕಾದಂಬರಿಗಳ ಹಾಸು ಬೀಸುಗಳನ್ನು ಸೂಸಿದ್ದು ವಾಲ್ಟರ್ ಸ್ಕಾಟ್.

ಸರ್ ವಾಲ್ಟರ್ ಸ್ಕಾಟ್ (೧೭೭೧-೧೮೩೨) ಇಂಗ್ಲಿಷ್ ಭಾಷೆಯ ಸುಪ್ರಸಿದ್ಧ ಐತಿಹಾಸಿಕ ಕಾದಂಬರಿಕಾರನೆಂದಷ್ಟೇ ಗಣನೆಗೆ ಪಾತ್ರವಾಗಿರದೆ ತನ್ನ ಬಹುಮುಖಿ ವ್ಯಕ್ತಿತ್ವ ಹಾಗೂ ಬರೆಹಗಳಿಂದಲೂ ಗಣ್ಯನಾಗಿದ್ದಾನೆ. ಆತ ವೈವಿಧ್ಯಮಯವಾದ ಜೀವನವನ್ನು ಸಾಗಿಸಿದವನು. ಮೊದಲು ವಕೀಲವೃತ್ತಿ ನಡಸಿದ. ಅನಂತರ ಬರೆಹಗಾರನಾಗಿ ಬಾಳಿದ. ಕತೆ, ಕಾದಂಬರಿ, ಕವಿತೆ-ಹೀಗೆ ವಿಧ ವಿಧವಾದ ಸಾಹಿತ್ಯ ನಿರ್ಮಾಪಕನಾಗಿ ಮೆರೆದ. ಜೊತೆಗೆ ಆತ ಗುಣೈಕ ಪಕ್ಷಪಾತಿಯಾಗಿ ಬಾಳಿದ ತನ್ನ ಸಮಕಾಲೀನ ಲೇಖಕರ ವೈಶಿಷ್ಟ್ಯಗಳನ್ನು ಎತ್ತಿ ನುಡಿದು ಪ್ರೋತ್ಸಾಹದ ಮಾತುಗಳನ್ನಾಡಿದ್ದಾನೆ. ಜೇನ್ ಆಸ್ಟಿನ್ನಳ (೧೭೭೫-೧೮೧೭) ವಿಚಾರದಲ್ಲಿ ಬಿಚ್ಚು ಮನಸ್ಸಿನ ಮೆಚ್ಚುಗೆಯ ಮಾತುಗಳನ್ನಾಡಿ ಪ್ರೋತ್ಸಾಹಿಸಿದ್ದನ್ನು ಸ್ಮರಿಸಿಕೊಳ್ಳಬಹುದು. ಸ್ಕಾಟ್ ತನ್ನ ವಿಖ್ಯಾತವಾದ ಚಾರಿತ್ರಿಕ ಕಾದಂಬರಿಗಳಲ್ಲಿ ಸತ್ಯ ಮತ್ತು ಕಲ್ಪನೆಗಳ ಮಧ್ಯೆ ಒಂದುವಿಧವಾದ ಸಮತೋಲನವನ್ನು ಸ್ಥಾಪಿಸಲು ಪ್ರಯತ್ನಿಸಿದ್ದಾನೆ. ಆದರೆ ಈ ಒಂದು ಪ್ರಯತ್ನದಿಂದಾಗಿ ಇತಿಹಾಸ ಪ್ರಸಿದ್ಧರಾದ ಹಲವು ವ್ಯಕ್ತಿಗಳು ಸ್ಕಾಟನ ಕಾದಂಬರಿಗಳಲ್ಲಿ ಗೌಣ ಪಾತ್ರಗಳಾಗಿ ಪರಿವರ್ತಿತವಾದುದೂ ಉಂಟು. ಉದಾಹರಣೆಗೆ ಅವನ 'ಐವಾನ್ ಹೋ' ಒಂದು ತೀರ ಸಾಮಾನ್ಯ ಮಟ್ಟದ ಕಾದಂಬರಿ. ಅದರಲ್ಲಿ ಬರುವ ಪಾತ್ರಗಳಲ್ಲಿ ಜೀವಂತ ಕಳೆಯೇ ಇಲ್ಲ. ಅಲ್ಲಿನ ಪಾತ್ರಗಳು ಜಾಹೀರಾತುಗಳನ್ನು ತಗಲಿಸುವ ತನ್ನತನವಿಲ್ಲದ ಹಲಗೆಗಳಂತಿವೆ. ಆದರೆ ಆತ ಬರೆದ 'ಕೆನಿಲ್‌ವರ್ತ್'ಮಾತ್ರ ಒಂದು ಉತ್ತಮ ಐತಿಹಾಸಿಕ ಕಾದಂಬರಿ. ಕಾದಂಬರಿಕಾರನಾದ ಸ್ಕಾಟ್ ಈ ಕೆನಿಲ್‌ವರ್ತ್ ಕಾದಂಬರಿಗೆ ಪ್ರಧಾನವಾದ ಪ್ರೇರಕ ಶಕ್ತಿಗಳನ್ನು ಹೇಗೆ ಬಳಸಿಕೊಂಡಿದ್ದಾನೆಂದುದನ್ನು ಸಮೀಕ್ಷಿಸಿದರೆ ಸೋಜಿಗವಾಗುತ್ತದೆ. ಅವನು ಉಪಯೋಗಿಸಿಕೊಂಡ ಎಲ್ಲ ಆಧಾರಗಳು ಇಂತಿವೆ :

೧. Ashmole ಬರೆದ Antiquities of Berkshire ಎಂಬ ಗ್ರಂಥದಿಂದ ಹೆಚ್ಚು ಸುದ್ದಿಯನ್ನು ಸ್ಕಾಟ್ ಸಂಗ್ರಹಿಸಿದ್ದಾನೆ.

೨. Mickle ಬರೆದ Cumnor Hall ಎಂಬ ಪದ್ಯ ಮತ್ತು ಜಾನಪದ ಗೀತೆಯ ಒಂದು ಸಾಲು ;

The rose is pale and
The lily is dead !
What flower hath can
Endure the storm blown !
Among village beauties
I was one !

"Prepare, countess, thy end is near'' (Ballad)

೩. Spirit of the place "Kenilworth'' ಎಂಬ ಕೃತಿ.

೪. Kenilworth Illustrated ಎಂಬ ಸುಂದರ ಹೊತ್ತಗೆಯೊಂದು ಚಿಸ್ವಿಕ್‌ನಲ್ಲಿ ೧೮೨೧ ರಲ್ಲಿ ಅಚ್ಚಾಯಿತು. ಅದರಲ್ಲಿ ಕೆನಿಕಲ್‌ವರ್ತ್ ಭವನದ ಚಿತ್ರಕರ್ಮ ಹಾಗೂ ಶಿಲ್ಪದ ವಿವರವಿತ್ತು.

೫. Robert Lancham ಎಂಬಾತನು ಕೆನಿಲ್‌ವರ್ತ್ ಭವನದಿಂದ ಲಂಡನ್ನಿನಲ್ಲಿದ್ದ ತನ್ನ ಗೆಳೆಯನೊಬ್ಬನಿಗೆ ಬರೆದ ಪತ್ರದಲ್ಲಿನ ವಿವರ.

೬. ಕಾನ್ಸ್‌ಟೇಬಲ್ ಎಂಬ ಪುಸ್ತಕ ವ್ಯಾಪಾರಿಯ ಸಲಹೆಯೂ ಸ್ಕಾಟ್‌ಗೆ ಈ ಕಾದಂಬರಿಯನ್ನು ಬರೆಯಲು ಪ್ರೇರಕವಾಯಿತು.

ವಾಲ್ಟರ್ ಸ್ಕಾಟ್ ಮೊದಲು ಮೂರು ಹೋಗಿದ್ದ ಕ್ಯುಮ್ನಾರ್ ಹಾಲ್ ಎಂಬ ರಮ್ಯ ಪದ್ಯದ ಅದೇ ಹೆಸರನ್ನು ತನ್ನ ಕಾದಂಬರಿಗೆ ಇಡಬೇಕೆಂದು ಇದ್ದ. ಆದರೆ ಕಾನ್ಸ್‌ಟೇಬಲ್ ಅದಕ್ಕೆ ಕೆನಿಲ್‌ವರ್ತ್ ಎಂಬ ಹೆಸರಿಡಬೇಕೆಂದು ಸೂಚಿಸಿದ, ಪ್ರಾರ್ಥಿಸಿದ. ಕೆನಿಲ್‌ವರ್ತ್ ಎಂಬುದು ಒಂದು ಪಾತ್ರವಲ್ಲ, ಅದೊಂದು ರಾಜಮಂದಿರ. ಆದರೆ ಅದೇ ಕಾದಂಬರಿಯ ಕೇಂದ್ರ. ಎಲ್ಲ ಪಾತ್ರಗಳ ಯಾತ್ರೆಯೂ ಅತ್ತಲೇ, ರಾಣಿಯಿಂದ ಹಿಡಿದು ಲ್ಯಾಂಬೋರ್ನನವರೆಗೆ. ಕೇವಲ ಅರ್ಧಪುಟದಲ್ಲಿ ಹೇಳಬಹುದಾದ ಕಿರುಗತೆಯೊಂದನ್ನು ಸ್ಕಾಟ್ ತನ್ನ ಜಾಣ್ಮೆಯಿಂದ ಆರುನೂರು ಪುಟದವರೆಗೂ ನೆಯ್ದಿದ್ದಾನೆ. ಕೆನಿಕಲ್‌ವರ್ತ್ ಕಾದಂಬರಿಗೆ ಷೇಕ್ಸ್‌ಪಿಯನ 'ಓಥೆಲೋ' ನಾಟಕ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಅಲ್ಲಿನ ಕರವಸ್ತ್ರದ ಪಾತ್ರ ಇಲ್ಲಿನ ಪತ್ರ ನಡೆಸಿದೆ. ಅಲ್ಲಿನ ಅಯಾಗೋವಿನ ಪಾತ್ರವು ಇಲ್ಲಿನ ವಾರ್ನಿಯ ಪಾತ್ರವಾಗಿದೆ. ಆತ ಹೇಗೆ ಡೆಸ್ಡಿಮೋನಳ ಮೇಲಿನ ಅಪರಾಧಕ್ಕೆ ಪೋಷಕವಾದ ಎಲ್ಲ ರುಜುವಾತುಗಳನ್ನೂ ಒದಗಿಸುವುದಕ್ಕೆ ತಕ್ಕ ಕಾರ್ಯ ನಡಸಿದ್ದಾನೋ ಹಾಗೆ ವಾರ್ನಿಯೂ ಇಲ್ಲಿ ಅಂಥ ಕಾರ್ಯ ನಡಸಿದ್ದಾನೆ. ಕೆನಿಲ್‌ವರ್ತ್ ಒಂದು ತುಂಬ ದಾರುಣವಾದ ದುರಂತ ಕಥೆ. ಆದರೆ ದುರಂತ ವ್ಯಕ್ತಿ ಆಕೆಯ ಕಷ್ಟಕೆ ಪಾತ್ರಳಲ್ಲ. ಅವಳಲ್ಲಿ ಯಾವ ಲೋಪವೂ ಇಲ್ಲ. ಒಥೆಲೋದ ಡೆಸ್ಡಿಮೋನಾಳಂತೆ ಇಲ್ಲಿನ ಅಮಿ ನಿಷ್ಕಾರಣವಾಗಿ ಶಿಕ್ಷೆಯನ್ನು ಅನುಭವಿಸುತ್ತಾಳೆ. ಆದರೆ ಅಲ್ಲಿ ಆಕೆ ಪತಿಯ ಸ್ವಹಸ್ತದಿಂದಲೇ ಸಾವನ್ನಪ್ಪಿದರೆ ಇಲ್ಲಿ ಈಕೆ ಪತಿಯಿಂದಾಗಿ ದುರ್ಮರಣವನ್ನು ಅಪ್ಪಬೇಕಾಗುತ್ತದೆ. ಅಮಿ ಚಿತ್ರಗ್ಲಾನಿಯಿಂದ ನೊಂದು ಬೆಂದು, ಪಂಜರದ ಗಿಳಿಯಂತೆ ಸೆರೆಯಲ್ಲಿ ಸಿಕ್ಕು ಸೊರಗಿ ಸೊರಗಿ ಕರಗಿ ಹೋಗುತ್ತಾಳೆ. ಈ ಕಾದಂಬರಿಗೆ ಚರಿತ್ರೆಯ ಕವಚ ಹೆಚ್ಚು ರಮಣೀಯತೆಯನ್ನು ಕೊಟ್ಟಿದೆ. ಯಾರ ಆಳ್ವಿಕೆಯ ಕಾಲದಲ್ಲಿ ಇಂಗ್ಲೆಂಡಿನ ವೈಭವ ಅತ್ಯುನ್ನತಿ ಹೊಂದಿ ಮೆರೆಯಿತೊ ಆ ಎಲಿಜಬೆತ್ ರಾಣಿಯ ಕಾಲದಲ್ಲಿ ಈ ಕಥೆ ನಡೆಯುತ್ತದೆ. ಆ ಕಾಲದ ರಾಜಕೀಯ ಹಾಗೂ ಸಾಮಾಜಿಕ ಜನ ಜೀವನವನ್ನು ಈ ಕಾದಂಬರಿ ತುಂಬ ಚೆನ್ನಾಗಿ ಪ್ರತಿಬಿಂಬಿಸುತ್ತದೆ. ಸ್ಕಾಟ್‌ನ ಉಳಿದ ಅನೇಕ ಕಾದಂಬರಿಗಳಂತೆ ಇಲ್ಲಿಯೂ ಕೆಲವು ಪಾತ್ರರಚನೆಯಲ್ಲಿ ಶಿಥಿಲತೆ ತಲೆದೋರಿ ಜೀವಕಳೆ ತುಂಬಿ ಬಂದಿಲ್ಲವಾದರೂ ಅವನ ಅಗ್ಗಳಿಕೆ ಇರುವುದು ಆತ ಕಾದಂಬರಿಗೆ ಕೊಟ್ಟ ಒಟ್ಟು ಆಕಾರ ಮತ್ತು ಅದರ ಸುತ್ತಲೂ ನಿರ್ಮಿತವಾದ ಅದ್ಭುತ ಬೆಳವಣಿಗೆಯಲ್ಲಿ ಆತ ಎಂಥ ಸೊಗಸಾದ ಕಥೆಗಾರನೆಂಬುದಕ್ಕೆ ಈ ಕಾದಂಬರಿ ಉತ್ತಮ ನಿದರ್ಶನ. ಇಲ್ಲಿ ಬರುವ ವಾರ್ನಿಯ ಪಾತ್ರ ಸ್ಕಾಟ್‌ನ ಹೊಸ ಸೃಷ್ಟಿ. ಆತ ಆಧರಿಸಿ ಬರೆದ ಮೂಲ ಸಾಮಗ್ರಿಗಳಲ್ಲಿ ವಾರ್ನಿಯ ಉಲ್ಲೇಖವಿಲ್ಲ. ಕಾಳಿದಾಸ ತನ್ನ ಶಾಕುಂತಲಾ ನಾಟಕದಲ್ಲಿ ದುಷ್ಯಂತ ಮತ್ತು ಶಕುಂತಲೆಯರ ಸಮಾಗಮಕ್ಕೆ ದೂರ್ವಾಸನ ಶಾಪವನ್ನು ಸೃಷ್ಟಿಸಿಕೊಂಡಂತೆ ಸ್ಕಾಟ್ ಇಲ್ಲಿ ಲೀಸೆಸ್ಟರ್ ಮತ್ತು ಅಮಿಯ ಸಮಾಗಮಕ್ಕೆ ವಾರ್ನಿಯೆಂಬ ಅಡ್ಡಗೋಡೆಯನ್ನು ಕಲ್ಪಿಸಿದ್ದಾನೆ. ಧೈರ್ಯ ಹಾಗೂ ಚಮತ್ಕಾರಗಳೆರಡೂ ವಾರ್ನಿಯಲ್ಲಿ ಸಮವಾಗಿ ಸೇರಿದ್ದುವು. ಆತ ತನಗೆ ಬೇಕೆಂದಾಗ ಕ್ಯಾಸಿಯಸ್‌ನಂತೆ, ಲೀಸೆಸ್ಟರನನ್ನು ಕುಣಿಸುತ್ತಿದ್ದನು ಬ್ರೂಟಸನಂತೆ ಇರುವ ಲೀಸೆಸ್ಟರನೂ ಕೂಡ ವಾರ್ನಿಯ ಮಾತನ್ನು ಕೇಳಬೇಕಾಗುತ್ತಿತ್ತು.

ಕಾದಂಬರಿಯಲ್ಲಿ ಬರುವ ರಾಣಿ ಎಲಿಜಬೆತ್ ಕೂಡ ಆಸ್ಥಾನದ ಎರಡು ಪಕ್ಷದ ನಾಯಕರನ್ನು ಎರಡು ಚೆಂಡುಗಳನ್ನು ಆಡಿಸುವಂತೆ ಆಡಿಸುತ್ತಿದ್ದಳು. ಅವಳು ತನ್ನ ಕೃಪಾ ಕಟಾಕ್ಷವನ್ನು ಒಮ್ಮೆ ಲೀಸೆಸ್ಟರನ ಕಡೆ ಹಾಯಿಸಿದರೆ ಇನ್ನೊಮ್ಮೆ ಸಸೆಕ್ಸ್‌ನ ಅರ್ಲ್ ಕಡೆ ಹೊರಳಿಸುತ್ತಿದ್ದಳು. ಅವಳು ತನ್ನ ಕೃಪಾ ಕಟಾಕ್ಷ

ವನ್ನು ಇಬ್ಬರ ಕಡೆಗೂ ಬೀರುತ್ತಾ ಇದ್ದಳು. ಅವಳು ದುಡುಕು ಸ್ವಭಾವದಳಂತೆ ಸರಸ ಸ್ವಭಾವದವಳೂ ಆಗಿದ್ದಳು. ಅವಳ ನೌಕಾವಿಹಾರವೇ ಇದಕ್ಕೆ ಸಾಕ್ಷಿ ಹೇಳುತ್ತದೆ. ರಾಣಿಯ ಆಸ್ಥಾನದಲ್ಲಿನ ನಿಶಿತವಾದ ಆಯುಧಗಳಿಂದರೆ ರೂಪ, ಆಕಾರ ಮತ್ತು ವರ್ಚಸ್ಸು ಎಲಿಜಬೆತಳ ನ್ಯಾಯ ನಿಷ್ಠುರತೆ, ಸಾಮಾನ್ಯ ಪ್ರಜೆಗೂ ನ್ಯಾಯ ದೊರಕಿಸಿ ಕೊಡಬೇಕೆಂಬ ನಿರ್ಧಾರ ಯಾರೂ ಮೆಚ್ಚುವಂಥವು. ಲೀಸೆಸ್ಟರನ ವಿಷಯದಲ್ಲಿ ಸ್ಕಾಟ್ ಅಥವಾ ಕಾದಂಬರಿಕಾರ ಅನುಕಂಪ ಹೊಂದಿ ಅವನನ್ನು ಉದ್ಧರಿಸಲೆತ್ನಿಸಿದ್ದಾನೆ. ಆದರೆ ಅವನ ಮಹತ್ವಾಕಾಂಕ್ಷೆಯೇ ಅವನ ಅಧಃಪತನಕ್ಕೆ ಕಾರಣವಾಗುತ್ತದೆ. ಪತ್ನಿಯನ್ನೇ ಬಲಿತೆಗೆದುಕೊಂಡ ಪತಿಯ ಜೀವ ಬದುಕುವುದಾದರೂ ಎಂತು? ಅವನ ಮಡದಿ, ಮುದ್ದು ಮುಗ್ಧನಲ್ಲೆ ಅಮಿರೋಬ್ಸಾರ್ಟಳ ಪರವಾಗಿ ಅವಳ ನ್ಯಾಯಪಕ್ಷ ಹಿಡಿದು ಅವಳಿಗಾದ ಅನ್ಯಾಯದ ವಿಷಯವನ್ನು ರಾಣಿಗೆ ಶ್ರುತಪಡಿಸುವ ವ್ಯಕ್ತಿಯೊಬ್ಬಬೇಕಷ್ಟೆ. ಅದಕ್ಕಾಗಿ ಟ್ರೆಸಿಲಿಯನ್ ಪಾತ್ರ ಚೆನ್ನಾಗಿ ಬಂದಿದೆ. ಕಾದಂಬರಿಯ ಬೆಳವಣಿಗೆಗೆ ಇವನು ಪ್ರಮುಖ ಪೋಷಕ ಪಾತ್ರ. ಕಲ್ಪನಾವಿಲಾಸಿಯೂ ಕವಿ ಸಹಜ ಹೃದಯಿಯೂ ಆದ ಟ್ರೆಸಿಲಿಯನ್ ಪ್ರಣಯೋತ್ಸಾಹದ ಪ್ರೇಮವಳಿದು ಸಹೋದರೀ ವಾತ್ಸಲ್ಯಭಾವ ಉದ್ಬೋದಗೊಂಡು ಅಮಿಯನ್ನು ಆಕೆಯ ತಂದೆಯಲ್ಲಿಗೆ ಕಳಿಸಲು ಸಹಾಯ ಹಸ್ತನೀಡುತ್ತಾನೆ. ಆಗ ಇನ್ನೇನು ಮಂಗಳಾಂತವಾಗುತ್ತದೆಂದು ತೋರುವ ಕಾದಂಬರಿ ಮತ್ತೆ ದುರಂತದತ್ತ ಕವಲೊಡೆಯುತ್ತದೆ. ಆಗತಾನೆ ಕಾಣಸಿಕೊಂಡಿದ್ದ ಆಶಾಜಲ ಮೃಗಜಲವಾಗುತ್ತದೆ. ಆ ನೀರು ಮರಳು ಕಾಡಿಗೆ ಸೇರಿದ ಬಿಂದಿಗೆ ನೀರಿನಂತೆ ಇಂಗಿ ಹೋಗುತ್ತದೆ.

ಐತಿಹಾಸಿಕತೆಯ ಜೊತೆಗೆ ರಮ್ಯತೆ ಹಾಗೂ ವಾಸ್ತವಿಕತೆಯ ಜೋಡಣೆ ಇರುವುದರಿಂದ ಚಾರಿತ್ರಿಕ ಕಾದಂಬರಿ ಓದುಗನಿಗೆ ಅಪಾರವಾದ ಆನಂದವನ್ನು ಉಂಟುಮಾಡುವುದು ಸಾಧ್ಯವಿದೆ. ಈ ಮೂರು ಗುಣಗಳ ಮುಪ್ಪುರಿಯಿಂದ ನೂರು ಕಾಲ ನಿಲ್ಲುವ ಸತ್ವ ಕಾದಂಬರಿಗೆ ಬರುವ ಸಾಧ್ಯತೆ ಅಥವಾ ಅನುಕೂಲವಿದೆ. ಸರ್ ವಾಲ್ಟರ್ ಸ್ಕಾಟನನ್ನು ಬಿಟ್ಟರೆ ಅಲೆಕ್ಸಾಂಡರ್ ಡ್ಯೂಮಾ ಇನ್ನೊಬ್ಬ ಪ್ರಖ್ಯಾತ ಐತಿಹಾಸಿಕ ಕಾದಂಬರಿಕಾರನಾಗಿ ಕಾಣಿಸುತ್ತಾನೆ. ಡ್ಯೂಮಾ ಫ್ರೆಂಚ್ ಕಾದಂಬರಿಕಾರ ಫ್ರಾನ್ಸಿನ ಈ ಸುಪುತ್ರ ಸುಮಾರು ೨೪೦ ಪುಸ್ತಕಗಳನ್ನು ಬರೆದಿದ್ದಾನೆ ಇವುಗಳಲ್ಲಿ ೧೨೦ ಗ್ರಂಥಗಳು ಕಾದಂಬರಿಗಳು.

ಬಸವಣ್ಣನವರ ಭಕ್ತಿ

—ಬಿ. ಎ. ರಂಗನಾಥ

ಪಿಂಡ, ಬ್ರಹ್ಮಾಂಡ ಎಂದು ಎರಡು ಮಹತ್ತರ ವಸ್ತುಗಳಿವೆ. ಒಂದು ಸೂಕ್ಷ್ಮ, ಇನ್ನೊಂದು ಘನ. ಬ್ರಹ್ಮಾಂಡದಲ್ಲಿ ಪರಮಾತ್ಮನು ಸರ್ವಾಂತರ್ಯಾಮಿಯಾಗಿ ವ್ಯಾಪಿಸಿರುವಂತೆ, ಪಿಂಡಾಂಡದಲ್ಲಿ ಜೀವಾತ್ಮರೂಪದಲ್ಲಿ ವ್ಯಾಪಿಸಿದ್ದಾನೆ. ಕ್ರಿಮಿಕೀಟಗಳಿಂದ ಮೊದಲುಗೊಂಡು ಪರಮಾತ್ಮನ ಅತ್ಯುನ್ನತ ಸೃಷ್ಟಿಯಾಗಿರುವ ಮನುಷ್ಯನ ವರೆಗೆ ಅಸಂಖ್ಯ ಜೀವಗಳು ಪಿಂಡಾಂಡಗಳೇ. ಈ ಪಿಂಡವನ್ನು ಮತ್ತು ಪಿಂಡಸ್ಥವಾಗಿರುವ ಪರಮಾತ್ಮನನ್ನು ಅರಿತುಕೊಳ್ಳುವುದೇ ಪಿಂಡಸ್ಥಳದ ಅರಿವು. ಪಿಂಡಸ್ಥಲದ ಅರಿವಿಲ್ಲದೇ ಷಟ್‌ಸ್ಥಲದ ಮಾರ್ಗದಲ್ಲಿ ಸಾಧಕರು ಕಾಲಿಡಲಾರರು. ಆದಕಾರಣ ಶಿವ ಶರಣರೆಲ್ಲರೂ ತಮ್ಮ ವಚನಗಳಲ್ಲಿ ಈ ಪಿಂಡಸ್ಥಲದ ವಿಚಾರವನ್ನು ವಿವಿಧ ರೀತಿಯಲ್ಲಿ ಬಣ್ಣಿಸಿದ್ದಾರೆ. ಅದರಲ್ಲಿ ಬಸವಣ್ಣನವರ ಅರಿವು ಹೀಗೆ ಇದೆ:

ಪರಮಾತ್ಮ ಎಂದರೆ ಏನು? ಅವ ಯಾರು? ಅವನ ಸ್ವರೂಪ ಏನು? ಎಂಬುದನ್ನು ಭಕ್ತನು ತಿಳಿದು ಕೊಳ್ಳುವಾಗ—ತಾನು ಯಾರು—ಶಿವ ಯಾರು? ಪರಮಾತ್ಮನ ಶಕ್ತಿ ಯಾವುದು? ಭಕ್ತನು ಪರಮಾತ್ಮನಲ್ಲಿ ಸಮರಸ ಹೊಂದಲು ನಡೆಸಬೇಕಾದ ಸಾಧನೆ. ಪಡೆಯಬೇಕಾದ ಸಿದ್ಧಿಯಾವುದು, 'ಭಕ್ತಿ' ಎಂಬ ಸಾಧನವೇ ಮೋಕ್ಷಕ್ಕೆ ಸಾಧಕವಾದ ಅಂಶವು ಇವರ ಅರಿವೇ ಪಿಂಡ—ಜ್ಞಾನವಾಗಿದೆ.

ಶಿವನದು ಮಹತ್ತಾದ ರೂಪವು. ಇದು ಅಗೋಚರ ಶಕ್ತಿಯು. ಅವನೇ ಈ ಪ್ರಪಂಚಕ್ಕೆ, ಈ ಪಿಂಡಕ್ಕೆ ಗತಿ. ಶಿವ—ಶಿವಭಕ್ತರ ಸಂಬಂಧ ನಿಕಟವಾದಲ್ಲದೇ ಐಕ್ಯ ಸಾಧ್ಯವಿಲ್ಲವು. ಈ ಅರಿವು ಭಕ್ತನ ಹಂಬಲದಲ್ಲಿಯೂ ಆಸೆಯಲ್ಲಿಯೂ ತಿಳಿದು ಬರುತ್ತದೆ. ಶಿವನು ನಿರಾಕಾರ, ನಿರ್ಗುಣ. ಈ ಪಿಂಡ ಅಥವಾ ಜೀವವು ಅದರ ಅಂಶ. ಮತ್ತೆ ಆ ಶಿವನಲ್ಲಿ ಲೀನವಾಗುವುದೇ ಈ ಸಂಸಾರ ಚಕ್ರದ ಸಾಧನವು; ಆತ್ಮವು ಈ ಲೋಕದಲ್ಲಿ ಹೇಗೆ ಅಡಗಿ ಕುಳಿತಿದೆ? ಜೀವ–ಈಶ ಸಂಬಂಧವು ಹೇಗಿದೆ? ಜೀವ ಈಶನನ್ನು ಕುರಿತು ಹೇಗೆ ಹಂಬಲಿಸುತ್ತದೆ–ಇವು ಭಕ್ತನಾದವನಿಗೆ ಪಿಂಡ—ಪಿಂಡ ಜ್ಞಾನದಲ್ಲಿ ಒಡಮೂಡಿ ಬರುವ ಜ್ಞಾನಾಂಗಗಳು (Problems of knowledge). ಬಸವಣ್ಣನವರು ಈ ಸುಂದರವಾದ ವಚನದಲ್ಲಿ ಪಿಂಡ–ಹಾಗೂ ಶಿವನ ಸಂಬಂಧವನ್ನು ಸೂಚಿಸಿರುವರು:

"ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನ ಹಿದ್ದಿತು.
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು.
ನನೆಯೊಳಗಣ ಪರಿಮಳದಂತಿದ್ದಿತ್ತು.
ಕೂಡಲ ಸಂಗಮದೇವರ, ನಿಲವು ಕನ್ನೆಯ ಸ್ನೇಹದಂತಿದ್ದಿತ್ತು."

ಪಿಂಡಸ್ಥನಾಗಿರುವ ಪರಮಾತ್ಮನ ಸ್ನೇಹ ಕನ್ನೆಯ ಸ್ನೇಹದಂತೆ ಇದೆ. ಅಗೋಚರ ಹಾಗೂ ನಿರ್ಲಿಪ್ತ ಅಸ್ತಿತ್ವದ ಅರಿವನ್ನು ಸೂಚಿಸಲಾಗಿದೆ. ಅನುಭವ ಮಾತ್ರದಿಂದ ಪ್ರತಿಯೊಬ್ಬನೂ ತಿಳಿದುಕೊಳ್ಳಬಲ್ಲ

ನೆಂಬುದೇ ಬಸವಣ್ಣನವರ ಮತವು. ಈ ಪಿಂಡಸ್ಥನಾಗಿ ರುವ ಪರಮಾತ್ಮನೂ 'ನಾನು'ಎಂಬ ವಸ್ತುವೂ ಎರಡೂ ಒಂದೇ. ಪಿಂಡ ಅರ್ಥಾತ್ ಜೀವವು ಮೂಲತಃ ಶಿವ ನನ್ನು ತನ್ನಲ್ಲಿಯೇ ಹೊಂದಿತ್ತು. ಅಲ್ಲದೇ ಕನ್ಯೆಯ ಸ್ನೇಹದಂತೆ ಇದ್ದಿತು ಎಂದು ಹೇಳುವಲ್ಲಿ ಬಸವಣ್ಣ ನವರು 'ನಾನು' ಮತ್ತು 'ನೀನು' ಬೇರೆಯಲ್ಲ. ಅವಿ ನಾಶಿಯಾದ ಆತ್ಮನ ರೂಪ ತಾಳಿದ ಪರಮಾತ್ಮನೇ ಜೀವಾತ್ಮನಾಗಿ ಕುಳಿತಿದ್ದಾನೆ. ಇದರ ಸ್ವರೂಪವೇನು —ಎಂದು ಕಂಡುಕೊಳ್ಳುವುದೇ ಈ ಸ್ಥಲದ ಅಂದರೆ ಪಿಂಡಸ್ಥಲದ ನಾಂದಿಯಾಗಿದೆ.

ಈ ಮೇಲಣ ಅರಿವಿನಿಂದ 'ತಾನು ಯಾರು ? ಈ ಪ್ರಪಂಚದಲ್ಲಿ ತನ್ನ ವ್ಯವಹಾರವೇನು ?' ಎಂಬ ಪ್ರಶ್ನೆ ಮತ್ತೆ ಮತ್ತೆ ಕೇಳಿಕೊಳ್ಳುವ ಮುನ್ನ ಮಾನವನು ಪರಮಾತ್ಮನ ಅಂಶವೆಂದೂ ಅನಾದಿಕಾಲದಿಂದ ಪರ ಮಾತ್ಮ—ಜೀವಾತ್ಮರ ಸಂಬಂಧ ಎಂಬ ಮೂಲ— ಪ್ರಜ್ಞೆ ಸಾಧಕನಲ್ಲಿರಬೇಕು. ಅದುವೆ ಇದ್ದಿತೆಂದೂ ಈ ವಚನದಿಂದ ತಿಳಿದು ಬರುತ್ತದೆ.

"ಕಾಳಿಯ ಕಣ್ ಕಾಣದಿಂದ ಮುನ್ನ, ತ್ರಿಪುರ
ಸಂಹಾರದಿಂದ ಮುನ್ನ
ಹರಿ ವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣ
ದಿಂದ ಮುನ್ನ,
ಮುನ್ನ, ಮುನ್ನ, ಮುನ್ನ,
ಅಂದಿಂಗೆಳೆಯ ನೀನು, ಹಳೆಯ ನಾನು
ಮಹಾದಾನಿ ಕೂಡಲಸಂಗಮದೇವಾ ...."

ಈ ವಚನದಿಂದ ಪುರುಷನಿಂದ ಪ್ರಕೃತಿ ಬಂದಳು ಎಂಬ ಕಲ್ಪನೆ ಹಾಗು ಪುರುಷನೇ ತನ್ನ ಲೀಲೆಗಾಗಿ ಪ್ರಕೃತಿಯನ್ನು ಕಳುಹಿಸಿದನು. ಈಕೆಯು ತನ್ನ ಸೃಷ್ಟಿ ಯನ್ನು ಆರಂಭಿಸುವ ಮುನ್ನ ಅಂದರೆ ಪುರುಷನು— ಪುರುಷನೇ ಆಗಿ ಇರುವಾಗ ಅಂದರೆ ಪರಮಪುರುಷ ನಿಂದಲೂ ಆತ್ಮ —ಪರಮಾತ್ಮರ ಸಂಬಂಧವು ಇದೆ. "ಎಳೆಯನೀನು—ಹಳೆಯನಾನು' 'ಮಹದಾನಿ'—ಈ ಜೀವವನ್ನು ಅರ್ಥಾತ್ ಈ ಪಿಂಡವನ್ನು ಕೊಟ್ಟಿರುವ ಪರಮಾತ್ಮನ ಅಣುರೂಪಿಯಾದ ಈ ಆತ್ಮವನ್ನು ಹೊಂದಿ ರುವ —'ನಾನು' ಈ 'ನಾನು ನೀನು' ಸಂಬಂಧದಿಂದ ಭಕ್ತನು ಭಕ್ತ ಸ್ಥಲದಲ್ಲಿ ಪರಮಾತ್ಮನ ಸಂಬಂಧವನ್ನು ತನ್ನೊಂದಿಗೆ ಕಲ್ಪಿಸಿಕೊಳ್ಳುವನು. ಜೀವದ ಕಲ್ಪನೆ ಹೀಗೆ ಆಗಿ 'ಪರಮಾತ್ಮನಿಗೂ—ಆತ್ಮಕ್ಕೂ' ಇರುವ ಸಂಬಂಧದ ಅರಿವಾದಾಗ "ಪಿಂಡಕೆ ಜ್ಞಾನವಾಯಿತು" ಎಂದು ಅರ್ಥವಾಗುವುದು.

'ಹರಿಹರ' ಕಲ್ಪನೆಯೂ ಇತ್ತೀಚಿನ ಅರಿವು ಎಂದೂ ಅದಕ್ಕೆ ಹಿಂದಿನಿಂದಲೂ ಇರುವ ಸಂಬಂಧ ಇನ್ನಷ್ಟು ಸ್ಫುಟವಾಗಿ ಈ ವಚನದಲ್ಲಿ ಮೂಡಿ ಬಂದಿದೆ. ಪರಮಾತ್ಮನಾದರೋ ತನ್ನ ವಿನೋದ ಭೂಮಿ ಎನಿಸಿದ ಅಂಗನನ್ನು ಎಂದೆಂದಿಗೂ ಕೈಬಿಡದೇ ಅವನೊಳಗೆ ಸೇರಿ ಕೊಂಡಿರುವನು. ಜೀವನಿಗೆ ಅವನಿಗಿಂತಲೂ ಬೇರೆ ಆಪ್ತ ಬಂಧುವೇ ದೊರೆಯಲಾರನು. ಅದೇ "ಜಗದ ನಂಟ ನೀನೇ ದೇವ"ಎನ್ನುವ ಮಾತುಗಳು ; ಪರಮಾತ್ಮ ನಿಗೂ ಜೀವಾತ್ಮನಿಗೂ ಸಂಬಂಧ ಹೇಗಿತ್ತು ?

"ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ, ನಾನು
ಜ್ಞಾನವೆಂಬ ವಾಹನ ವಾಗಿರ್ದೆ ಕಾಣ,
ಅಯ್ಯಾ, ನೀನು ನಾಟ್ಯಕ್ಕೆ ನಿಂದಲ್ಲಿ ನಾನು
ಚೈತನ್ಯವೆಂಬ ವಾಹನವಾಗಿರ್ದೆ ಕಾಣ.
ಅಯ್ಯಾ, ನೀನು ಆಕಾರವಾಗಿರ್ದಲ್ಲಿ ನಾನು
ವೃಷಭನೆಂಬ ವಾಹನವಾಗಿರ್ದೆ ಕಾಣ,
ಅಯ್ಯಾ, ನೀನೆನ್ನ ಭವವ ಕೊಂದಿಹೆನೆಂದು
ಜಂಗಮ ಲಾಂಛನನಾಗಿ ಬಂದೊಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣ,
ಕೂಡಲ ಸಂಗಮದೇವಾ."

ಪರಮ ಪುರುಷನಿಗೆ ರೂಪವು ಇಲ್ಲ. ನಿರಾಕಾರ, ನಿರ್ಗುಣ. ಆದರೆ ದೇವನಿಗೆ ಆಕಾರ ಧರಿಸಲು ಬರು ತ್ತದೆ. ಪ್ರಕೃತಿಯಿಂದ ಪುರುಷನು ಬೇರೆಯಾಗುವ ಮುನ್ನ 'ಜ್ಞಾನಶಕ್ತಿಯ'ಒಂದು ಅಣು. ಈ ಜೀವಾತ್ಮ

ಅದೇ 'ನಾನು' ಎನ್ನುತ್ತಾರೆ ಬಸವಣ್ಣನವರು. ಇಲ್ಲಿ ಆತ್ಮ ಭಾವೂ ಜೀವ ಎನ್ನುವುದು ಸಾಮಾನ್ಯದಲ್ಲ ಜ್ಞಾನವೆಂಬ ಒಂದು ಕಣ—ಅದೂ ಪರಮಾತ್ಮನ ಒಂದು ಅಂಗವೇ ಎನ್ನುವ "ಐಕ್ಯ"ದಲ್ಲಿನ ಭಿನ್ನತೆ ಹಾಗೂ ನಂಟು ವ್ಯಕ್ತವಾಗಿದೆ

ತಾಂಡವ ನೃತ್ಯದ—ಅದ್ಭುತ ಶಕ್ತಿಯ ಪ್ರಕಟನೆಯ ನಂಟನ್ನೂ ಬಸವಣ್ಣನವರು ತಂಮ ಮಾನವನು ಪರಮಾತ್ಮನ ಅಂಶವೆಂದೂ, ಬಹಳ ಹಿಂದಿನ ಕಾಲದವನೆಂದೂ ತಿಳಿಸುವರು.

ಪರಮಾತ್ಮನಾದರೋ ನಿರಾಕಾರವಾದರೂ ಚೈತನ್ಯ ಮಯನಾಗಿ ತನ್ನ ವಿಚಿತ್ರವ ವ ಶಕ್ತಿಯ ಮಹಾವೈಭವದಿಂದ ಪ್ರಪಂಚದ ಸಕಲ ವ್ಯವಹಾರಗಳನ್ನು ಎಚ್ಚರದಿಂದ ನಡೆಸುತ್ತಿರುವನು. ಹೀಗೆ ವ್ಯವಹಾರ ನಿರತನಾಗಿದ್ದರೂ ಅವನಿಗೆ ಯಾವ ಸುಖ ದುಃಖವೂ ಅಂಟದಿರುವುದರಿಂದ ನಿರ್ಲಿಪ್ತನಾಗಿರುವನು. ಅದರಿಂದಲೇ ನಿರಂಜನ, ಜಂಗಮ, ಕೇವಲನೆಂದೂ ಅನುಭವಗಳಿಂದ ಕರೆಯಿಸಿಕೊಳ್ಳುವನು. ಜಂಗಮನಿಗೂ ಪರಮಾತ್ಮನಿಗೂ ಅಂತರವೇ ಇಲ್ಲ. ಇಂತಹ 'ಜಂಗಮ' ಎಂದರೆ ಲೋಕದಲ್ಲಿ ವ್ಯವಹರಿಸುತ್ತಿದ್ದರೂ ಲೌಕಿಕ ವಾಸನೆಗೆ ಅಂಟಿಕೊಳ್ಳದಿರುವ ಮಹಾಪ್ರಕಾಶವಾಗಿ ಬಂದು ಜನ್ಮಗಳನ್ನು ದೂರಿರಿಸಿ ಬಿಟ್ಟಿರುವೆನೆಂದು ಹೇಳಿದರೆ, ಆಗ ಈ ಜೀವಿಯು ಸ್ಥಿತಿಯಾದರೋ ಪರಮಾತ್ಮನ ಚಿಂತನೆಯುಳ್ಳ ಸಂಸಾರವನ್ನು ದೂರ ಮಾಡುವ ಸ್ಥಿತಿಯುಳ್ಳ ಇದೆ ಅದೇ "ಭಕ್ತಿ" ಯಸ್ಥಿತಿ. ಅದೇ ''ತಾನು ನಿರಂಜನನೇ, ದೇಹವು ದುಃಖವನ್ನು, ಏಕೆ ಹಚ್ಚಿಕೊಳ್ಳಬೇಕು ಪರಮಾತ್ಮನಿಂದಲೇ ದೇಹ, ಇಂದ್ರಿಯ, ಮನಸ್ಸು'' ಎಂಬ ಅರಿವಿನ ಮೂಡುವಿಕೆ ''ನೀವು ಬಯಸಿದ ಭವಾಂತರವಲ್ಲಿ ನಾನು ಬರುತಿರ್ಪೆನಯ್ಯಾ'' ಎಂಬ ವಚನದ ಮೂಲಕ ಏಳೇಳು ಜನ್ಮಗಳೂ ಶಿವಭಕ್ತನಾಗಿಯೇ ಆತ್ಮವು ಬಂದ ಕತೆ ಹೀಗಿದೆ. ಈ ಜೀವ ಶಿವನಲ್ಲಿ ಲೀನವಾಗಲು ಆಶಿಸಿದ್ದು ಸ್ಪಷ್ಟವಿದೆ.

ಪ್ರಥಮ ಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರ ಪರಮೇಶ್ವರನಿಗೆ ಭೃತ್ಯನಾಗಿ 'ಸ್ಕಂದ' ನಾಗಿ ಎರಡನೆಯ ಜನ್ಮದಲ್ಲಿ ಕಾರುಣ್ಯಕಾರನಾಗಿ ಶಿವನಲೀಲಾ ವಿನೋದಾ ರ್ಥವಾಗಿ ಮೂರನೆಯ ಜನ್ಮ 'ನೀಲಲೋಹಿತ'. ಅದೇ ಮನೋಹರನಾಗಿ ಮನಃಪ್ರೇರಕನಾಗಿ ನಾಲ್ಕನೆಯ ಜನ್ಮ. ಇನ್ನು ಐದನೆಯ ಭವವೋ ''ಸರ್ವಕಾಲ ಸಂಹಾರ ಮಾಡುವ 'ಕಾಲಲೋಚನ'. ಆರನೆಯ ಭವ ದಲ್ಲಿ **'ವೃಷಭ'** ನೆಂಬ ವಾಹನನಾಗಿ ಶಿವನಿಗೆ ವಾಲು **ವಾಹನ. ಈ ಏಳನೆಯ ಭವಾಂತರವೇ** 'ಬಸವ' ನೆಂಬ **ಗಣೇಶ್ವರನು ; ಶಿವನ ಪ್ರಸಾದಕ್ಕೆ** ಅರ್ಹನಾಗಲು ಈ ಎಲ್ಲಾ ಕಾರಣಗಳು ಶಿವನ ಇಚ್ಛೆಯೇ. ಬಸವಣ್ಣನವರ ರೂಪಿಯಾದ ಆತ್ಮವು ಹೀಗೆ ಆಶಿಸು ತ್ತದೆ —''ನಾನು ನಿನ್ನನ್ನು ಭಕ್ತಿಯ ಆಧಾರದಿಂದ ನೆನೆದು ಸುಖಿಯಾಗಿರುವೆನು. ನಾನು ನಿನ್ನನ್ನು ಧ್ಯಾನ ಮಾಡುತ್ತಿದ್ದುದರಿಂದ ನಿನ್ನ ಭಕ್ತಿಯು, ನನ್ನನ್ನು ಬದುಕಿಸಿದೆ. 'ಬಾಳು' ಯಾವಾಗಲೂ ಪರಮಾತ್ಮನ ಚಿಂತನದಲ್ಲಿ ಇರಬೇಕು. ಇದೇ ಆದರ್ಶದ ಬಾಳು".

'ಸತ್' ಎನ್ನುವುದು ದೇವರು. ಯಾವಾಗಲೂ ಇರುವಂತಹ ಸ್ವರೂಪವುಳ್ಳದ್ದು ಅದು ಅದರ ಅರಿವು ಅದೇ ಶಿವನ ಆರಾಧನೆಯು. ನಾವು ಜಪದಿಂದ ಮನಸ್ಸಿನ ಚಂಚಲತೆಯನ್ನು ಕಟ್ಟಿ ಹಾಕಬೇಕು. ಪ್ರಾಮಾಣಿಕತೆ, ನಿರ್ವಂಚನೆಯ ಬದುಕು ಆದರ್ಶಬಾಳು ಕೇವಲ ನಾವು—ಜಪದ ಯೋಗದಾಲದು. ಎಲ್ಲದರಲ್ಲಿಯೂ ಪರಮಾತ್ಮನನ್ನು ಕಾಣುವ, ಪರಮೇಶ್ವರನು ತನ್ನ ಅಂಶರಾದ ಜೀವರ ಜೊತೆಯುಲ್ಲಿರುವನೆಂಬ ಕಲ್ಪನೆಯೂ ಈ 'ಸ್ಥಲ'ದಲ್ಲಿ ಮೂಡುವುದು

ಷಟ್‌ಸ್ಥಲ ಸಿದ್ಧಾಂತದ ಪ್ರಕಾರ ದೇಹವು ಭೋಜ ವಸ್ತುಗಳನ್ನು ತುಂಬುವ ಚೀಲವಲ್ಲ. ಅದರೆ ಶಿವಾನು ವನ್ನು ಅನುಭವಿಸುವ ಪ್ರಸಾದ ಕಾಯ. ಇದರ ಅಶುದ್ಧತೆ ಮತ್ತು ಅಪವಿತ್ರತೆಗಳ ಸೋಂಕಿಲ್ಲ ಶಕ್ತಿಯು ಜೀವಾಂಶವಾದ ಜೀವನನ್ನು ಪ್ರಪಂಚ ಕಡೆಗೆ ಪ್ರವರ್ತಿಸಿದರೆ, "ಭಕ್ತಿಯು'' ಅವನನ್ನು ಪ್ರಪಂಚದಿಂದ ಶಿವನೆಡೆಗೆ ಒಯ್ಯುವುದು.

'ಅರಿವಿನ ನವನೀತವು, ಭಕ್ತಿಯ ರೂಪದಲ್ಲಿ ಪ **ಮಾತ್ಮನ ಸಂಬಂಧವನ್ನು** ಜೀವಿಗೆ ತಿಳಿಸಿಕೊಡುವ

ಹಂತವು ಷಟ್‌ಸ್ಥಲ ಸಿದ್ಧಾಂತದಲ್ಲಿ ಬಹುಮುಖ್ಯವೆನಿಸಿದೆ. ದೇವರನ್ನು ಮರೆತು ನಾವು ಅನೇಕ ಅನ್ಯಾಯಗಳನ್ನು ಮಾಡುತ್ತೇವೆ. ಆದರೆ ಜಾಗೃತ ಮನಸ್ಸು ಸದಾ ಇರಬೇಕು. ದೇವನೆಂಬುವನು ಎಲ್ಲಾ ಕಾಲದಲ್ಲಿಯೂ ಇದ್ದಾನೆ. ನಮ್ಮನ್ನೂ ನಮ್ಮ ಕಾರ್ಯಗಳನ್ನೂ ನೋಡುತ್ತಿರುತ್ತಾನೆ. ಈ ಕಲ್ಪನೆ ಸದಾ ಎಚ್ಚರವಾಗಿರಬೇಕು. ಇದರ ಸಾರವೇ ಈ ವಚನವು :—

ಕರಿಘನ : ಅಂಕುಶ ಕಿರಿದೆನ್ನಬಹುದೇ ? ಬಾರದಯ್ಯ.
ಗಿರಿಘನ : ವಜ್ರ ಕಿರಿದೆನ್ನಬಹುದೇ ? ಬಾರದಯ್ಯಾ
ತಮಂಧ ಘನ : ಜ್ಯೋತಿ ಕಿರಿದೆನ್ನಬಹುದೇ ? ಬಾರದಯ್ಯಾ
ಮರವು ಘನ : ನಿಮ್ಮ ನೆನೆವ ಮನ ಕಿರಿದೆನ್ನಬಹುದೇ ?
ಬಾರದಯ್ಯಾ ಕೂಡಲ ಸಂಗಮದೇವಾ.

ಹೀಗೆ ಭಕ್ತಿಯ ವಿಚಾರ, ಉತ್ಕಟತೆ, ಭಕ್ತಿ ಮನಸ್ಸಿನಲ್ಲಿ ತೋರಿರುವ ರೀತಿಯು ಒಂದು ರೀತಿಯ ಪ್ರೀತಿ ಅಥವಾ ರತಿಯ ರೂಪದಲ್ಲಿ ಬಸವಣ್ಣನವರು ವ್ಯಕ್ತಪಡಿಸಿರುವರು. ಒಂದೇ ಚೈತನ್ಯವು–ಪಿಂಡವು, ಮಹಾ ಪ್ರಕಾಶವಾಗಿ ಉಪಾಸ್ಯವೂ–ಅಲ್ಪ ಪ್ರಕಾಶನಾಗಿ ಉಪಾಸಕನೂ ಆಗಿ ಈ ದೇಹದಲ್ಲಿ ನೆಲಸಿರುವನೆಂಬ ಸಿದ್ಧಾಂತವು ಸ್ಪಷ್ಟವಾಗಿ ಪರಮಾತ್ಮನ-ಜೀವಿಯೂ (ನಂಟನು) ನನೆಯುವಲ್ಲಿ ತೋರಿಬರುವುದು. "ತಾನು ಯಾರು ? ಹೇಗೆ ಪರಮಾತ್ಮನಿಗೂ ತನಗೂ ನೆಂಟು ಉಂಟು ? ಜನ್ಮಕ್ಕೆ ಕಾರಣವೇನು ? ಎಂಬುದನ್ನು ಮತ್ತೆ ಮತ್ತೆ ಪ್ರಶ್ನಿಸುವಲ್ಲಿ ಪರಮಾತ್ಮನ ನಿರಂಜನ ನಿರಾಕಾರದ ಬೃಹತ್ ತಿಳಿವಳಿಕೆಗೆ ಜೀವಿ ಆಶಿಸುವ ಆತ್ಮನಾದವೇ ಪಿಂಡಸ್ಥಲ–ಪಿಂಡಜ್ಞಾನ ಸ್ಥಲದಲ್ಲಿ ವ್ಯಕ್ತವಾಗಿದೆ

——

ತಾಯ ಹರಕೆ

ಅನ್ನದಾನೇಶ ಗೌಡರ, ಎಂ. ಎ.,

ಓ ತಾಯಿ ಭಾರತಿ !
ಎತ್ತ ಬಾ ಆರತಿ !!
ನಿನ್ನ ಮಗಳು ಕನ್ನಡಾಂಬೆ
ಹರಸ ಬಾರಮ್ಮ ಭಾರತಾಂಬೆ !

ಹೊಸ ಜನುಮ ತಳೆದು ಹೊಸ ಹಾದಿ ಹಿಡಿದು
ಹನ್ನೆರಡು ವರುಷಗಳು ಸಂದಿದ ಶುಭದಿನವಿದು
ಹಿಂದಿನವರನು ಇಂದಿನವರನು ಕರೆದು ನಾಡುಮಾಡಿವೆ
ಹಿರಿಯರಿತ್ತ ಹರಕೆ ಹೊತ್ತು ಬಂದ ದಿನವಿದು

ಕಾವೇರಿ ತುಂಗೆಯರು ಮಂಗಲವ ಹರಸುತಿಹರು
ಹೆಜ್ಜೆ ಹೆಜ್ಜೆಗೆ ಗೆಜ್ಜೆನಾದ ಕಿಂಕಿಣಿಸುತಿಹುದು
ಗಂಧವಹ ತಂಗಾಳಿ ನಾಡ ನಾಡಿಯಲಿ ತೀಡುತಿಹುದು
ನಿನ್ನ ಬರುವ ಹಂಬಲಿಸಿ ಶ್ರೀದೇವಿ ನಲಿದು ಹಾಡುತಿಹಳು

ಭಾರತಾಂಬೆಯ ಕನ್ಯೆ !
ಓ ಕನ್ನಡಾಂಬೆ !!

ವಿಶ್ವ ಸೌಂದರ್ಯ ಸ್ಪರ್ಧೆಯಲಿ ಕಳಿಸಿಬಿಟ್ಟು
ಕಟ್ಟ ಬೇಕೆಂದಿಲ್ಲ ಪಟ್ಟ ನಿನಗೆ ಪಣತೊಟ್ಟು
ನಮ್ಮ ನ್ಮ ನೀ ನೀನೆಂಬುದೆ ನಮ್ಮೆಲ್ಲರ ಗುಟ್ಟು
ಹರಸು ಬಾರಮ್ಮ ಹರಕೆಗಳನು ತೊಟ್ಟು
ನಿನ್ನ ಮಕ್ಕಳು ನಾವು ಕೋಟಿ ಕೋಟಿ
ಕಾವ್ಯ ಬರೆದ ಕವಿಗಳು ನಾಡ ಪೊರೆದ ಕಲಿಗಳು
ಕಲೆಯ ಮೆರೆದ ಕುಶಲರು ಅಖಿಲ ವಿಭೂತಿಗಳು
ನಿನ್ನ ಸಿರಿಯ ಬೆಳಗುವೆವು, ನಿನಗಿಲ್ಲ ಸಾಟಿ

ಗುಡ್ಡದಾ ಎಲ್ಲಮ್ಮಾ, ಮೈಸೂರ ಚಾಮುಂಡಿ
ಬಾದಾಮಿ ಬನಶಂಕರಿ, ಹಂಪೆಯ ಪಂಪಾಂಬೆ
ಪುಣ್ಯ ದೀಪಾವಳಿಯ ದಿನದ ಕನ್ನಡ ರಾಜ್ಯೋತ್ಸವಕೆ
ಬಂದೆವ್ಮ ಹರಿಸಿರಿ; 'ಸ್ವಸ್ತಿ' ಎನ್ನ ಬನ್ನಿರಿ !

ನಿಮ್ಮ ಹರಕೆಗಳು ನೆರವಾಗಿ ನಮಗಿರಲಿ
ರೋಗ ರುಜಿನಗಳು ಗಡಿಯ ದಾಟಿ ಹೋಗಲಿ
ಕೋಪ ತಾಪ ಹೇಡಿತನ ಸುಡಗಾಡ ಸೇರಲಿ
ಗೂಬೆ ನರಿನಾಯಿ ಹದ್ದುಗಳ ಸದ್ದಡಗಲಿ
ನಮ್ಮ ಸಿರಿನಾಡ ಪಾಲಕ್ಕಿ ಶುಭಗೀತ ಪಾಡಲಿ

ಸತ್ಯ–ಶಾಂತಿ–ಪ್ರೇಮ ಸಪನೆ ಕೊನರಲಿ
ಪುಣ್ಯವೆಂಬ ಪರಮಸ್ಥೈರು ಫಲಿಸಲಿ
ಕತ್ತಲೆಯ ಸೀಳಿ ಹೊಂಬೆಳಕು ಚೆಲ್ಲಲಿ
ಚಿತ್ರ ಭಿತ್ತಿಯಲಿ ಸಾಂಬಶಿವನು ನೆಲಸಲಿ.
ಜಯ ಕನ್ನಡ ವಾಗೀಶ್ವರಿ !
ಜಯ ಕನ್ನಡ ರಾಜೇಶ್ವರಿ !!
ಜಯ ಜಯತು ರಾಜರಾಜೇಶ್ವರಿ !!!

—o—

ವಚನ ಸಾಹಿತ್ಯದ ವೈಶಿಷ್ಟ್ಯ

ಸು. ರುದ್ರಮೂರ್ತಿ ಶಾಸ್ತ್ರಿ

ಹನ್ನೆರಡನೆ ಶತಮಾನದ ಮೊದಲಲ್ಲಿ ಕನ್ನಡ ನಾಡಿನಲ್ಲಿ ಒಂದು ಹೊಸ ಬದುಕಿನ ಹೊಳೆ ಹರಿಯಿತು. ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಮಾತ್ರ ವಲ್ಲದೆ ಸಾಹಿತ್ಯದಲ್ಲಿಯೂ ಒಂದು ತೆರನಾದ ಕ್ರಾಂತಿ ಯುಂಟಾಯಿತು. ಅದುವರೆಗಿನ ಸಾಹಿತ್ಯವನ್ನು ಗಮನಿಸಿದಾಗ ಅವು ಜನಸಾಮಾನ್ಯರ ತಿಳಿವಿನ ಮಟ್ಟ ವನ್ನು ಮೀರಿದವೆಂಬುದು ಗೊತ್ತಾಗುತ್ತದೆ. ರಾಜ ಮಹಾರಾಜರುಗಳ ಆಶ್ರಯದಲ್ಲಿದ್ದ ಕವಿಗಳು ತಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನು ಕಳೆದುಕೊಂಡು ಕೇವಲ ತಮ್ಮ ಆಶ್ರಯದಾತರ ಆದೇಶದಂತೆ ಕಾವ್ಯರಚಿಸಬೇಕಿತ್ತು. ಅದರಲ್ಲಿ ತನ್ನ ಪಾಂಡಿತ್ಯವನ್ನೂ ಕವಿತ್ವವನ್ನೂ ಉಳಿದ ಪಂಡಿತರೆದುರು ಸ್ಥಾಪಿಸಬೇಕಿತ್ತು. ಸಿದ್ಧವಾದ ಮತ್ತು ಪ್ರಸಿದ್ಧವಾದ ವಸ್ತು, ಕ್ರಮಬದ್ಧ ಸಂಪ್ರದಾಯ ಮೆರವಣಿಗೆ, ಅಷ್ಟಾದಶ ವರ್ಣನೆ - ಇವುಗಳು ಅವರ ಕಾವ್ಯಗಳಲ್ಲಿ ಔಚಿತ್ಯ ಮೀರಿಯಾದರೂ ಬರಬೇಕಿತ್ತು. ಹೀಗೆ ಒಂದು ತೆರನಾದ ಯಾಂತ್ರಿಕ ಬಂಧನ, ಆಶ್ರಯ ದಾತನ ದಾಕ್ಷಿಣ್ಯಕ್ಕೊಳಗಾಗಿ ತನ್ನ ಅನುಭವಗಳನ್ನು ನೇರವಾಗಿ, ಸ್ವತಂತ್ರವಾಗಿ ಹೇಳುವ ಶಕ್ತಿ ಕವಿಗಿರಲಿಲ್ಲ.

ಆದರೆ ಈ ವಚನ ಸಾಹಿತ್ಯ "ಹನ್ನೆರಡನೆ ಶತಮಾನ ದಲ್ಲಿ ವೀರಶೈವ ಮತದ ಉತ್ಥಾನದ ಬಿರುಗಾಳಿ ಎಷ್ಟು ರಭಸವಾಗಿಯೂ, ಆಕಸ್ಮಿಕವಾಗಿಯೂ ಬೀಸಿತೋ ಅಷ್ಟೇ ರಭಸವಾಗಿ, ಆಕಸ್ಮಿಕವಾಗಿ ಈ ನೂತನ ಸಾಹಿತ್ಯವೂ ಸೃಷ್ಟಿಯಾಯಿತು" ಬಸವಣ್ಣನವರೆ ಮೊದ ಲಾದವರು ಈ ಸಾಹಿತ್ಯವನ್ನು ಬೆಳೆಸಿದರು. ಮತತತ್ವಗಳ ಪ್ರಸಾರವೇ ಪ್ರಮುಖಗುರಿಯಾದ ಈವಚನಗಳು ಜನ ಸಾಮಾನ್ಯರ ಅರಿವಿಗೆ ನಿಲುಕುವಂತೆ ಸರಳ ಸುಂದರವಾ ಗಿರಬೇಕೆನ್ನುವುದನ್ನು ಶರಣರು ಮನಗಂಡರು. ಇದರ ಪರಿಣಾಮವಾಗಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಪ್ರಕಾರ ಉಗಮವಾಯಿತು. ಅಂದಿನವರೆಗೂ ಮಡು ಗಟ್ಟಿ ನಿಂತ ಸಾಹಿತ್ಯ ಕಟ್ಟೆಯೊಡೆದು ಸ್ವಚ್ಛಂದವಾಗಿ ಹರಿಯಲು ಆರಂಭವಾಯಿತು.

ಶಿವಶರಣರ ವಚನಗಳು ಸಾಧಕನೊಬ್ಬನ ದಿನಚ ರಿಯ ಪುಟಗಳಂತಿವೆ. ಅವು ಪ್ರಯತ್ನ ಪೂರ್ವಕವಾಗಿ ರಚಿತವಾದವುಗಳಲ್ಲ; ಅನುಭವದ ಆಳದಿಂದ ಚಿಮ್ಮಿ ಬಂದಂಥವು. ಅವರ ವಚನಗಳಲ್ಲಿ ಪ್ರಕೃತಿಯ, ಬಾಹ್ಯ ಜಗತ್ತಿನ ಲೌಕಿಕ ಚಿತ್ರಗಳು ಕಂಡು ಬಂದರೂ, ಅವುಗಳ ಹಿನ್ನೆಲೆಯಲ್ಲಿ ಶಿವನ ನೆಲೆಯನ್ನು ಕಾಣಬೇ ಕೆಂಬುದೇ ಅವರ ಗುರಿ. ಶರಣರ ವಚನಗಳ ಸಂಕ್ಷಿಪ್ತ ಬ್ರಹ್ಮಾಂಡವಿದ್ದಂತೆ. ಅವುಗಳಲ್ಲಿ ತತ್ವವಿಚಾರ, ನೀತಿ ನಿರೂಪಣೆ, ಈಶ್ವರ ಸ್ವರೂಪ ಸಮಾಜದ ನಿಂದೆ. ಹೀಗೆ ಎಲ್ಲಬಗೆಯ ವಿಷಯಗಳೂ ಬರುತ್ತವೆ. ಇವು "ಒಂದೊಂದೂ ಒಂದು ಅಣಿಮುತ್ತು ಕಡೆದಿಟ್ಟರತ್ನ" ಒಂದೊಂದೂ ತಮ್ಮದೇ ಆದ ಕಾಂತಿಯಿಂದ ಕಂಗೊಳಿ ಸುವ ಬಿಡಿ ಮುಕ್ತಕಗಳು. ವಚನಕಾರರು ಮಾತನ್ನು ಇತಿ ಮಿತಿಯಿಂದ ಬಳಸಿದ್ದಾರೆ. ಭಾವದೊಡನೆ ಮಾತು ಮುಕ್ತಾಯವಾಗುತ್ತದೆ.

ವಚನಕಾರರಿಗೆ ಅಥವ ಶಿವಶರಣರಿಗಿದ್ದುದು "ಬದುಕ ಹಸನಾಗಬೇಕೆಂಬ ಹೆಬ್ಬಯಕೆ. ಆ ಸುಧಾರಣೆಯನ್ನು ಕುರಿತ ಹಂಬಲ, ತುಡಿತ, ತೊಳಲಾಟ, ಹಾಗ

ಇದರಲ್ಲಿ ಜೀವ ಏರಿಸ ಎತ್ತರ ಇವು ಅವರಿಗೆ ಪ್ರಧಾನ. ಹೀಗಾಗಿ ಅವರ, ಆಡಿದ ಮಾತು ಅವರಿಗರಿವಿಲ್ಲದಂತೆಯೇ ಕಾವ್ಯವಾಯಿತು" ಗಹನವಾದ ತತ್ವಗಳ ಸರಳ ನಿರೂಪಣೆ ಶಿವಶರಣರ ಎಲ್ಲ ವಚನಗಳ ವೈಶಿಷ್ಟ್ಯ. ಶರಣರ ವಚನಗಳು ಸಮಾಜದಲ್ಲಿ ಹಿಂದಿನಿಂದ ಮನೆ ಮಾಡಿದ್ದ ಅಂಧಶ್ರದ್ಧೆಯನ್ನು ಕಿತ್ತೊಗೆದು, ಧರ್ಮದ ಹೆಸರಿನಲ್ಲಿ ಹೋಳ ಹೋಳಾಗಿದ್ದ ಸಮಾಜವನ್ನು ಒಟ್ಟುಗೂಡಿಸಲು ಒಂದು ತೆರನಾದ ರಸಸೇತುವೆಗಳಾದವು. ಧರ್ಮದ ಜಾಗೃತಿಗಾಗಿ ಅವರು **ಜನಸಾಮಾನ್ಯರ** ಆಡುವ ಭಾಷೆಯನ್ನೇ ಬಳಸಿಕೊಂಡು ಸರಳವಾಗಿ, ಸುಂದರವಾಗಿ ಮನಮುಟ್ಟುವಂತೆ ತಮ್ಮ ತಮ್ಮ ವಚನಗಳನ್ನು ರಚಿಸಿದರು". ಅವರು ಈ ಲೋಕದ ಚೆಲುವನ್ನು ಕಂಡರೂ ಒಲಿದರೂ ಅದರಾಚೆಯ ಬೆಳಕಿಗೆ ಸದಾ ಕಾತರಿಸುವ ಸ್ವಭಾವದ್ದು." "ಅವರು ಕಂಡ ಸೌಂದರ್ಯ ಸಾಮಾನ್ಯ ರಸಪ್ರವಾಹದ ಆಚೆಗಿರುವ ಸಮರಸದ ಸೌಂದರ್ಯ".

ಕವಿ ಹೃದಯದಿಂದ, ಕಾವ್ಯದ ಕಾವಿನಿಂದ ಹೊಮ್ಮಿದ ವಚನಗಳು ಸುಂದರ ಭಾವಗೀತೆಗಳಾಗಿವೆ. ಈ ತೆರನಾದ ಭಾವಗೀತೆಗಳು ಬಸವಣ್ಣನವರು ಮತ್ತು ಅಕ್ಕಮಹಾದೇವಿಯ ವಚನಗಳಲ್ಲಿ ವಿಪುಲವಾಗಿ ಕಂಡುಬರುತ್ತವೆ. ಬಸವಣ್ಣನವರ ವಿಶಿಷ್ಟತೆ ಅವರ ನಿಸ್ಸಂಕೋಚವಾದ ಆತ್ಮನಿರೀಕ್ಷಣೆಯ ಪ್ರವೃತ್ತಿ. ಉದಾಹರಣೆಗೆ "ಭಕ್ತಿಯಿಲ್ಲದ ಬಡವನಾನಯ್ಯ" ಎನ್ನುವ ವಚನ. ಅವರ ವಚನಗಳು ಅವರ ಅಂತರಂಗದ ಅಂದಂದಿನ ತೊಳಲಾಟಗಳ ನಿರೂಪಣೆ ಮತ್ತು ಹಂತ ಹಂತವಾಗಿ ಪ್ರಗತಿಪಥದತ್ತ ಸಾಗುವ ಆತ್ಮದ ಪ್ರತಿಬಿಂಬ "ಸಾಧಕ ಹೃದಯದಲ್ಲಿ ಮೂಡಬಹುದಾದ ಅನಂತಮುಖ ಭಾವಗಳ ದರ್ಶನ ಅವರ ವಚನಗಳಲ್ಲಿ ನಮಗೆ ದೊರೆಯುತ್ತವೆ." ಅಕ್ಕಮಹಾದೇವಿಯು ಅಲೌಕಿಕ ಸ್ತ್ರೀ. ಈ ಲೋಕದ ಗಂಡಂದಿರನ್ನು ಬಯಸದೆ ಆ ಅಲೌಕಿಕ ನಿತ್ಯ ಪತಿಯನ್ನು ಬಯಸಿದಳು. ಈಕೆಯ ವಚನಗಳಲ್ಲಿಯಂತೂ ಕಾವ್ಯತ್ವ ಹೊನಲಾಗಿ ಹರಿದಿದೆ "ಬೆಟ್ಟದಾ ಮೇಲೊಂದು ಮನೆಯಮಾಡಿ" "ಚಿಲಿಪಿಲಿಯೆಂದೋದುವ ಗಿಳಿಗಳಿರಾ" "ತನುತರಗದವರಲ್ಲಿ" "ಅಳಿಸಂಕುಳವೆ ಮಾಮರವೆ" ಹೀಗೆ ಭಾವಗೀತಾತ್ಮಕವಾದ ಹಲವು ವಚನಗಳನ್ನು ಹೆಸರಿಸಬಹುದು.


ವಚನಗಳ ಛಂದಸ್ಸು ಪದ್ಯದ ಓಟವಿಲ್ಲದ ಒಂದು **ತೆರನಾದ ಗದ್ಯ**ಛಂದಸ್ಸು "ಈ ಗದ್ಯ ಕ್ಲಿಷ್ಟ ಛಂದಸ್ಸನ್ನು ತೊರೆದಿದ್ದರೂ ಅದರ ಪೈಕಟ್ಟು ಅಛಂದಸಾದುದಲ್ಲ. ಅದು ಗದ್ಯರೂಪ ಧಾರಣೆಮಾಡಿದ್ದರೂ ಕಾವ್ಯತ್ವವನ್ನು ಬಿಟ್ಟಿಲ್ಲ. ಆ ಗದ್ಯದ ಪ್ರಕಾರಾಂತರವೇ ವಚನ ಸಾಹಿತ್ಯವಾಗಿ ದೂಬಿಟ್ಟಿತು ವಚನಗಳು ಆ ಗದ್ಯದಿಂದ ಹೊಮ್ಮಿದ ಬಿಡಿಕಿಡಿ ಹೂಗಳು" ಇವುಗಳಲ್ಲಿ ಎಲ್ಲೆಡೆಯಲ್ಲಿಯೂ ಜೀವಂತ ಸೌರಭ ಪ್ರವಹಿಸುತ್ತಿದೆ. ತಮ್ಮ ಮನಸ್ಸನ್ನು ಪ್ರಚೋದಿಸಿದ ಬುದ್ಧಿಯನ್ನು ಅರಳಿಸಿದ, ಆತ್ಮವನ್ನು ಅರಳಿಸಿದ ಒಂದೊಂದು ಭಾವನೆಯನ್ನೂ ಆಯಾ ಭಾವಕ್ಕೆ ತಕ್ಕಂತೆ ವಚನಕಾರರು ಹಾಡಿದರು ಹಾಗೆ ಸಹಜ ಸ್ಫೂರ್ತಿಯಿಂದ ಉಣ್ಣಾದ ವಚನಗಳಿಂದಲೇ ವಚನ ಸಾಹಿತ್ಯದ ಹಿರಿಮೆ ಮುಗಿಲು ಮುಟ್ಟುವುದು.

ಆಧಾರ ಗ್ರಂಥಗಳು :—ಶರಣರ ಅನುಭಾವ ಸಾಹಿತ್ಯ
H. ತಿಪ್ಪೇರುದ್ರಸ್ವಾಮಿ

ಪರಿಶೀಲನ – G. S. ಶಿವರುದ್ರಪ್ಪ

ಕನ್ನಡದಲ್ಲಿ ಭಾವಗೀತೆ – ಪ್ರಭು ಶಂಕರ

ಪ್ರಬುದ್ಧ ಕರ್ನಾಟಕ ಸಂಪುಟ 31, ಸಂಚಿಕೆ 1



ಚಾಳೀಸು

—ಸಿ. ಎನ್. ಚನ್ನವೀರಯ್ಯ

ಎಂದಿನಂತೆ ಅಂದೂ ಬಂದ ನನ್ನ ಸ್ನೇಹಿತ. 'ಎಂದಿನಂತೆ' ಅಂದರೆ ಅವನು ನನ್ನ ಮನೆಗೆ ಬರದ ದಿನವೇ ಇಲ್ಲ ಅನ್ನಿ! ಹೆಸರು ಅವನದು ಅನ್ನದಾನಯ್ಯ ಎಂದು ಆದರೆ 'ನಾಸ್ತಿ' ಅನ್ನುವುದು ಅವನ ಹುಟ್ಟು ರೋಗ ಅಂದರೆ ತಪ್ಪೇನೂ ಇಲ್ಲ. ಅವನು ಬಂದೊಡನೆಯೇ ಕಣ್ಣರಳಿಸಿ, ಆಕಳಿಸಿ, ಹಲ್ಲು ಕಿರಿಯುವುದು ಜಾಯಮಾನ. ಆಗ ಅವನನ್ನು ನೋಡಿದರೆ ಆಂಜನೇಯನ ಅಪರಾವತಾರವೇ ಉಪಸ್ಥಿತನಾದಂತಾಗುತ್ತದೆ. ಆದರೂ ಅವನ 'ಹಿಪ್' ಪಾಕೆಟ್ಟಿನಲ್ಲಿ ಕನ್ನಡಿ ಬಾಚಣಿಗೆಗಳಿಲ್ಲದ ದಿನವಿಲ್ಲ, ಅವನ್ನು ಉಪಯೋಗಿಸದ ಸಮಯವಿಲ್ಲ.

ಎಂದಿನಂತೆ ಅಂದೂ ಅವನನ್ನು ಸ್ವಾಗತಿಸಿದೆ ಅನ್ನಿ. ಇವ್ಯಾಕೆ ಬರುತ್ತದೋ ಈ ಶನಿ ಅಂದುಕೊಂಡು! ಬಂದವನು ತೆಪ್ಪಗಾದರೂ ಕುಳಿತನೇ ನನ್ನ ಮೇಜಿನ ಮುಂದೆ, ಅದು ಅವನಿಂದ ಸಾಧ್ಯವೇ ಇಲ್ಲ. "ಏನಯ್ಯ ಶುರು ಮಾಡಿಬಿಟ್ಟೆ ತಲೆಹರಟೆ, ಅಲ್ಲ ಹರಟೆಯನ್ನು." ಅಂದ.

"ಹೀಗೆಯೇ ಕುಳಿತೆ ಮಾರಾಯ" ಅಂದೆ.

"ಅದೇನು ಚಾಳೀಸು ಅಂತ ಇವೆಯಲ್ಲ?" ಎಂದು ಕೇಳಿದ ಅವನು.

ನನ್ನ ಹೃದಯ ಉಮ್ಮಳಿಸಿ ಬರಬೇಕೇ ಭಾವನಾ ತರಂಗಗಳಿಂದ! ನಾನೂ ಶುರು ಮಾಡಿಯೇ ಬಿಟ್ಟೆ.

"ನೋಡು ಆಂಜನೇಯ, ಕ್ಷಮಿಸು, ಅನ್ನದಾನಯ್ಯ! ಈ ಶಬ್ದ ಮರಾಠಿ ಭಾಷೆಯಿಂದ ಬಂದಿದೆ. ಕನ್ನಡದಲ್ಲಿ ಚಾಳೀಸು ಅಂದರೆ ನಲವತ್ತರ ಗಡಿದಾಟಿದವರಿಗೆ ಬರುವ ಈ ರೋಗ ಅದರ ವಿಷಯ ಹೇಳಲಿ?" ಅಂದೆ.

"ರೋಗ! ಅದೆಂಥವಯ್ಯ ಆ ರೋಗ? ಹೇಳಯ್ಯ ಮಹಾರಾಯ!" ಅಂದ ಅವನು.

"ಹೆದರ ಬೇಡಯ್ಯ, ಆ ರೋಗಕ್ಕೆ ನಮ್ಮಜ್ಜ ಇಟ್ಟಿರುವ ಹೆಸರು ಚಾಳೇಶ್ವರಿ. ನಾನು ಈ ಹೆಸರನ್ನು ಮೊದಲ ಬಾರಿಗೆ ಅವರ ಬೊಚ್ಚುಬಾಯಿಂದ ಕೇಳಿದಾಗ, ಚೌಡೇಶ್ವರಿ, ಮಾಹೇಶ್ವರಿ, ಚಾಮುಂಡೇಶ್ವರಿ, ಹೀಗೆ ಇವೆಯಲ್ಲ ದೇವತೆಗಳು ಅವುಗಳ ಹಾಗೆ ಇದೂ ಯಾವುದೋ ಈಶ್ವರಿ ಅಂದುಕೊಂಡೆ. ಆಮೇಲೆ ತಿಳಿಯಿತು ಆ ಮಾತು ಚಾಳೀಸಿನ ಪರ್ಯಾಯ ಶಬ್ದವೆಂದು" ಅಂದು ಹೇಳಿ ಸಮಾಧಾನ ಪಡಿಸಿದೆ ಅವನನ್ನು.

ನಾನೇನೋ ಸಮಾಧಾನ ಪಡಿಸಿದೆ; ಆದರೆ ಸಮಾಧಾನ ಪಟ್ಟುಕೊಳ್ಳಬೇಕಲ್ಲ ಅವನು! ಮೂವತ್ತರ ಹರೆಯದ ಆ ನನ್ನ ಬಡಸ್ನೇಹಿತನಿಗೆ ಭಯ. "ಅದರ ಲಕ್ಷಣಗಳೇನಯ್ಯ?" ಅಂದ ರಾಗವಾಗಿ. ಅವನ ತುಟಿಗಳು ಒಣಗಿಹೋಗಿದ್ದವು ತನಗೂ ಎಲ್ಲಿ ಆ ರೋಗ ಆಗಲೇ ಬಂದು ಬಿಟ್ಟಿದೆಯೋ ಎಂಬ ಭಯ ಅವನನ್ನಾಗಲೇ ಆಕ್ರಮಿಸಿತ್ತು.

"ಅದು ಕಣ್ಣಿಗೆ ಸಂಬಂಧಿಸಿದ ರೋಗವಯ್ಯ.

ನನ್ನ ಮಾತಿನ್ನೂ ಮುಗಿದೇ ಇಲ್ಲ; ಅವನು ತನ್ನೆರಡು ಕಣ್ಣುಗಳನ್ನೂ ಆದಷ್ಟು ವಿಶಾಲವಾಗಿ ಅರಳಿಸಿ

ತನ್ನೆರಡೂ ಕೈಗಳ ಹತ್ತು ಬೆರಳನ್ನೂ ನೋಡಿಕೊಂಡ. ಸಮಾಧಾನವಾಗಿರಬಹುದು, ಮತ್ತೊಮ್ಮೆ ಕಟವಾಯಿ ತುಟಿಯವರೆಗೂ ಬರುವಂತೆ ಹಲ್ಲುಕಿರಿದು, "ಚಾಳೀಶ್ವರಿಯ ಲಕ್ಷಣಗಳನ್ನಾದರೂ ತಿಳಿಸಿ ಉದ್ಧರಿಸು ಮಹಾನುಭಾವ !" ಅಂದು ಬೇಡಿದ.

"ನಾನು ಈ ರೋಗದ ಬೆಳವಣಿಗೆಯ ಅಧ್ಯಯನ ಮಾಡುತ್ತಿದ್ದೇನೆ. ಇದರ ಅಧ್ಯಯನ, ರಿಸರ್ಚ್ ಅಂದರೂ ತಪ್ಪಿಲ್ಲ ಅನ್ನು, ಆದರಿಂದ ಮನಸ್ಸಿಗಾಗುವ ಆನಂದ ಪರಮಾನ್ನ ಉಂಡಷ್ಟು! ನೋಡು ಈ ರಿಸರ್ಚ್‌ಗೆ ನನ್ನ ತಾತನೇ ಲ್ಯಾಬೋರೇಟರಿ ಇದ್ದಂತೆ. ಅವರು ಓದಲು ಪತ್ರಿಕೆಯನ್ನೋ ಪುಸ್ತಕವನ್ನೋ ಕೈಗೆ ತೆಗೆದುಕೊಂಡರೆ ಈ ರೋಗದ ಲಕ್ಷಣಗಳು ಪುಂಖಾನು ಪುಂಖವಾಗಿ ಗೋಚರವಾಗುತ್ತವೆ"

ತಾನು ಕುಳಿತಿದ್ದ ಕುರ್ಚಿಯನ್ನು ನನ್ನ ಹತ್ತಿರ ಎಳೆದುಕೊಂಡು ಕುಳಿತು "ಹಾಗೇನು?" ಅಂದ.

"ಒಮ್ಮೆ ನಮ್ಮ ತಾತನವರು ವರ್ತಮಾನ ಪತ್ರಿಕೆಯನ್ನು ಗಮಕ ರೂಪದಲ್ಲಿ ಅದಷ್ಟು ಗಟ್ಟಿಯಾಗಿಯೇ ಓದುತ್ತಿದ್ದರು. ಶ್ರೀಯುತರಿಂದ ಸಭಾ ಭ ವ ನ ದ ಉಚ್ಚಾಟನೆಯಾಯಿತು? ಅಂದರು. ಇಣಿಕಿ ನೋಡಿದರೆ 'ಉದ್ಘಾಟನೆ' ಯೆಂದಿತ್ತು. ಹಾಗೆಯೇ ಮುಂದುವರಿದ ಪೂಜ್ಯಪಾದರು 'ಮೌನಭಂಗ' ಎಂಬುದನ್ನು 'ಮಾನಭಂಗ' 'ಸೂರ್ಯೋದಯ' ಎಂಬುದನ್ನು 'ಮರ್ಯೋಧನ' ಎಂದು ಓದಿದರು. ಎಷ್ಟು ಆಪ್ಯಾಯಮಾನವಾಗಿದೆ ಕೇಳಲು !" ಅಂದ.

"ಇಷ್ಟೇಯೇನು?" ಅಂದ ಅವನು ಅತೃಪ್ತಿಯಿಂದ.

"ಇಷ್ಟೇ ಅಲ್ಲಯ್ಯ, ಅವರ ಕಣ್ಣಿಗೆ ಬಿದ್ದ ಶಬ್ದಗಳ ಸ್ವರೂಪ ನಾಶವೇ ಆಗಿಬಿಡುತ್ತದೆ. 'ಮೊಗಸಾಲೆ, ಮಸಾಲೆಯಾಗುತ್ತದೆ. ಹಾಗೆಯೇ ಕುಂಚ, ಕುಚವಾಗಿ ಬಿಡುತ್ತದೆ. ಒಂದು ಸಾರಿಯಂತು 'ನಮ್ಮಂಥ' ಎಂಬ ಶಬ್ದ 'ಮನ್ಮಥ' ಎಂದಾಯಿತು. ಇನ್ನು ನಮ್ಮಜ್ಜಿಯ ಕಣ್ಣಿಗೆ ಬಿದ್ದ 'ಚಾಪಲ್ಯ' ಶಬ್ದ ಅವರ ಬಾಯಿಂದ ಪಲ್ಯವಾಗಿ ಹೊರ ಹೊಮ್ಮುತ್ತದೆ. ಈ ರೋಗ ಲಕ್ಷಣಗಳು ನಮ್ಮ ಅಜ್ಜಿ ತಾತಂದಿರಲ್ಲಿ ಸುಸ್ಪಷ್ಟವಾಗಿ ಕಾಣುತ್ತವೆ."

"ಹೌದೇನು!" ಅಂದ ಅವನು ಮತ್ತೊಮ್ಮೆ ಆಕಳಿಸಿ.

"ಹೌದು ಅನ್ನಪ್ಪಾ......" ಅಂದೆ ಆತ್ಮೀಯವಾಗಿ.

"ಮುಂದೆ ಬೆಳೆಯೋಣವಾಗಲಿ!" ಅಂದ ಆ ಭಕ್ತ.

"ನಮ್ತಾತ ಇದ್ದಾರಲ್ಲ, ಮಹಡಿಯ ಮೆಟ್ಟಲು ಹತ್ತುವಾಗ ನೋಡಬೇಕು ಈ ಚಾಳೀಸಿನ ಮಹಾತ್ಮೆಯನ್ನ! ಒಮ್ಮೊಮ್ಮೆ ಒಂದೊಂದು ಮೆಟ್ಟಲನ್ನು ನಾಲ್ಕೈದು ಬಾರಿ ಹತ್ತಿಬಿಡುತ್ತಾರೆ. ಹಾಗೆ ಹತ್ತುವಾಗ ಅವರು ಮಾಡುವ ಶಬ್ದ ಯಾವ ಎಕ್ಸ್‌ಪ್ರೆಸ್ ರೈಲಿನ ಶಬ್ದಕ್ಕೂ ಕಡಿಮೆಯಾಗಿರುವುದಿಲ್ಲ. ಹೀಗೊಮ್ಮೆ ಮೆಟ್ಟಲು ಹತ್ತುವಾಗ, ಪಾಪ, ಅದಕ್ಕೇನು ಆಸೆಯೋ ಏನೋ; ಅವರ ತುಟಿ ಮೆಟ್ಟಲಿನ ಮೂತಿಗೆ ಮುತ್ತು ಕೊಟ್ಟು ಬಿಟ್ಟಿತು....'ಚುಂಬನಂ ದಂತಭಗ್ನಂ' ಅನ್ನುವ ಹಾಗೆ ಅವರ ಒಂದು ಹಲ್ಲಿಗೆ ಕೂಡಲೇ ಮುಕ್ತಿ ದೊರಕಿತಯ್ಯ! ಅಷ್ಟು ಜಾಗ್ರತೆ. ಗಜೇಂದ್ರನಾದರೂ ಒರಲಿದ, ಪ್ರಾರ್ಥಿಸಿ ಮುಕ್ತಿ ದೊರಕಿಸಿ ಕೊಡುವಂತೆ. ಆದರೆ ನಮ್ಮ ತಾತನ ಹಲ್ಲು !"

"ಅಂತೂ ಭಯಂಕರ ರೋಗ ಕಣಯ್ಯ !" ಅಂದ ಬೆಪ್ಪತಕ್ಕಡಿ.

"ಇನ್ನೂ ಹೇಳಲೆ, ವರ್ಣಿಸಲೆ ಈ ರೋಗದ ಗುಣಲಕ್ಷಣಗಳನ್ನು ?" ಎಂದು ಕೇಳಿದೆ.

"ಈ ಹೊತ್ತು ಇಷ್ಟೇ ಸಾಕು, ಬರ್ತೀನಯ್ಯ !" ಅಂದ ಅವನು ಸಿಂಗಳೀಕದಂತೆ ಮುಖ ಮಾಡಿ.

"ಬ ರ್ತೀ ನಿ ಅಂತ ಹೇಳಿ ಹೋಗ್ತಾ ಇದ್ದೀಯಲ್ಲಯ್ಯ ? ಇದೊಂದು ಥರ ರೋಗ" ಅಂದೆ.

ನನ್ನ ಮಾತು ಕೇಳಿದ ಅವನು ಅಲ್ಲೇ, ನಿಂತಲ್ಲೇ ಕುಕ್ಕರಿಸಿಬಿದ್ದ. ಶೈತ್ಯೋಪಚಾರ ಮಾಡಿದ ಮೇಲೆ ನಾಡಿ ಮಿಡಿಯಿತು. ಅವನನ್ನು ಆದಷ್ಟು ಜಾಗ್ರತೆ ಅವನ ಮನೆಗೆ ಪಾರ್ಸಲ್ ಮಾಡಿದೆ.

— o —

ಸಂಕ್ರಾಂತಿ–ಶಿವಸಮೀಕ್ಷೆ

ಲೇ : ಅಚಲ ಶರಣ್

ಎಳ್ಳು ಬೆಲ್ಲ—ಸಂಕ್ರಾಂತಿಯ ಸಂಜೆಯ ಟಿಫಿನು,
ಸಕ್ಕರೆ ಅಚ್ಚು, ಕೊಬ್ಬರಿಗಿಟಕು ಪುಟಾಣಿಸೇವೆ,
ಜಿಳಿಯುತ್ತ್ರದ ರಸಗಬ್ಬಿನ ರುಚಿರಿಬ್ಬನು
ನಾಲಗೆ ಚಿಮ್ಮಿದೆ ಲಾಲಾರಸ-ಫೌಂಟನು
ಬೆಳಗಿನಿಂದ ಭಜನೆ, ಧನುರ್ಮಾಸದ ಪೂಜೆ,
ಹಾನ ಹಾಡು, ಹರಿಯುಗೀತೆ ಭೂಪಾಳಿ ರಾಗ
ಹಾಡು ನ್ಹೋದ ಸಂತಸ- ಅಡಗಿ ಎಲ್ಲರೆದೆಯ ಕಸಗಿಸ !

X X X X X

ಅದೇ ಹಬ್ಬ, ಅದೇ ತಿಂಡಿ, ಅದೇ ತಿನಿಸು, ಅದೇ ದೇವರು !
ಅಯ್ಯೋ ಬೇಸರ, ಎಲ್ಲ ಅದೇ !
ಅದಕೇ................
ಹೊಸಾ ಬಟ್ಟೆ, ಹೊಸಾ ಸೀರೆ, ಟರ್ಲಿನ್, ಡೆಕರಾನ್, ಟ್ವಿಂಕಲ್ ನೈಲಾನ್.
ಚಿಕ್ಕಪೇಟೆಯ ಬಟ್ಟೆಯಂಗಡಿಗೆ ಸುತ್ತಾಟ
ಹಬ್ಬದ್ಹೆಸರು ಪಾಕೀಟು ಹೊತ್ತ ಬಸಿರು.

ಸಂಕ್ರಾಂತಿ : ಮನದ ಕಲುಷ ಅದೇ. ಅದೇ, ಅದೇ........
ಕೆನಿಸು ಮದವ ಇಂಗಾಲ ಕಾಡಿಗೆ ;
ಬರಲಿಲ್ಲ ಅವಕೆ ಮಾತ್ರ ಬೇಸರ
ಮಾತಿನೊಳಡಗಿಸಿ ಚಮತ್ಕೃತಿ—ತಾರತಿ !
ಕಾಂತಿಯಾಯ್ತೆ, ಸಂಕ್ರಾಂತಿ—ಸತ್ಕ್ರಾಂತಿ ?
ವೈಫಲ್ಯದ ಮುಖಕೆ ಹಿಡಿದ ಮಂಗಳಾರತಿ.

ಶಿವಸಮೀಕ್ಷೆ : ಶಿವಮನದ ಶಿಶುಗೀತೆ ಕೇಳಿ ಬರುತಿರಲು
ಹಸನಾದ ಕವಿಗೀತೆ ದುಂಬಿಯಾಗಿರಲು
ಜೀವ-ಶಿವನ ಕೈಲಾಸ ಸಾನ್ನಿಧ್ಯವಿರಲು,
ಮನ ಶಿವನಾಗಲಿಲ್ಲ ಶವ - ಜೀವಚ್ಛವ,
ನಡೆ ನಡೆದು ಅಕ್ಷಯ ಶಿವಸಮೀಕ್ಷೆ

" ಪರಂ ದೃಷ್ಟ್ವಾ ನಿವರ್ತತೇ "

ಜಿ. ವಿ. ನಾರಾಯಣಮೂರ್ತಿ

ಒಮ್ಮೆ, ಡಾ || ಸರ್ವೇಪಲ್ಲಿ ರಾಧಾಕೃಷ್ಣನ್, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸ ಮಾಡುತ್ತಿದ್ದರು. ಸಭಿಕರಲ್ಲಿ ಒಬ್ಬರಿಗೆ ಮಹಾತ್ಮಾಜೀ ಕೊಲೆಯಾದರೆಂಬ ಸುದ್ದಿ ಹೇಗೋ ತಿಳಿಯಿತು. ಅವರು ಆ ಸುದ್ದಿಯನ್ನು ಚೀಟಿಯಲ್ಲಿ ಬರೆದು ರಾಧಾಕೃಷ್ಣನ್ ಅವರಿಗೆ ತಲುಪಿಸಿದರು. ಚೀಟಿಯನ್ನು ತಮ್ಮಲ್ಲಿಯೇ ಓದಿಕೊಂಡು ರಾಧಾಕೃಷ್ಣನ್ ಕ್ಷಣಕಾಲ ನೀರವರಾಗಿದ್ದು ಹೀಗೆ ನುಡಿದರಂತೆ :

"ಮಾನವಕುಲ ಜೀಸಸ್‌ನನ್ನು ಶಿಲುಬೆಗೇರಿಸಿದಂದಿನಿಂದ ಸಾಕ್ರಟೀಸನಿಗೆ ಹೆಮ್‌ಲಾಕ್ ವಿಷದ ಬಟ್ಟಲನ್ನು ಕೊಟ್ಟಂದಿನಿಂದ ಈವರೆಗೆ ಒಂದು ಅಂಗುಲವೂ ಪ್ರಗತಿ ಸಾಧಿಸಿಲ್ಲ.''

ಜೀಸಸ್ ಸಾಕ್ರಟೀಸ್—ಇಂಥ ಮಾನವ ಕುಲ-ದೀಪಕರ ಪಂಕ್ತಿಯಲ್ಲಿ ಸಮಾನ ಸ್ಥಾನ ಗಳಿಸಿ ಕೊಂಡವರು ಗಾಂಧೀಜೀ ; ಅವರಿಬ್ಬರಿಗೂ ಸಂದಿದ ದುರಂತವೇ ಗಾಂಧೀಜೀಗೂ ಸಂದಿತು. ಕಾಲ ಬೇರೆ, ದೇಶ ಬೇರೆ, ಜನ ಬೇರೆ ಅಷ್ಟೆ. ಜೀಸಸ್ ಮಾಡಿದ ಅಪರಾಧವೇನು ? ಅವನು ಕ್ಷಮೆ, ಪ್ರೇಮಗಳನ್ನು ಬೋಧಿಸಿದುದೇ. ಸಾಕ್ರಟೀಸನ ಅಪರಾಧವೇನು ? ಸತ್ಯ-ನ್ಯಾಯಗಳನ್ನು ಎತ್ತಿ ಹಿಡಿದುದೇ. ಗಾಂಧೀಜೀಯದೋ ? ಸರ್ವಧರ್ಮ ಸಮಭಾವವನ್ನು ಆಚರಣೆಗೆ ತಂದು ಬೋಧಿಸಿದುದೇ. ಈ ಮೂವರ ಅಂತವೂ ಸನಾತನ ತತ್ತ್ವಗಳ ಧ್ವಜಪತಾಕೆಯನ್ನು ಎತ್ತಿ ಹಿಡಿದ ನಿದರ್ಶನಗಳು. ಮನುಜಕುಲ ಇವುಗಳನ್ನು ಆರಾಧಿಸುತ್ತದೆ. ಇವರನ್ನು ದೇವತ್ವದ ಪಂಕ್ತಕ್ಕೆ ಏರಿಸಿ 'ನಮೋ' ಎಂದು ತನ್ನ ಜಾಡಿನಲ್ಲಿ ತಾನು ನಿಮಗ್ನವಾಗಿ ಬಿಡುತ್ತದೆ.

ರಾಧಾಕೃಷ್ಣನ್ ಅವರ ಮಾತಿನ ಅರ್ಥವೇನು ? "ಒಂದು ಅಂಗುಲವೂ ಪ್ರಗತಿ ಸಾಧಿಸಿಲ್ಲ" ಎಂಬ ಮಾತು, ಸಾಧಿತವಾದ ಪ್ರಗತಿ ಮೂಲಭೂತವಾದುದಲ್ಲ, ಅದು ಕ್ಷಣಿಕವಾದುದು ಎಂಬುದರ ಸೂಚನೆ ಅಷ್ಟೆ. ಪ್ರಗತಿ ಎರಡು ಬಗೆ; ಒಂದು ಭೌತಿಕ ಮತ್ತೊಂದು ಆಧ್ಯಾತ್ಮಿಕ. ಭೌತಿಕ ಪ್ರಗತಿ ಕ್ಷಣಿಕ, ಆಧ್ಯಾತ್ಮಿಕ ಪ್ರಗತಿ ಮೂಲಭೂತ, ಶಾಶ್ವತ. ಇಂದು ಮಾನವ ಸಾಧಿಸಿರುವ ಪ್ರಗತಿ ಮೊದಲನೆಯ ಬಗೆಯದು. ಅದು ಸಾಧಿತವಾಗಿರುವ ಬಗೆ ವಿಜ್ಞಾನದ ನೆರವಿನಿಂದ. "ಮಾನವ ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತಿದ್ದಾನೆ. ಆಕಾಶದಲ್ಲಿ ಹಕ್ಕಿಯಂತೆ ಹಾರುವುದನ್ನು ಕಲಿತಿದ್ದಾನೆ. ಆದರೆ ತನ್ನನ್ನು ಅರಿತು ಕೊಳ್ಳುವ ಪ್ರಯತ್ನ ಸಾಕಷ್ಟು ಸಾಗಿಲ್ಲ.'' ಇದು ಯಥಾರ್ಥ ನುಡಿ. ಮಾನವನ ಮಾನವತ್ವದ ಪೂರ್ಣ ವಿಕಾಸವಾಗುವುದು ಆಧ್ಯಾತ್ಮಿಕ ಬೆಳವಣಿಗೆಯಿಂದ ಎಂಬ ಅರಿವು ಮೂಡಿದ್ದರೂ ಸಾಕಷ್ಟು ಬೆಳೆಯುತ್ತಿಲ್ಲ.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಮನಸ್ಸು ಮತ್ತು ಬುದ್ಧಿ ಕಾರಣ. ಈ ಎರಡೂ ವಿಚಾರದ ಅಶ್ವವನ್ನೇರಿ ಪವಾಡ ಸಾಧಿಸುತ್ತವೆ. ಮಾನವ ಚಂದ್ರಲೋಕಕ್ಕೂ ತಾರಾಲೋಕಗಳಿಗೂ ಹೋಗಿ ನೆಲೆಸುವ ಹಂಬಲ ಕಾಣುತ್ತಾನೆ. ಶುಕ್ರಗ್ರಹಕ್ಕೆ ಸೇತುವೆ ನಿರ್ಮಿಸಲು ಸಾಹಸ ಮಾಡುತ್ತಾನೆ. ಇಷ್ಟೆಲ್ಲ ಆದರೂ ಮಾನವರೊಡನೆ ಮಾನವನಾಗಿ ಬಾಳುವ ಹೃದಯ-ವಿಕಾಸ ಆಗುವುದಿಲ್ಲ. ಲೋಕವೆಲ್ಲ ಕಾಲ ಮತ್ತು ವೇಗಗಳ ದೃಷ್ಟಿಯಿಂದ ಹಿಡಿಯಷ್ಟು ಕುಗ್ಗಿ, ಮಾನವನ ಬಾಹು, ಪಾದ ತ್ರಿವಿಕ್ರಮರೂಪ ತಾಳಿದರೂ, ಹೃದಯದಲ್ಲಿ ಕರುಣೆ

ಯಿಲ್ಲ., ಕಣ್ಣಿನಲ್ಲಿ ಪ್ರೇಮವಿಲ್ಲ, ಕೈ, ಹರಸುವ ಕೈಯಾಗಿಲ್ಲ–ವಿನಾಶದ ಸಂಹಾರದ ಕೈ ಆಗಿದೆ. ಆದ ಪ್ರಗತಿ ಅದ್ಭುತ ಬಾಹ್ಯರೂಪದ ವಿಶಾಲ ಪ್ರಗತಿಯಾಗಿದೆ. ನಾಗರಿಕತೆ ಬೆಳೆದರೂ ಅದರ ಹೃದಯವಾದ ಸಂಸ್ಕೃತಿಯ ಕುಸುಮ ಬಾಡುತ್ತಿದೆ. ಇದಕ್ಕೇನು ಕಾರಣ ?

ಮಾನವನ ಬುದ್ಧಿಗೆ, ಮನಸ್ಸಿಗೆ ಭೌತದ ಸೆಳವು ಅಪಾರ ; ಅನಿವಾರ್ಯ. ಅದು 'ಹಿರಣ್ಮಯ ಪಾತ್ರೆ' ಉಪನಿಷತ್ತಿನ ಭಾಷೆಯಲ್ಲಿ. ಮನೋಬುದ್ಧಿಗಳು ಅದಕ್ಕೆ ಗುಲಾಮ. ವಿಷಯೋಪಭೋಗ. ಅದರ ಲಾಲಸೆ ; ಅಧಿಕಾರದ ಮೋಹ, ಭೂ: ಧನದ ಪೈಶಾಚಿಕ ಆಕಾಂಕ್ಷೆ ಅದರ ಲಭ್ಯಕ್ಕಾಗಿ ಎಲ್ಲ ನೀತಿಯ ಎಲ್ಲೆಯನ್ನು ಮೀರುವುದು ; ಇವು ಪ್ರಧಾನವಾಗಿ ಭೌತ ಒಡ್ಡುವ ಜಾಲ. ಬಲೆ. ಇದಕ್ಕೆ ಮಣಿದ ಮನೋಬುದ್ಧಿಗಳಿಂದ ಆತ್ಮವಿಕಾಸಕ್ಕೆ ಪ್ರತಿಯಾಗಿ ಆತ್ಮಪತನ, ಆತ್ಮನಾಶವೇ ಆದೀತು.

ಹೀಗೆ, ಭೌತದ ಮಿರುಗಿನಲ್ಲಿ ಲೀನವಾದ ವ್ಯಕ್ತಿ-ಸಮಾಜ ಆಧ್ಯಾತ್ಮಿಕ ವಿಕಾಸ ಹೊಂದಲು ಸಾಧ್ಯವಿಲ್ಲವೆ ಹೋಗುತ್ತದೆ. ಆದರೂ, ಆತ್ಮದ ನೈಸರ್ಗಿಕ ಶಕ್ತಿ ತನ್ನ ಪ್ರಭಾವವನ್ನು ಹೊಮ್ಮಿಸಿ ವಿಕಾಸ ಪಥದಲ್ಲಿ ಗಮಿಸಿರುವ ಅಂಶದ ಸುವರ್ಣ ರೇಖೆ. ಮಾನವನ ಇತಿಹಾಸದ ಪುಟಗಳನ್ನು ದೇದೀಪ್ಯಗೊಳಿಸಿದೆ.

ಈ ಆತ್ಮವಿಕಾಸದ ಕ್ರಮ, ಆಧ್ಯಾತ್ಮಿಕ ಪ್ರಗತಿಯ ರೀತಿ ಸುಖದ ಲಡ್ಡುಗೆಯನ್ನು ತಿಂದಂತಲ್ಲ. ಸುಖವೆಂದು ಭುಂಜಿಸಿದುದು ಹಾಲಾಹಲವಾದೀತು. ಹಾಲಾಹಲವೆಂದು ಸ್ವೀಕರಿಸಿದುದು ಮಾನವನನ್ನು 'ನೀಲಕಂಠ'ನನ್ನಾಗಿ ಮಾಡೀತು. ಸಾವು ಅದರ ಅಂತಿಮವಾಗದೆ ಭವ್ಯತೆಯ ಬಾಗಿಲನ್ನು ತೆರೆದೀತು. ಕಣ್ಣೀರ ಕೋಡಿ ಹರಿದು, ಬವಣೆಯ ಹೊಳೆಯಲ್ಲಿ ಮುಳುಗಿ ತೇಲಬೇಕಾದೀತು. ಮಾನವನ ಬಾಳು ಆತ್ಮವಿಕಾಸಪಥದಲ್ಲಿ ಹೆಜ್ಜೆ ಇಟ್ಟರೆ ಸಾಕು, ಅದು ಒಂದು ಸಂಗ್ರಾಮವೇ ಆದೀತು. ಸತ್ ಪ್ರವೃತ್ತಿ ಮತ್ತು ದುಷ್ಟ ಪ್ರವೃತ್ತಿಗಳ ನಡುವೆ ಎಡೆಯಿಲ್ಲದ, ನಿಲುವಿಲ್ಲದ ಹೋರಾಟವಾದೀತು. ದೈವೀ ಮತ್ತು ಆಸುರೀ ಶಕ್ತಿಗಳೇ ಪರಸ್ಪರ ಎದುರಾಗಿ ನಿಲ್ಲತಕ್ಕವು. ದೈವೀ ಶಕ್ತಿಯ ಜಯವಾದಾಗ ಆಧ್ಯಾತ್ಮಿಕ ವಿಜಯ. ಭೌತ ರೂಪದ ಎಂಥದೇ ನಷ್ಟವಾದರೂ ಈ ಆಧ್ಯಾತ್ಮಿಕ ವಿಕಾಸಕ್ಕೆ ನಷ್ಟವಾಗದೆ ಪಥ ಸುಗಮ. ಅನಾದಿಯಾಗಿ ಸೃಷ್ಟಿಯಿಂದಲೇ ಬರುತ್ತಿರುವ ಈ ಭೌತ ಆಧ್ಯಾತ್ಮಿಕ ಹೋರಾಟ ಪಥದಲ್ಲಿ ಮಾನವರೆಲ್ಲ ಅನಿವಾರ್ಯವಾಗಿ ಸಾಗಲೇ ಬೇಕು. ಹೆಗೆಲ್ ಎಂಬ ಪಾಶ್ಚಾತ್ಯ ತತ್ತ್ವಜ್ಞಾನಿ ಇದನ್ನು ಹೀಗೆ ವರ್ಣಿಸಿದ್ದಾನೆ : "ಎರಡು ಪ್ರಚಂಡ ಶಕ್ತಿಗಳ ಅದ್ಭುತ ಹೋರಾಟದ ಫಲವಾಗಿಯೇ ಮಾನವನ ಮೋಕ್ಷ ಲಭಿಸಬೇಕು-ನಿಸರ್ಗ ಮತ್ತು ಮಾನವ ; ಕಾಯ ಮತ್ತು ಚಿತ್ತ : ಭೌತ ಶಕ್ತಿ ಮತ್ತು ಆತ್ಮಶಕ್ತಿ ; ರೂಕ್ಷ ಮತ್ತು ಸಂತ. ಹೀಗೆ ಸಾಗಿದೆ ಆಧ್ಯಾತ್ಮಿಕ ವಿಕಾಸ. ನಿಕಲ್ಸನ್ ಎಂಬ ಲೇಖಕ "ಇಸ್ಲಾಮಿನ ಅನುಭಾವಿಗಳು" (Mystics of Islam) ಎಂಬ ಗ್ರಂಥದಲ್ಲಿ ಉದಾಹರಿಸಿರುವ ಈ ವಿಷಯ ಇದನ್ನೇ ಇನ್ನೂ ಸ್ಪಷ್ಟಪಡಿಸುತ್ತದೆ:

> "ಲೋಹವಾಗಿ ಸತ್ತೆ, ಸಸ್ಯವಾಗಿ ಜನಿಸಿದೆ.
> ಸಸ್ಯವಾಗಿ ಸತ್ತೆ, ಪ್ರಾಣಿಯಾಗಿ ಜನಿಸಿದೆ.
> ಪ್ರಾಣಿಯಾಗಿ ಸತ್ತೆ, ಮಾನವನಾಗಿ ಜನಿಸಿದೆ.
> ನನಗೇನು ಭಯ ? ಸಾವಿನಿಂದ ನಾನೆಂದು
> ಕಮ್ಮಿಯಾದೆ ?
> ಮಾನವನಾಗಿ ಮತ್ತೊಮ್ಮೆ ಸಾಯುವೆ,
> ದಿವ್ಯ ದೇವತೆಗಳೊಡನೆ ವಿಹರಿಸುವೆ,
> ದೇವತ್ವದಿಂದಲೂ ನಾ ಮುಂದೆ ಸಾಗುವೆ.
> ಭಗವಂತನೊಬ್ಬನಲ್ಲದೆ
> ಉಳಿದುವಕೆಲ್ಲ ಗತಿ ಸಾವೆ ;
> ದೇವತ್ವವನ್ನು ತ್ಯಜಿಸಿದ ಮೇಲೆ
> ಸ್ಥಿತಿಯೇನಿಹುದು ಎನಗೆ ?
> ಅವಾಕ್ ಮಾನಸ ಗೋಚರವದು,
> ಓ, ಎನಗೆ ಇರವು ಬೇಡ
> ಇರವು ರಹಿತ ಸ್ಥಿತಿಯೇ
> ಅವನ ಬಳಿಗೆಮ್ಮ ಯಾತ್ರೆ."

ಜಡದಿಂದ ಜೀವಕ್ಕೆ, ಕೇವಲ ಜೀವದಿಂದ ಚಿತ್ತ್ರವುಳ್ಳ ಮಾನವನ ಅಂತಸ್ತಿಗೆ ಏರಿಬಂದ ಮಾನವನ ಮುಂದಿನ ವಿಕಾಸಕ್ಕೆ ಅಡ್ಡಿಯಾಗಿ ನಿಲ್ಲುವ ಅಂಶ ಭೌತದ ಆಕರ್ಷಣೆಯೆಂದು ಹಿಂದೆಯೇ ಹೇಳಿದೆ. ಆ ಆಕರ್ಷಣೆ ಸುಖ ಸಾಧನಗಳ ಹಂಬಲಕ್ಕೆ ಕಾರಣವಾಗುತ್ತದೆ. ಇದನ್ನು ಕುರಿತು ಭಗವದ್ಗೀತೆ ಎರಡು ಶ್ಲೋಕಗಳಲ್ಲಿ ತರ್ಕಬದ್ಧವಾಗಿ, ಸುಂದರವಾಗಿ, ಹೇಳುತ್ತದೆ :

ಧ್ಯಾಯತೋ ವಿಷಯಾನ್ ಪುಂಸಃ
ಸಂಗಸ್ತೇಷೂಪಜಾಯತೇ
ಸಂಗಾತ್ ಸಂಜಾಯತೇ ಕಾಮಃ
ಕಾಮಾತ್ ಕ್ರೋಧೋऽಭಿ ಜಾಯತೇ ॥
ಕ್ರೋಧಾದ್ಭವತಿ ಸಮ್ಮೋಹಃ
ಸಮ್ಮೋಹಾತ್ ಸ್ಮೃತಿ ವಿಭ್ರಮಃ
ಸ್ಮೃತಿಭ್ರಂಶಾತ್ ಬುದ್ಧಿನಾಶೋ
ಬುದ್ಧಿನಾಶಾತ್ ಪ್ರಣಶ್ಯತಿ ॥

(ಸುಖ ಸಾಧನೆಗಳನ್ನು ಕುರಿತು ಹಂಬಲಿಸುವವರಿಗೆ ಅವುಗಳಲ್ಲಿ ಪ್ರೀತಿ ಹುಟ್ಟುತ್ತವೆ ಪ್ರೀತಿಯಿಂದ ಬಯಕೆ ಹುಟ್ಟುತ್ತದೆ. ಬಯಕೆಯಿಂದ ಸಿಟ್ಟು ಜನಿಸುತ್ತದೆ. ಸಿಟ್ಟಿನಿಂದ ಭ್ರಾಂತಿಯುಂಟಾಗುತ್ತದೆ. ಭ್ರಾಂತಿಯಿಂದ ನೆನಪು ಹಾರಿ ಹೋಗುತ್ತದೆ. ನೆನಪು ಹೋಗುವುದರಿಂದ ಬುದ್ಧಿ ನಾಶವಾಗುತ್ತದೆ. ಇದರಿಂದ ಆತ್ಮನಾಶವಾಗುತ್ತದೆ.)

ಈ ತರ್ಕಸರಣಿಯ ಪ್ರಕಾರವಾಗಿ ಆತ್ಮನಾಶ ಅನಿವಾರ್ಯ. ಇದನ್ನು ತಪ್ಪಿಸಲು ಇರುವ ಉಪಾಯ ಒಂದೇ—'ಆತ್ಮ ಸಂಯಮ'. ಇಂದ್ರಿಯಗಳು ಅತ್ಯಂತ ಪ್ರಬಲವಾದುವು. ಅವು ದುಷ್ಟ ಅಶ್ವಗಳಿದ್ದಂತೆ. ಸಂಯಮದ ಕಡಿವಾಣವಿಲ್ಲದಿದ್ದರೆ, ಆತ್ಮನಾಶದ ಕಮರಿಗೆ ಒಯ್ಯುತ್ತವೆ.

"ನಾನು ಸಂಯಮ ಸಾಧಿಸಿದವನು" "ನಾನು ಸಮಚಿತ್ತವುಳ್ಳವನು" "ಸ್ಥಿತಪ್ರಜ್ಞ" ಎಂದು ಯಾರೂ ಹೆಮ್ಮೆಪಟ್ಟುಕೊಳ್ಳುವಂತಿಲ್ಲ. ಎಂಥವನನ್ನೂ ಯಾವ ಮಾಯದಲ್ಲೋ ಇಂದ್ರಿಯಗಳು ತಮ್ಮ ವಶಪಡಿಸಿಕೊಂಡು ಬಿಡುತ್ತವೆ. ಆದ್ದರಿಂದ ಬುದ್ಧಿ ಪೂರ್ವಕ ಸಂಯಮವನ್ನೂ ಮೀರಿಸಿದ ಅಂಶವೆಂದರೆ, ಗೀತೆಯೇ ಹೇಳುವಂತೆ "ಪರಂ ದೃಷ್ಟ್ವಾ ನಿವರ್ತತೇ" ಅಂದರೆ ಪರತತ್ತ್ವದ ದರ್ಶನ ಇಲ್ಲವೆ ಪರವಸ್ತುವಿನ ಕೃಪೆ ; ತತ್ತ್ವನಿಷ್ಠೆ ಅಥವಾ ಈಶ್ವರಾನುಗ್ರಹ. ಇದೊಂದೇ ಆಧ್ಯಾತ್ಮಿಕ ಪ್ರಗತಿ ಅಥವಾ ವಿಕಾಸದ ರಾಜಪಥ

ಭೌತ ಸಂಪತ್ತಿನ ಇಂದಿನ ಪ್ರಗತಿ, ತತ್ತ್ವನಿಷ್ಠೆ ಅಥವಾ ಈಶ್ವರಾನುಗ್ರಹದ ಮಾರ್ಗವನ್ನು ಅನುಸರಿಸಬೇಕು. ಇದರಿಂದ ಬುದ್ಧಿ ಮತ್ತು ಮನಸ್ಸುಗಳು ಶುದ್ಧವಾಗಿ, ನೇರವಾಗಿ, ಆಧ್ಯಾತ್ಮಿಕ ವಿಕಾಸಕ್ಕೆ ಎಡರಾಗದೆ ಪೋಷಕವಾಗುತ್ತವೆ ; ಪೂರಕವಾಗುತ್ತವೆ. ಭೌತಕ್ಕೆ ಎಣೆಯಿಲ್ಲದ ಅರ್ಥ, ಮೌಲ್ಯ ಬರುತ್ತದೆ.

ಜಗತ್ತು ಒಂದಲ್ಲ ಒಂದು ದಿನ ಆ ಪಥದಲ್ಲಿ ಸಾಗಲೇಬೇಕು. ಮಾನವಕೋಟಿ ತನ್ನ ಉದ್ಧಾರವನ್ನು ಕಂಡುಕೊಳ್ಳಬೇಕು. ಇಂಥ ಸ್ಥಿರಸಂಬಿಕೆಯನ್ನೇ ಜೀಸಸ್, ಸಾಕ್ರೆಟೀಸ್, ಗಾಂಧೀಜೀ ಮುಂತಾದ ಸಂತ ಸಜ್ಜನ ಶ್ರೇಷ್ಠರು ಹೊಂದಿದ್ದರು : ಅವರೇ ಸ್ವತಃ ಹುತಾತ್ಮರಾದರೂ "ಪರಂ ದೃಷ್ಟ್ವಾ ನಿವರ್ತತೇ" ಎಂಬ ಸೊಲ್ಲಿನಲ್ಲಿ ಸತ್ಯಾಂಶವನ್ನು ಗೋಪುರ ಹತ್ತಿ ಸಾರಿದ್ದಾರೆ. ಭೌತದ ಮೇಲೆ ದಿಗ್ವಿಜಯ ಸಾಧಿಸಿ, ಆಧ್ಯಾತ್ಮಿಕ ಪ್ರಭೆ ಬೀರಿದ್ದಾರೆ. ಭೌತ ಸಾಯಲೇಬೇಕು ; ಅಂದು ಬೆಳಕು ಮೂಡಿ ಬಂದೀತು. ಧ್ರುವ ತಾರೆಯಂತೆ ಆದೀತು : ಮೂಸೆಗೆ ಹಾಕಿದ ಚಿನ್ನ ಕಲ್ಮಷರಹಿತನಾಗಿ, ತನ್ನ ಸ್ವಂತ ಶೋಭೆಯಿಂದ ಬೆಳಗುವಂತೆ. ಸಾಯುವುದು ಸಾಯಲೇ ಬೇಕಾದುದು ; ಭಸ್ಮವಾಗಬೇಕಾದುದು. - ಉಳಿಯುದು ಅಜರಾಮರ ನಿತ್ಯಸತ್ಯವನ್ನು ವ್ಯಕ್ತಿಗಳ—ಲೋಕದ ಜೀವನದಲ್ಲಿ ಪ್ರತಿಷ್ಠಿಸಿಕೊಳ್ಳಲು 'ಪರಂದೃಷ್ಟ್ವಾ' ಎನ್ನುವುದಕ್ಕಿಂತ ಉತ್ತಮರೀತಿಯಿಲ್ಲ. ಆಗ ಪ್ರಗತಿಯ ಮುಂದುವರಿಕೆಯಾಗುತ್ತದೆ. ವಿಕಾಸ ಕರಗತವಾಗುತ್ತದೆ.

— o —

ತಿರುಕ್ಕುರಳ್‌ನಲ್ಲಿ ಗೃಹಧರ್ಮ

ಶ್ರೀಮತಿ ಆರ್. ಅಂಬುಜಮ್ಮ ಎಂ.ಎ., ಬಿ.ಟಿ.

'ಸಾಹಿತ್ಯದ ಉದ್ದೇಶವೇನು ?' ಎಂಬ ಪ್ರಶ್ನೆಯು ಅನೇಕರಿಂದ ಕೇಳಲ್ಪಟ್ಟಿರುವುದು. ಪ್ರಶ್ನೆಗೆ ಉತ್ತರವನ್ನೂ ಸಹ ಅನೇಕರು ಅನೇಕ ರೀತಿಗಳಲ್ಲಿ ಕೊಟ್ಟಿರುವರು. ನಮ್ಮ ದೇಶದಲ್ಲಿ ನಮಗೆ ಲಭಿಸಿರುವ ಪ್ರಾಚೀನ ಗ್ರಂಥಗಳನ್ನು ಗಮನಿಸಿ ನೋಡಿದಾಗ, ನಮ್ಮ ಪೂರ್ವಿಕರ ಭಾವನೆಯಲ್ಲಿ, ಸಾಹಿತ್ಯದ ಉದ್ದೇಶವು ಮಾನವನ ಸರ್ವಾಂಗೀಣ ಉನ್ನತಿ ಎನಿಸುವುದು. ಮನುಷ್ಯನ ಭಾವನೆಗಳನ್ನು ಉನ್ನತ ಮಟ್ಟಕ್ಕೆ ಒಯ್ದು ಅವನಲ್ಲಿ ಮೊದಲು ಮನುಷ್ಯತ್ವವನ್ನೂ ಅನಂತರ ದೇವತ್ವವನ್ನೂ ಬೆಳೆಸುವ ಸಲುವಾಗಿ ಅನಿವಾರ್ಯವಿರುವ ಕಲೆ ಎಂದರೆ, ಸಾಹಿತ್ಯ. ಇದರಿಂದ ಪ್ರಾಚೀನ ಸಾಹಿತ್ಯ ಹೆಚ್ಚಾಗಿ ಧಾರ್ಮಿಕ ಕ್ಷೇತ್ರವನ್ನೇ ಅವಲಂಬಿಸಿದ್ದರೆ, ಇದರಲ್ಲಿ ಆಶ್ಚರ್ಯವಿಲ್ಲ. ಆದಿಕಾಲದಿಂದಲೂ, ನೀತಿ, ಧರ್ಮ, ವ್ಯವಹಾರ, ಇವುಗಳಿಗೆ ಸಂಬಂಧಿಸಿದ ವಿಚಾರಗಳು ಸಾಹಿತ್ಯದಲ್ಲಿ ಹೆಣೆದುಕೊಂಡೇ ಬಂದಿರುವುವು. ಈ ವಿಚಾರಗಳನ್ನು ಹೇಳುವ ರೀತಿಯಲ್ಲಿ ವೈವಿಧ್ಯತೆ ಉಂಟು. ಕೆಲವು ಮಹನೀಯರು ತಮ್ಮ ಗ್ರಂಥಗಳನ್ನು ಕಥೆಗಳ ರೂಪದಲ್ಲೂ ರಚಿಸಿ ತಮ್ಮ ವಿಚಾರಗಳನ್ನು ಜನತೆಯ ಮುಂದಿಟ್ಟಿರುವರು. ಸಂಸ್ಕೃತದಲ್ಲಿ ಪಂಚತಂತ್ರದ ಕಥೆಗಳು, ನೀತಿ ಕಥೆಗಳು, ಪುರಾಣ ಮತ್ತು ಇತಿಹಾಸಗಳು, ಈ ರೀತಿಯ ಸಾಹಿತ್ಯಕ್ಕೆ ನಿದರ್ಶನ. ಸಂಸ್ಕೃತದಲ್ಲಷ್ಟೇ ಅಲ್ಲ, ಇನ್ನಿತರ ಭಾಷೆಗಳಲ್ಲೂ ಸಹ ಈ ರೀತಿಯ ಸಾಹಿತ್ಯ ವಿಪುಲವಾಗಿರುವುದು.

ಮೇಲಿನ ಸಾಹಿತ್ಯದಲ್ಲಿ ಜನತೆಗೆ ಬೇಕಾದ ವಿಚಾರಗಳು ಪರೋಕ್ಷ ರೂಪದಲ್ಲಿದ್ದರೆ, ಮತ್ತೆ ಕೆಲವು ಗ್ರಂಥಗಳಲ್ಲಿ, ಈ ಉಪದೇಶಗಳು ಸೂಕ್ತಿಗಳ ಆಕಾರದಲ್ಲಿ ಪ್ರತ್ಯಕ್ಷರೂಪದಲ್ಲಿ ವರ್ಣಿತವಾಗಿರುವುವು. ಸಂಸ್ಕೃತದ 'ಸುಭಾಷಿತ' 'ನೀತಿ ಶತಕ' ಮುಂತಾದುವು ಈ ರೀತಿಯ ಗ್ರಂಥಗಳಿಗೆ ಉದಾಹರಣೆ. ಇದೇ ರೀತಿ ಕನ್ನಡದಲ್ಲಿ ಸರ್ವಜ್ಞ ಕವಿಯು ತನ್ನ ತ್ರಿಪದಿಗಳ ಮೂಲಕ ನಮಗೆ ಕೊಟ್ಟು ಹೋಗಿರುವ ವಚನಗಳು ಇದಕ್ಕೆ ಒಂದು ಉದಾಹರಣೆ ಮಾನವನ ವ್ಯವಹಾರಗಳು ಧರ್ಮಸಮ್ಮತವಾಗಿಯೂ, ಸುಖಪ್ರದವಾಗಿಯೂ ಇರಬೇಕಾದರೆ, ಅದಕ್ಕೆ ಅವನು ಅನುಸರಿಸಬೇಕಾದ ರೀತಿ ನೀತಿಗಳನ್ನು ಸರ್ವಜ್ಞ ಕವಿಯು ವಿವಿಧ ರೀತಿಯಲ್ಲಿ, ತನ್ನ ತ್ರಿಪದಿಗಳಲ್ಲಿ ಅಡಕಗೊಳಿಸಿರುವನು. ಕನ್ನಡ ಭಾಷೆಗೆ ಸೋದರ ಭಾಷೆಯಂತಿರುವ ತಮಿಳಿನಲ್ಲೂ ಸಹ ಈ ರೀತಿಯ 'ಸೂಕ್ತಿ'ರೂಪದಲ್ಲಿ ವೈದೋರಿರುವ ಸಾಹಿತ್ಯಕ್ಕೆ ಕೊರತೆಯಿಲ್ಲ. ಇವುಗಳ ಪೈಕಿ 'ತಿರುಕ್ಕುರಳ್', ಎಂಬ ಗ್ರಂಥವು ಪ್ರಸಿದ್ಧವಾದುದು.

'ತಿರುಕ್ಕುರಳ್' ಗ್ರಂಥದ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿ, ಅನಂತರ ಗ್ರಂಥದಲ್ಲಿ ಮೂಡಿ ಬಂದಿರುವ ವಿಚಾರಗಳಲ್ಲಿ ಕೆಲವನ್ನು ತಿಳಿಯೋಣ. ಈ ಗ್ರಂಥದ ಕರ್ತೃ 'ತಿರುವಳ್ಳುವರ್'ಎಂಬುವರು. ಅವರ ಈ ಹೆಸರೇ ಅವರನ್ನು ಅಂತ್ಯ ಜಾತಿಗೆ ಸೇರಿದವರೆಂದು ಸೂಚಿಸುವುದು; ಇವರು ಒಬ್ಬ ಬ್ರಾಹ್ಮಣ ಮತ್ತು ಅಂತ್ಯಜ ಸ್ತ್ರೀಗೆ ಮಗನಾಗಿ ಜನಿಸಿ ಒಬ್ಬಾನೊಬ್ಬ ಅಂತ್ಯಜನ ಮನೆಯಲ್ಲಿ ಅಂತ್ಯಜನಾಗಿಯೇ ಬೆಳೆದರು ಎಂದು ಹೇಳುವರು. ಗೊಬ್ಬರದೊಡನೆ ಬೆರೆತ ಮಣ್ಣಿನಲ್ಲಿ ಅರಳುವ ಸುಗಂಧ ಭರಿತ ಮಲ್ಲಿಗೆಯಂತೆ ಹೀನ ಪರಿಸ್ಥಿತಿ ಮತ್ತು ವಾತಾ

ವರಣದಲ್ಲೇ ಇವರ ಜ್ಞಾನ ಬೆಳಗಿತು, ಮತ್ತು ಪ್ರತಿಭೆ ವಿಕಾಸಗೊಂಡಿತು. ತಮಿಳು ಸಾಹಿತ್ಯದಲ್ಲಿ ಛಂದಸ್ಸುಗಳಲ್ಲೆಲ್ಲಾ, ಅತ್ಯಂತ ಸಣ್ಣದಾದ 'ಕುರಳ್' ಎಂಬ ಛಂದಸ್ಸಿನಲ್ಲಿ ಇವರ ಅನುಭವ ಭಂಡಾರವೊಡನೆ 'ತಿರುಕ್ಕುರಳ್' ಮೈದೋರಿತು.

ಹಿಂದೀ ಭಾಷೆಯಲ್ಲಿ 'ಗಾಗರ್ ಮೇಂ ಸಾಗರ್' ಎಂಬ ನಾಣ್ಣುಡಿಯುಂಟು. ಇದರ ಕನ್ನಡ ಭಾಷಾಂತರ 'ಕುಡಿಕೆಯಲ್ಲಿ ಸಾಗರ' ಎಂದು ಹೇಳಬಹುದು. ತಿರುಕ್ಕುರಳಿನ ಪದ್ಯಗಳನ್ನು ಓದಿದಾಗ ಈ ನಾಣ್ಣುಡಿಯು ನೆನಪಿಗೆ ಬರುವುದು. ಕೆಲವೇ ಪದ್ಯಗಳನ್ನೊಳಗೊಂಡ ಎರಡು ಪಂಕ್ತಿಯುಳ್ಳ ಈ ಸೂಕ್ತಿಗಳಲ್ಲಿ ಅಡಕವಾಗಿರುವ ವಿಶಾಲವಾದ ಭಾವವು ಮಡಕೆಯಲ್ಲಿ ಸಾಗರವನ್ನು ಅಡಗಿಸಿಟ್ಟಂತೆ ಇರುವುದು.

ನಮ್ಮ ಪ್ರಾಚೀನ ಋಷಿಗಳಿಂದ ವ್ಯಕ್ತಗೊಳಿಸಲ್ಪಟ್ಟಿರುವ ಅಭಿಪ್ರಾಯಕ್ಕನುಸಾರವಾಗಿ ಮನುಷ್ಯನ ಜೀವನದ ಸಾರ್ಥಕ್ಯ ಇರುವುದು 'ಧರ್ಮ, ಅರ್ಥ ಕಾಮ ಮತ್ತು ಮೋಕ್ಷ' ಎಂಬ ಚತುರ್ವಿಧ ಪುರುಷಾರ್ಥಗಳ ಸಿದ್ಧಿಯಲ್ಲಿ' ಈ ಸಿದ್ಧಿಯೇ ನಮ್ಮ ಪೂರ್ವಿಕರ ಭಾವನೆಯಲ್ಲಿದ್ದ ಮನುಷ್ಯನ ಸರ್ವಾಂಗೀಣ ವಿಕಾಸ ಎನ್ನಬಹುದು. ಈ ಪುರುಷಾರ್ಥಗಳ ಸಿದ್ಧಿಗಾಗಿ ಪ್ರಾಚೀನ ಜ್ಞಾನಿಗಳು ತಮ್ಮ ಸಾಹಿತ್ಯದ ಮೂಲಕ ಜನತೆಗೆ ಮಾರ್ಗವನ್ನು ತೋರಿರುವರು. ತಿರುವಳ್ಳುವರ್ ಸಹ ತಮ್ಮ 'ತಿರುಕ್ಕುರಳ್' ನಲ್ಲಿ ಈ ಪುರುಷಾರ್ಥಗಳ ಸಿದ್ಧಿಗಾಗಿ ಅನುಸರಿಸಬೇಕಾದ ನೀತಿ ನಿಯಮಗಳನ್ನು ಸ್ಪಷ್ಟಪಡಿಸಿರುವರು. ಈ ದೃಷ್ಟಿಯಿಂದ, ತಮ್ಮ ಗ್ರಂಥವನ್ನು ಮೂರು ಭಾಗಗಳಾಗಿ ವಿಂಗಡಿಸಿ, ಧರ್ಮದ ವಿವರಣೆಯನ್ನು ಪ್ರಾರಂಭದಲ್ಲೂ, ಅರ್ಥದ ಸಿದ್ಧಿ ಮತ್ತು ಸಾರ್ಥಕ್ಯಕ್ಕೆಗೆ ಬೇಕಾದ ದಾರಿಯನ್ನು ಎರಡನೆಯ ಭಾಗದಲ್ಲೂ, ಕಾಮಕ್ಕೆ ಸಂಬಂಧಿಸಿದ ಸಮುಪದೇಶಗಳನ್ನು ಮೂರನೆಯ ಭಾಗದಲ್ಲೂ ವಿವರಿಸಿರುವರು. ಈ ಮೂರು ಪುರುಷಾರ್ಥಗಳೂ ಇಹ ಜೀವನಕ್ಕೆ ಸಂಬಂಧಿಸಿರುವುವು ನಾಲ್ಕನೆಯ ಪುರುಷಾರ್ಥವಾದ ಮೋಕ್ಷವು ಪರಕ್ಕೆ ಸಂಬಂಧಿಸಿದುದಷ್ಟೆ. ಅದರ ವಿಚಾರವನ್ನು ತಮ್ಮ ಗ್ರಂಥದಲ್ಲಿ ಸೇರಿಸಿಲ್ಲ. ಧರ್ಮಾರ್ಥಕಾಮಗಳಲ್ಲಿ ಸಿದ್ಧಿಯನ್ನು ಪಡೆದ ವ್ಯಕ್ತಿ ಸಿದ್ಧಪುರುಷನೇ ಸರಿ. ಅವನಿಗೆ ಮೋಕ್ಷ ತಾನಾಗಿಯೇ ಕೈಗೂಡದಿರುವುದೇ ?

ಈ ಸೂಕ್ತಿಗಳಲ್ಲಿ, 'ತಿರುವಳ್ಳುವರ್' ಮನುಷ್ಯನ ಪ್ರತಿಯೊಂದು ವರ್ತನೆಗೂ ಒಂದು ಫಲ ಉಂಟು ಎಂಬ ಅಂಶವನ್ನು ನಮಗೆ ಮನವಟ್ಟು ಮಾಡುವರು. ಎಂದರೆ ಒಳ್ಳೆಯ ವರ್ತನೆಗಳಿಗೆ ಶುಭವಾದ ಫಲ ಖಂಡಿತ. ಅದರಂತೆಯೇ ಕೆಟ್ಟ ಕೆಲಸಗಳಿಗೆ ಅಶುಭ ಫಲ ಖಂಡಿತ. ಒಳ್ಳೆಯವನಿಗೆ ಒಳ್ಳೆಯದಾಗುವುದು ಎಷ್ಟು ನಿಶ್ಚಯವೋ ಅಷ್ಟೇ ನಿಶ್ಚಯವಾಗಿ ಕೆಟ್ಟ ಕಾರ್ಯಗಳನ್ನು ಮಾಡಿದವನು ಕೆಟ್ಟ ಫಲದಿಂದ ತಪ್ಪಿಸಿಕೊಳ್ಳಲಾರ.

ಮನುಷ್ಯನ ಕರ್ತವ್ಯಗಳು ಎರಡು ವಿಧ. ಕೆಲವು ಮಾಡಲೇ ಬೇಕಾದುವು. ಅವುಗಳನ್ನು ಬಿಡುವುದರಿಂದ ಅವನು ಕರ್ತವ್ಯಚ್ಯುತನಾಗುವನು. ಮತ್ತೆ ಕೆಲವು ಕರ್ತವ್ಯಗಳು ಮನುಷ್ಯನು ಮಾಡಬಾರದವು. ಅವುಗಳನ್ನು ಮಾಡುವುದರಿಂದ ಅವನು ಕರ್ತವ್ಯಚ್ಯುತನಾಗುವನು. ಧರ್ಮಕಾರ್ಯಗಳು ಮಾಡಬೇಕಾದ ಕರ್ತವ್ಯ. ಅಧರ್ಮ ಕಾರ್ಯಗಳು ಬಿಡಬೇಕಾದ ಕರ್ತವ್ಯ. ಈ ಕೃತ್ಯಾಕೃತ್ಯಗಳೆರಡೂ ತಿರುಕ್ಕುರಳಿನಲ್ಲಿ ವರ್ಣಿತವಾಗಿರುವುವು.

ಪ್ರತಿಯೊಂದು ಅಂಶವನ್ನು ಎರಡು ಮುಖಗಳಲ್ಲಿ ವಿವರಿಸಿರುವುದು ಈ ಗ್ರಂಥವನ್ನಿನ ಮತ್ತೊಂದು ವೈಶಿಷ್ಟ್ಯ. ಒಂದು ತತ್ವದ ಸ್ವರೂಪವನ್ನು ವಿವರಿಸಿ ಹೇಳುವರು; ಅನಂತರ ಆ ತತ್ವದ ಅನುಸರಣೆಯಿಂದಾಗುವ ಫಲವನ್ನು ಹೇಳುವರು. ಇದರ ಜೊತೆಗೆ ಆ ತತ್ವವನ್ನು ಅನುಸರಿಸದೆ ಬಿಡುವುದರಿಂದ ಆಗುವ ಹಾನಿಯನ್ನೂ ತೋರಿಸಿ ಕೊಟ್ಟಿರುವರು.

'ತಿರುಕ್ಕುರಳ್' ಸುಮಾರು 2000 ವರ್ಷಗಳ ಹಿಂದೆ ರಚಿಸಲ್ಪಟ್ಟುದೆಂದು ಕೆಲವರ ಅಭಿಪ್ರಾಯ. ಅದಕ್ಕೆ

ತಕ್ಕಂತೆ ಅವರ ಭಾಷೆಯು ಪ್ರಾಚೀನತಮ ಭಾಷೆಗಳಲ್ಲಿ ಒಂದಾಗಿರುವುದು.

ಈಗ ತಿರುಕ್ಕುರಳ್ ಗ್ರಂಥದಲ್ಲಿ ವರ್ಣಿತವಾಗಿರುವ ವಿಚಾರಗಳಲ್ಲಿ ಕೆಲವನ್ನು ನೋಡೋಣ. ಗ್ರಂಥದ ಮೊದಲನೆ ಅಧ್ಯಾಯ 40 ಸೂಕ್ತಿಗಳನ್ನೊಳಗೊಂಡು ಗ್ರಂಥಕ್ಕೆ ಪೀಠಿಕೆಯಂತಿರುವುದು. 10ಪದಗಳಿಗೆ ಒಂದು 'ಅಧಿಕಾರ'ಎಂದು ವಿಂಗಡಿಸಲ್ಪಟ್ಟಿರುವುದು. ಭಗವಂತನ ಸ್ವರೂಪ ವಿವರಣೆಯಲ್ಲಿ ಒಂದನೆಯ ಅಧಿಕಾರ ಆರಂಭ ವಾಗುವುದು. 'ಅ'ಕಾರವು ಅಕ್ಷರಗಳಿಗೆ ಮೂಲ. ಭಗವಂತನು ಸೃಷ್ಟಿಗೆ ಮೂಲ. ಅವನು ಜ್ಞಾನಸ್ವರೂಪಿ ನಮ್ಮ ಹೃದಯಗಳಲ್ಲಿ ನೆಲೆಸಿರುವನು. ರಾಗದ್ವೇಷ ರಹಿತನು. ಸತ್ಯಸ್ವರೂಪಿ. ಇಂದ್ರಿಯಗಳನ್ನು ನಿಗ್ರಹಿಸಿರುವನು, ಕರುಣಾಸ್ವರೂಪಿ. ಅಷ್ಟಗುಣಪರಿಪೂರ್ಣನು ; ನಮ್ಮನ್ನು ಸಂಸಾರ ಸಾಗರದಿಂದ ಪಾರು ಮಾಡಿಸುವವನು ಇವನೇ.'

ಎರಡನೆಯ ಅಧಿಕಾರದಲ್ಲಿ ಪ್ರಪಂಚದ ಜೀವನಾಧಾರವಾದ ಮಳೆಯ ಮಹಿಮೆ, ಮಳೆಯಿಲ್ಲದಿದ್ದರೆ ಆಗುವ ಹಾನಿ, ಇವುಗಳನ್ನು ವಿವರಿಸಿ, ಮುಂದಿನ ಅಧಿಕಾರದಲ್ಲಿ ತ್ಯಾಗಜೀವನದ ಮಹತ್ವ ವಿವರಣೆ ಮತ್ತು ತ್ಯಾಗಿಗಳ ಪ್ರಶಂಸೆ ಇವುಗಳನ್ನು ಕೊಟ್ಟವರಾರು. ಈ ಪೀಠಿಕೆಯ ಕೊನೆಯ ಭಾಗವಾದ ನಾಲ್ಕನೆಯ ಅಧ್ಯಾಯದಲ್ಲಿ ಧರ್ಮದ ಹಿರಿಮೆಯು ವರ್ಣಿತವಾಗಿರುವುದು.

ಈಗ ಗ್ರಂಥದ ಮೊದಲನೆಯ ಭಾಗದಲ್ಲಿ ತಿರುವಳ್ಳವರು ಧರ್ಮದ ವಿಚಾರವಾಗಿ ಹೇಳಿರುವುದನ್ನು ಗಮನಿಸೋಣ. ಮನುಷ್ಯನು ಜೀವನದಲ್ಲಿ ಅನುಸರಿಸ ಬೇಕಾದ ಧರ್ಮವನ್ನು ತಿರುವಳ್ಳವರು 'ಗೃಹಧರ್ಮ' (ಇಲ್ಲರು) ಮತ್ತು ಸನ್ಯಾಸಧರ್ಮ (ಕೊರವರಂ) ಎಂದು ಇಬ್ಭಾಗವಾಗಿ ವಿಂಗಡಿಸಿಕೊಂಡಿರುವರು. ಗೃಹಧರ್ಮದಲ್ಲಿ ಗೃಹಸ್ಥನಿಗೆ ಬೇಕಾದ ತತ್ವಾಂಶಗಳನ್ನು:ವಿವರಿಸಿರುವರು. ಗೃಹಸ್ಥನಾಗಿ ಸಾರ್ಥಕತೆಯನ್ನು ಹೊಂದಿದ ಮಾನವನು ಪುನರ್ಜನ್ಮವನ್ನು ಕಳೆದು ಕೊಳ್ಳುವ ಅಪೇಕ್ಷೆಯಿಂದ ಸನ್ಯಾಸವನ್ನು ಸ್ವೀಕರಿಸಿದಾಗ ಅವನಲ್ಲಿರಬೇಕಾದ ನಡವಳಿಕೆಯ ಬಗ್ಗೆ 'ಸನ್ಯಾಸ ಧರ್ಮ'ದಲ್ಲಿ ವಿವರಿಸಿರುವರು

ಗೃಹಧರ್ಮವನ್ನು ವಿವರಿಸುವ ಸಲುವಾಗಿ ಇಪ್ಪತ್ತನಾಲ್ಕು ಅಧಿಕಾರಗಳನ್ನು ನಿರ್ಮಿಸಿರುವರು. ಒಂದೊಂದು ಅಧಿಕಾರದಲ್ಲಿ ಒಂದೊಂದು ತತ್ವವನ್ನು ಹತ್ತು ಸೂಕ್ತಿಗಳ ಮೂಲಕ ಸ್ಪಷ್ಟಪಡಿಸಿರುವರು. ಪ್ರಾರಂಭದಲ್ಲಿ ಗೃಹಸ್ಥಾಶ್ರಮದ ಹಿರಿಮೆಯನ್ನು ಕೊಂಡಾಡಿ ಇದು ಇತರ ಆಶ್ರಮಗಳಿಗಿಂತಲೂ ಮೇಲೆಂಬ ಅಭಿಪ್ರಾಯವನ್ನು ಸೂಚಿಸಿರುವರು. ಇದಕ್ಕೆ ಕಾರಣವನ್ನೂ ವಿವರಿಸಿರುವರು. ಬ್ರಹ್ಮಚಾರಿ, ವಾನಪ್ರಸ್ಥಿ ಮತ್ತು ಸನ್ಯಾಸಿ, ಇವರೆಲ್ಲರಿಗೂ, ಗೃಹಸ್ಥನೇ ಆಧಾರ. ಇಷ್ಟೇ ಅಲ್ಲ, ಸತ್ತವರಿಗೂ ಸಹ ಗೃಹಸ್ಥನೇ ಅವಲಂಬನ.

ಗೃಹಸ್ಥನಿಗೆ, ಪಿತೃಗಳ ಬಗ್ಗೆ, ದೇವತೆಗಳ ಬಗ್ಗೆ, ಅತಿಥಿಗಳ ಬಗ್ಗೆ, ನಂಟರ ಬಗ್ಗೆ ಮತ್ತು ತನ್ನ ಬಗ್ಗೆ ನಿರ್ವಹಿಸಿಕೊಳ್ಳಬೇಕಾದ ಐದು ಬಗೆಯ ಕರ್ತವ್ಯಗಳುಂಟು. ಗೃಹಸ್ಥನು ಗಳಿಸುವಾಗ ಪಾಪಕ್ಕಂಜಿ ನಡೆಯಬೇಕು. ಹೀಗೆ ಗಳಿಸಿದ ಸಂಪತ್ತನ್ನು ಇತರರೊಡನೆ ಹಂಚಿಕೊಂಡು ಅನುಭವಿಸಬೇಕು.

"ಅನ್ಬುಂ ಅರನುಂ ಉಡೈತ್ತಾಯಿನ್ ಇಲ್ವಾಳ್ಕೈ ಪಣ್ಬುಂ ಪಯನುಂ ಅದು."

ಪ್ರೀತಿ ಮತ್ತು ಧರ್ಮಗಳೆರಡೂ ಬೆರೆತಲ್ಲಿ ಗೃಹಸ್ಥ ಜೀವನವು ಸಾರ್ಥಕವು.

''ಗೃಹಸ್ಥ ಧರ್ಮಕ್ಕಿಂತ ಹೆಚ್ಚಿನಫಲಗಳನ್ನು ಕೊಡುವ ಬೇರೆ ಧರ್ಮಗಳಿಲ್ಲವೇ'' ಎಂದು ಕೇಳುವವರನ್ನು ಕುರಿತು ಈ ರೀತಿ ಪ್ರಶ್ನಿಸಿರುವರು.

"ಅರನೆನಪ್ಪಟ್ಟದೇ ಇಲ್ವಾಳ್ಕೈ ಯಂದುಮ್
ಪಿರನ್ಪಳಿಪ್ಪದಿಲ್ಲಾಯಿ ನನ್ರು''

''ಧರ್ಮಮಾರ್ಗದಲ್ಲಿ ಗೃಹಸ್ಥ ಜೀವನವನ್ನು ನಡೆಸಿದರೆ ಸಕಲ ಸಿದ್ಧಿಗಳೂ ಇದರಲ್ಲಿ ಇನ್ನು ಬೇರೆ ಮಾರ್ಗವನ್ನು ಹುಡುಕುವುದೇಕೆ ?''

ಧರ್ಮನಿರತನಾದ ಗೃಹಸ್ಥನು ತಪಸ್ವಿಗಳಿಗಿಂತ ಹೆಚ್ಚಿನವನು, ಎಂದು ಸಾರಿರುವರು. ಹೆಚ್ಚೇಕೆ ? ಸದ್ಗೃಹಸ್ಥನು ಭೂಮಿಯಲ್ಲಿ ವಾಸಿಸುವ ದೇವತೆ ಎಂದೇ ಗಣಿಸಲ್ಪಡುವನು.

"ವೈಯತ್ತುಳ್ ವಾಳ್ವಾಂಗು ವಾಳ್ಬವನ್
ವಾನುರೈಯುಂ ದೈಯ್ವತ್ತುಳ್ ವೈಕ್ಕಪ್ಪಡುಂ"

ಗೃಹಸ್ಥಾಶ್ರಮದಲ್ಲಿ ಪುರುಷನ ಜೀವನ ಗೃಹಿಣಿಯ ಜೀವನ ದೊಂದಿಗೆ ಬೆರೆತಿರುವುದಷ್ಟೆ! ಅಂದರೆ ಗೃಹಸ್ಥ ಧರ್ಮ ಗೃಹಿಣಿಯನ್ನು ಅವಲಂಬಿಸಿರುವುದು. ಆದುದರಿಂದ ಗೃಹಿಣಿಗೆ ಅವಶ್ಯಕವಾದ ನೀತಿ ನಿಯಮಗಳು ಮುಂದಿನ ಅಧಿಕಾರದಲ್ಲಿ ವಿವರಿಸಲ್ಪಟ್ಟಿರುವುವು. ತನ್ನ ಪತಿಯ ಸಂಪತ್ತಿಗೆ ಒಪ್ಪುವಂತೆ ಗೃಹಜೀವನವನ್ನು ನಿರ್ವಹಿಸುವ ಸಾಮರ್ಥ್ಯ ಸದ್ಗೃಹಿಣಿಯ ಲಕ್ಷಣ. ಸದ್ಗೃಹಿಣಿಯು ತನ್ನನ್ನು ತಾನು ಕಾಪಾಡಿಕೊಳ್ಳುವ ಶಕ್ತಿಯನ್ನು ಪಡೆದಿರುವಳು. ಪತಿಯನ್ನು ಉಪಚರಿಸುವಳು. ಒಳ್ಳೆಯ ಹೆಸರನ್ನು ಪಡೆಯಲು ಅರ್ಹತೆಯನ್ನು ತೋರುವಳು. ತನ್ನ ಧರ್ಮವನ್ನು ಮರೆಯಳು. ಸದ್ಗೃಹಿಣಿಯ ಭಾಗ್ಯವೆಂದರೆ ಪಾತಿವ್ರತ್ಯ. ಪಾತಿವ್ರತ್ಯ ಸಂಪತ್ತನ್ನು ಪಡೆದವಳ ಎದುರಿಗೆ ಸೃಷ್ಟಿಯೇ ತಲೆಬಾಗುವುದಂತೆ. "ಪೈಯ್ಯೆನ ಪೆಯ್ಯುಂ ಮಳೈ" ಮಳೆ ಎಂದ ಕೂಡಲೇ ಮಳೆ ಸುರಿಯುವುದು. ಸದ್ಗೃಹಿಣಿಯು ದೇವತೆಗಳ ಆದರಕ್ಕೆ ಪಾತ್ರಳು.

ಗೃಹಸ್ಥ ಜೀವನದ ಸಂಪೂರ್ಣತೆ ಮತ್ತು ಹಿರಿಮೆಗೆ ಕಾರಣಭೂತಗಳಾದ ವಿವಿಧ ಅಂಶಗಳ ಪೈಕಿ ಸಂತಾನೋತ್ಪತ್ತಿ ಒಂದು ಮುಖ್ಯ ಅಂಶ ಎಂಬುದು ಪೂರ್ವಿಕರ ಅಭಿಪ್ರಾಯ. ಗೃಹಿಣಿಯ ಸದ್ಗುಣಗಳಷ್ಟೆ ಒಳ್ಳೆಯ ಸಂತಾನವೂ ಗೃಹಸ್ಥ ಧರ್ಮಕ್ಕೆ ಮುಖ್ಯ ಸಾಧನ ಎಂಬುದು ತಿರುವಳ್ಳುವರ ಅಭಿಪ್ರಾಯ.

"ಮಂಗಲ ಮನ್ಬ ಮನೈಮಾಟ್ಚಿ ಮಟ್ರದ
ನನ್ಗಲ ನನ್ಮಕ್ಕಟ್ಪೇರು."

ಒಳ್ಳೆಯ ಮಕ್ಕಳು ಸದ್ಗೃಹಿಣಿಗೆ ಭೂಷಣಪ್ರಾಯರು.

ಗೃಹಿಣಿಯು ಸದ್ಗೃಹಿಣಿಯಾಗಿರದಿದ್ದಲ್ಲಿ ಪುರುಷನಿಗಾಗುವ ಹಾನಿಯನ್ನು ತೋರಿಸಿರುವರು. "ಗೃಹಿಣಿಯು ಅಪಕೀರ್ತಿಗೆ ಪಾತ್ರಳಾಗುವಂತಿದ್ದರೆ, ಪುರುಷನು ಸಮಾಜದಲ್ಲಿ ಮರ್ಯಾದೆಯನ್ನು ಹೊಂದಲಾರ." ಸಂತಾನದ ವಿಚಾರವಾಗಿ ಮತ್ತಷ್ಟು ವಿವರಿಸಿ ಕೆಲವು ಸೂಕ್ತಿಗಳನ್ನು ಕೊಟ್ಟಿರುವರು.

"ಏಳು ಪಿರಪ್ಪು ನ್ತೀಯವೈ ತೀಂಡಾ ಪಳಿ ಪಿಣಂಗಾ
ಪಣ್ಬುಡೈ ಮಕ್ಕಟ್ಪೆರಿನ್"

ಒಳ್ಳೆಯ ಮಕ್ಕಳಾದಲ್ಲಿ, ಆ ಗೃಹಸ್ಥನಿಗೆ ಏಳೇಳು ಜನ್ಮಗಳ ಕೇಡುಗಳೂ ಸಹ ದೂರವಾಗುವುವು.

ಮಕ್ಕಳಿಂದ ಉಂಟಾಗಬಹುವಾದ ಸುಖಾನುಭವಗಳನ್ನು ವಿವರಿಸುತ್ತಾ "ಮಕ್ಕಳ ತೊದಲ ಮಾತನ್ನು ಕೇಳದವರು ವೀಣೆಯ ಇಂಚರ ಕೊಳಲನಾದ ಇವು ಇಂಪು ಎಂಬರು"ಎನ್ನುವರು. ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಬೇಕಾದುದು ತಂದೆಯ ಕರ್ತವ್ಯ.

ತಂದೆಯ ಬಗ್ಗೆ ಮಗನ ಕರ್ತವ್ಯ ಏನು ಎಂಬುದನ್ನು ಬಹಳ ಸ್ವಾರಸ್ಯವಾದ ರೀತಿಯಲ್ಲಿ ಸೂಚಿಸುವರು. ಮಗನನ್ನು ಕಂಡು ಜನರು "ಇವನ್ತಂದೈ ಎನ್ನೋಟ್ರಾನ್ಕೊಲ್ ಎನುಂಶೊಲ್" "ಇವನ ತಂದೆ (ಇವನನ್ನು ಪಡೆಯಲು) ಏನು ತಪಸ್ಸನ್ನು ಮಾಡಿದ್ದನೋ'' ಎಂದು ಹೇಳಬೇಕು. ತಾನು ಉತ್ತಮನೆನಿಸಿ ತಂದೆಗೆ ಹರ್ಷವನ್ನುಂಟುಮಾಡುವುದು ಮಗನು ತಂದೆಯ ಬಗ್ಗೆ ಮಾಡಬೇಕಾದ ಕರ್ತವ್ಯ.

ಗೃಹಸ್ಥನಲ್ಲಿ ಪ್ರೀತಿ ಧರ್ಮಗಳು ನೆಲೆ ಮಾಡಬೇಕೆಂದು ಪ್ರಾರಂಭದಲ್ಲಿ ಸೂಕ್ತಿಯೊಂದರಲ್ಲಿ ಹೇಳಿದನು. ಆ ಪ್ರೀತಿಯ ವಿಚಾರವಾಗಿ ಒಂದು ಅಧಿಕಾರದಲ್ಲಿ ವಿಶದವಾಗಿ ಹೇಳಿರುವರು. ಪ್ರೀತಿಗೆ ಲಕ್ಷಣ ತ್ಯಾಗ ಎಂಬ ಅಂಶವನ್ನು ವಿವರಿಸುತ್ತಾ "ಪ್ರೀತಿ ಇಲ್ಲದವರು ಸ್ವಾರ್ಥಿಗಳು. ಪ್ರೀತಿಯುಳ್ಳವರು ಪರರ ಹಿತವನ್ನೇ ಚಿಂತಿಸುವರು" ಎಂಬ ಅರ್ಥವುಳ್ಳ ಸೂಕ್ತಿಯೊಂದನ್ನು ಕೊಟ್ಟಿರು

ವರು. ಪ್ರೀತಿ ಇಲ್ಲದವನನ್ನು ಧರ್ಮದೇವತೆಯು ಬಿಸಿಲಿನ ಶಾಖ ಕನಲಿದಂತೆ, ಸುಟ್ಟು ಬಿಡುವುದಂತೆ. ಪ್ರೀತಿಯ ಮಹಿಮೆಯನ್ನು ಹೊಗಳುತ್ತಾ, 'ಪ್ರೀತಿಯು ಧರ್ಮ ಒಂದೇ ಅಲ್ಲ. ಅಧರ್ಮವನ್ನು ಕಳೆಯಲು ಸಹ ನೆರವಾಗುವುದು." ಎಂಬ ಭಾವವನ್ನು ಸೂಚಿಸಿರುವರು. "ಪ್ರೀತಿ ಇಲ್ಲದ ಜೀವನ ವ್ಯರ್ಥ ಜೀವನ" ಮನುಷ್ಯನಿಗೆ ಕೈ ಕಾಲು ಮುಂತಾದುವು ಬಾಹ್ಯ ಅಂಗಗಳಾದರೆ, ಪ್ರೀತಿಯು ಮಾನಸಿಕವಾದ ಅಂಗ. ಪ್ರೀತಿ ತೋರದವನು ಒಂದು ಅಂಗವೇ ಇಲ್ಲದವನಿಗೆ ಸಮ. ಪ್ರೀತಿಯು ಮನುಷ್ಯ ಜೀವನದಲ್ಲಿ ಎಷ್ಟು ಮುಖ್ಯವೆಂಬುದನ್ನು ಸೂಚಿಸಲು, ಒಂದು ಸೂಕ್ತಿಯಲ್ಲಿ "ದೇಹದಲ್ಲಿ ಒಳ ಅಂಗವಾದ ಪ್ರೀತಿ ಇಲ್ಲದಿದ್ದಲ್ಲಿ ಹೊರ ಅಂಗಗಳಿಂದ ಏನು ಪ್ರಯೋಜನ" ಎಂದು ಸೂಚಿಸಿರುವರು. ಕೊನೆಯದಾಗಿ ಪ್ರೀತಿಯೇ ಜೀವನ, ಪ್ರೀತಿ ಇಲ್ಲದವನು ಜೀವಚ್ಛವ ಎಂದು ತೀರ್ಮಾನಿಸಿ ಹೇಳಿರುವರು.

"ಅನ್ಬಿನ್ ವಳಿಯದುಯಿರ್ ನಿಲ್ಯೈ, ಯದಿಲಾರ್
ಕೆನ್ಬುದೋಲ್ ಪೋರ್ತ್ತ ವುಡಂಬು"

(ಪ್ರೀತಿಯ ಜೀವನಾಧಾರ. ಅದಿಲ್ಲದಿದ್ದವರು ತೊಗಲು ಮುಚ್ಚಿದ ಎಲುಬಿನ ದೇಹವು ಮಾತ್ರ)

ಅತಿಥಿ ಸತ್ಕಾರ ಗೃಹಸ್ಥನ ಮುಖ್ಯಧರ್ಮವೆಂಬುದನ್ನು ಎಲ್ಲರೂ ಒಪ್ಪುವರಷ್ಟೆ. ಈ ಧರ್ಮವನ್ನು ನಿರ್ವಹಿಸುವುದರ ಬಗ್ಗೆ ತಿರುವಳ್ಳುವರ ಅಭಿಪ್ರಾಯವನ್ನು ನೋಡೋಣ.

"ಇರುನ್ದೋಂಬಿ ಇಲ್ವಾಳ್ವದೆಲ್ಲಾಂವಿರುನ್ದೋಂಬಿ
ವೇಳಾಣ್ಮೈ ಶೆಯ್ದರ್ ಪೊರುಟ್ಟು."

(ಮನೆಯಲ್ಲಿದ್ದು, ಸಂಪತ್ತನ್ನು ಕಾದು, ಗೃಹಸ್ಥನಾಗಿ ಬಾಳುವುದೆಲ್ಲಾ ಅತಿಥಿಗಳನ್ನು ಆದರಿಸಿ, ಅವರಿಗೆ ಉಪಕಾರ ಮಾಡುವ ಸಲುವಾಗಿಯೇ.)

ಅಂದರೆ ಗೃಹಸ್ಥ ಗೃಹಸ್ಥನಾಗಿರುವುದೇ ಅತಿಥಿ ಸತ್ಕಾರಕ್ಕಾಗಿ ಎಂದು ಭಾವವು. ಅತಿಥಿ ಸತ್ಕಾರ ಮಾಡುವವನಿಗೆ ಬಡತನವಾಗಲೀ, ಸಂಕಟವಾಗಲೀ ಒದಗುವುದಿಲ್ಲವೆಂದು ಸಾರಿರುವರು. ಅತಿಥಿಸತ್ಕಾರ ಮಾಡುವವನ ಮನೆಯಲ್ಲಿ "ಅಗನಮರ್ನ್ದು ಶೆಯ್ಯಾಳುರೈಯುಂ" (ಲಕ್ಷ್ಮಿಯು ಮನವೊಲಿದು ಬಂದು ನೆಲಸುವಳು.) ದೇವತೆಗಳಿಂದ ಪೂಜಿಸಲ್ಪಡುವನು. ಅತಿಥಿ ಸತ್ಕಾರಕ್ಕಾಗುವ ವೆಚ್ಚದ ಬಗ್ಗೆ ಹೆದರುವವರಿಗೆ ಸಮಾಧಾನವನ್ನು ಕೊಡುವಸೂಕ್ತಿಯೊಂದನ್ನು ಹೇಳಿರುವರು. "ಕಷ್ಟಪಟ್ಟು ಕೂಡಿಟ್ಟ ಹಣವು ಹಾಳಾಯಿತೆಂದು ದುಃಖಿಸುವರು. ಈ ಜನರು ಅತಿಥಿ ಸತ್ಕಾರವನ್ನು ಮಾಡದವರು." ಅಂದರೆ ಅತಿಥಿ ಸತ್ಕಾರಕ್ಕೆ ವೆಚ್ಚವಾದ ಹಣ ನಷ್ಟವಲ್ಲ. ಅವನಿಗೆ ಯಜ್ಞಫಲ ದೊರಕುವುದು.

"ಅತಿಥಿ ಸತ್ಕಾರ ಸಿರಿತನ. ಅದಿಲ್ಲದಿದ್ದರೆ ಬಡತನ.''

ಮನುಷ್ಯನ ಗುಣಾವಗುಣಗಳನ್ನು ಅಳೆಯಲು ಮುಖ್ಯ ಸಾಧನವೆಂದರೆ, ಅವನ ಮಾತು. ಗೃಹಸ್ಥನು ಸದ್ಗೃಹಸ್ಥನೆನಿಸಲು ಅವನ ಮಾತು ಬಹುಮಟ್ಟಿಗೆ ಅಂಕೆಯುಳ್ಳದ್ದು ಸುಧಾರಿಸಿದ ರೂಪವನ್ನು ತಾಳಬೇಕು. ಈ ನುಡಿಯ ಬಗ್ಗೆ ತಿರುವಳ್ಳುವರ್ ಹೇಳಿರುವುದನ್ನು ನೋಡೋಣ. ಒಂದು ಅಧಿಕಾರದಲ್ಲಿ 'ಸವಿನುಡಿಯೇ ಗೃಹಸ್ಥನಿಗೆ ಪರಮ ಧರ್ಮ' ಎಂಬ ಅಂಶವು ವಿವರಿಸಲ್ಪಟ್ಟಿರುವುದು. 'ಸವಿನುಡಿ' ಯಾವುದು ? ಈ ಪ್ರಶ್ನೆಗೆ ತಿರುವಳ್ಳುವರ್ ಉತ್ತರ ಇದು : "ಪ್ರೀತಿ, ನಿಷ್ಕಾಪಟ್ಯ ಮತ್ತು ಸತ್ಯ ಇವುಗಳನ್ನು ಹೊಂದಿರುವವರ ಬಾಯಿಯಿಂದ ಹೊರಟ ನುಡಿಗಳು ಸವಿನುಡಿಗಳು." ಅಂದರೆ, ಸದ್ಗೃಹಸ್ಥನ ಮಾತುಗಳು ಈ ಮೂರು ಅಂಶಗಳಿಂದ ಕೂಡಿರಬೇಕಾದುದು ಅಗತ್ಯ. ಸವಿನುಡಿಯ ಮಹಿಮೆಯನ್ನು ವಿವರಿಸುತ್ತಾ, "ಅದು, ದಾನಕ್ಕಿಂತ ಮಿಗಿಲು; ಮನುಷ್ಯನಿಗೆ ಅಲಂಕಾರ ಪ್ರಾಯವಾದುದು. ಸವಿನುಡಿಯಿಂದ ಪಾಪ ಪರಿಹಾರ! ಪುಣ್ಯವೃದ್ಧಿ. ಶ್ರೇಯಸ್ಕರ ಮತ್ತು ಇಹಪರಗಳಲ್ಲಿ ಸುಖದಾಯಕ ಸವಿನುಡಿಯಿಂದ ಇಷ್ಟೆಲ್ಲಾ ಲಾಭಗಳಿರಲು, ಅದನ್ನು ಬಿಟ್ಟು ಮನುಷ್ಯರು ಕಟುನುಡಿಗಳನ್ನು ಏಕೆ ಬಳಸುವರೆಂಬುದು"

ತಿರುವಳ್ಳುವರಿಗೆ ಒಂದು ಸಮಸ್ಯೆ. "ರಸಭರಿತವಾದವಾಗಿದ ಹಣ್ಣುಗಳು ಕಣ್ಣೆದುರಿಗೆ ಇರುವಾಗ ಅವುಗಳನ್ನು ಬಿಟ್ಟು ಕಸುಕಾಯಿಗಳನ್ನು ಆತುರ ಆತುರನಾಗಿ ಕಿತ್ತುಕೊಳ್ಳುವುದಕ್ಕೆ ಸಮ ಕಟುನುಡಿಗಳನ್ನು ಬಳಸುವುದು :

"ಇನಿಯವುಳವಾಗ ವಿನ್ನಾದ ಕೂರಲ್
ಕನಿಯಿರುಪ್ಪ ಕಾಯ್ ಕವರ್‌ನ್ದಟ್ರು"

ಮತ್ತೊಬ್ಬರ ತಪ್ಪುಗಳನ್ನೂ, ಕೊರತೆಗಳನ್ನೂ ಅವರ ಹಿಂದೆ (ಮರೆಯಲ್ಲಿ) ಎತ್ತಿ ಆಡಿ ದೂರುವುದು ಮನುಷ್ಯನಿಗೆ ಒಂದು ದೋಷವೆಂಬುದನ್ನು ಎಲ್ಲರೂ ಒಪ್ಪುವರಷ್ಟೆ. ಆದರೆ ಈ ದೋಷದಿಂದ ಮುಕ್ತರಾಗಿರುವ ಮನುಷ್ಯನನ್ನು ಹುಡುಕಿ ತೆಗೆಯಬೇಕು. ಈ ದೋಷದ ಸುಧಾರಣೆಗೆ ಪ್ರಯತ್ನ ಪಟ್ಟ ತಿರುವಳ್ಳುವರ್ ತಮ್ಮ ಒಂದು ಅಧಿಕಾರದಲ್ಲಿ ಈ ದೋಷನಿವಾರಣೆ ಮುಖ್ಯವೆಂಬುದನ್ನು ತೋರಿಸಿರುವರು. ಹಿಂದೆ ಮತ್ತೊಬ್ಬರನ್ನು ದೂರುವುದಕ್ಕಿಂತ ಸಾಯುವುದು ಮೇಲು ಎಂದಿರುವರು. ಇಂತಹ ಮನುಷ್ಯನನ್ನು ಭೂಮಿಯು ಮನಸ್ಸಿಲ್ಲದೆ ಅನಿವಾರ್ಯವಾದುದರಿಂದ ಹೊರುತ್ತಿರುವುದಂತೆ. "ಇತರರ ದೋಷಗಳನ್ನು ಕಾಣುವಂತೆ ಮನುಷ್ಯ ತನ್ನ ದೋಷಗಳನ್ನೂ ಏಕೆ ಕಂಡುಕೊಳ್ಳಬಾರದು ?" ಎಂಬುದು ಕವಿಯ ಪ್ರಶ್ನೆ.

ವ್ಯರ್ಥ ಹರಟೆ ಕೂಡದು ಎಂಬ ಅಂಶವನ್ನು ಒಂದು ಅಧಿಕಾರದಲ್ಲಿ ವಿವರಿಸುತ್ತಾ ಅದು ಬರಿಯ ಪೊಟ್ಟು ಎಂದು ಹೇಳಿರುವರು. ಅದರಿಂದ ಹಾನಿಯೇ ವಿನಾ ಲಾಭವಿಲ್ಲವೆಂಬುದನ್ನು ಸ್ಪಷ್ಟಪಡಿಸಿದರು.

ಗೃಹಸ್ಥನಿಗೆ ಇಂದ್ರಿಯನಿಗ್ರಹ ಅತಿ ಮುಖ್ಯವೆಂದು ತಿಳಿಸಿದರು. ಅದರಲ್ಲೂ ನಾಲಗೆಯನ್ನು ಅಂಕೆಯಲ್ಲಿಡಬೇಕಾದುದು ಅನಿವಾರ್ಯ.

"ಯಾ ಕಾವಾರಾಯಿನು ನಾಕಾಕ್ಕ ಕಾವಾಕ್ಕಾಲ್
ಶೊಗಾಪ್ಪರ್ ಶೊಲ್ಲಿರುಕ್ಕುಪ್ಪಟ್ಟು"

(ಯಾವುದನ್ನು ಅಡಗಿಸದಿದ್ದರೂ, ನಾಲಗೆಯನ್ನು ಅಡಗಿಸಲಿ; ಇಲ್ಲದಿದ್ದಲ್ಲಿ ಕೆಟ್ಟ ಮಾತುಗಳನ್ನಾಡಿ ಶೋಕಿಪರು.)

ಮನುಷ್ಯನ ಬಾಳ್ವೆಗೆ ಸಂಬಂಧಿಸಿದ ಇನ್ನೂ ಅನೇಕ ತತ್ವಗಳನ್ನು ತಿರುಕ್ಕುರಳಿನ ಈ ಭಾಗದಲ್ಲಿ ಕಾಣಬಹುದು. ನಡತೆಯನ್ನು ಕಾಪಾಡಿಕೊಳ್ಳಬೇಕಾದುದು **ಅತಿ ಮುಖ್ಯವೆಂದು ಒತ್ತಿ** ಹೇಳಿರುವರು. ತಾಳ್ಮೆ, **ಸಹಿಷ್ಣುತೆ, ಈರ್ಷ್ಯೆ** ಇಲ್ಲದಿರುವಿಕೆ, ಲೋಭವಿಲ್ಲದಿರುವಿಕೆ ಇದೇ ಮುಂತಾದ ಪ್ರತಿಯೊಂದು ಅಂಶವನ್ನೂ ಒಂದೊಂದು ಅಧಿಕಾರದಲ್ಲಿ ವರ್ಣಿಸಿರುವರು. ಇತರರಿಗೆ ಕೇಡಬಯಸದಿರುವುದು, ಅತಿ ಮುಖ್ಯವೆಂದು ಹೇಳಿರುವರು. "ಕೆಟ್ಟ ಕೆಲಸವೆಂದರೆ ಬೆಂಕಿಯನ್ನು ಕಂಡಂತೆ ಹೆದರಬೇಕು'' ಕೆಟ್ಟಕೆಲಸವನ್ನು ಮಾಡದೆ ಇರುವವನಿಗೆ ಆತ್ಮಕಲ್ಯಾಣ ಖಂಡಿತ ಎಂಬ ಭರವಸೆಯನ್ನು ಕೊಟ್ಟಿರುವರು.

ಗೃಹಸ್ಥನಿಗೆ ದಾನವು ಅವನ ಮುಖ್ಯಧರ್ಮಗಳಲ್ಲೊಂದು. "ದಾನಮಾಡುವುದು ನಮ್ಮ ಸಂಪತ್ತನ್ನು ಕೂಡಿಡುವ ವಿಧಾನ ಎಂದು ಹೇಳಿರುವ ಸೂಕ್ತಿಯು,

"ಕೊಟ್ಟುದು ಕುದಿಯಲಿ ಬೇಡ, ಕೆಟ್ಟಿತೆನೆಂದೆನಬೇಡ, ಕಟ್ಟದಾ ಬುತ್ತಿ ಶಿವನಲ್ಲಿಹುದು ಸರ್ವಜ್ಞ" ಎಂಬ ವಚನವನ್ನು ನೆನಪಿಗೆ ತರುವುದು.

ಧರ್ಮ ನಿರತನಾದವನು ಕೀರ್ತಿಗೆ ಪಾತ್ರನು; ಆದುದರಿಂದ ಕೀರ್ತಿಯನ್ನು ಗಳಿಸುವಂತೆ ಬಾಳಬೇಕೆಂಬ ಆದೇಶವನ್ನು ಕೊಡುತ್ತಾ "ಕೀರ್ತಿವಂತರು ಬಾಳಿದವರು ಕೀರ್ತಿವಂತರಲ್ಲದವರು ಬಾಳಿದವರಲ್ಲ" ಎಂದು ಹೇಳಿರುವರು.

ಇಲ್ಲಿಯವರೆಗೆ ನಾವು ನೋಡಿದುದು ತಿರುಕ್ಕುರಳಿನ ಪ್ರಾರಂಭ ಭಾಗದಲ್ಲಿನ ಕೆಲವು ಅಂಶಗಳನ್ನು ಮಾತ್ರ ಒಟ್ಟಿನಲ್ಲಿ, ತಿರುಕ್ಕುರಳ್ ಮಾನವ ಜೀವನದ ಒಂದು ವಿಶ್ವಕೋಶ ಎಂದರೆ ತಪ್ಪಾಗಲಾರದು. ಈ ಗ್ರಂಥವನ್ನು ಸಂಪೂರ್ಣವಾಗಿ ಓದಿದರೆ ಹಾಗೆನಿಸುವುದು ಸಹಜ.

ನಮ್ಮ ಕವಿಗಳ ಪುಷ್ಪ ಪ್ರೀತಿ

—ಪಂ॥ ಕೆ. ಪಿ. ಶಿವಲಿಂಗಯ್ಯ, ಬಿ.ಎ.,

"ನಾನೃಷಿಃ ಕುರುತೇ ಕಾವ್ಯಂ"—ಋಷಿಯ ಅಂಶವಿಲ್ಲದವನು ಅಂದರೆ ಋಷಿಯಲ್ಲದವನು ಕವಿತೆಯನ್ನು ಸೃಷ್ಟಿ ಮಾಡಲಾರನು (ಕವಿಯಾಗಲಾರನು) ಎಂಬ ಪ್ರಸಿದ್ಧ ಲೋಕೋಕ್ತಿಯೊಂದುಂಟು. ಈ ಮಾತಿನ ಪ್ರಕಾರ ಕವಿಯಾದವನಿಗೆ ಪ್ರಕೃತಿಯ ಬಗೆಗೆ ಅಪಾರವಾದ ಹಾಗೂ ಅವ್ಯಾಜ ಪ್ರೇಮ ಇರಬೇಕಾದ್ದು ಸ್ವಾಭಾವಿಕ. ಅಂತೆಯೇ ನಿಸರ್ಗ ಸಂಪತ್ತಿನಲ್ಲಿ ಅತ್ಯಂತ ಪ್ರಮುಖವಾದ "ಹೂವು" ಕವಿಗಳ ಪ್ರೀತಿಗೆ ಪಾತ್ರವಾಗಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಜಗತ್ತಿನ ನಾನಾ ಭಾಷೆಗಳಲ್ಲಿ ಕವಿತೆಗಳನ್ನು ರಚಿಸಿರುವ ಮಹಾನುಭಾವರು ಸತ್ಯ, ಶಿವ, ಸೌಂದರ್ಯಗಳನ್ನು ತಮ್ಮ ಜೀವನದ ಉಸಿರಾಗಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಅವರಲ್ಲಿ ನಮ್ಮ ಕವಿಗಳು ಅಂದರೆ ಕನ್ನಡ ಕವಿಗಳಿಗಿರುವ ಪುಷ್ಪಪ್ರೀತಿಗೆ ಹಲವು ನಿದರ್ಶನಗಳನ್ನು ಕೊಡಬಹುದಾಗಿದೆ.

ಪ್ರಾರಂಭಕ್ಕೆ ಕನ್ನಡದ ಆದಿಕವಿ ಎನಿಸಿದ ಆದಿಪಂಪನ ಸುರಹೊನ್ನೆ ಹೂವಿನ ವರ್ಣನೆ ಅವನ ಆದಿಪುರಾಣದಲ್ಲಿ ಸೊಗಸಾಗಿ ಅಭಿವ್ಯಕ್ತವಾಗಿದೆ; ಅಲ್ಲದೆ ಬಿರಿದ ಮಲ್ಲಿಗೆಯನ್ನು ಕಂಡಾಗ ತನ್ನ ತಾಯ್ನಾಡು ನೆನಪಿಗೆ ಬರುವುದೆನ್ನುತ್ತಾನೆ :

"ತೆಂಕಣಗಾಳಿ ಸೋಂಕಿದೊಡಂ....ಬಿರಿದ ಮಲ್ಲಿಗೆ ಗಂಡೊಡಂ ಮಧುಮಹೋತ್ಸವಮಾದೊಡಂ....ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ."

ಇದರಿಂದ ನಾಡಿನ ಪ್ರತಿಕೃತಿ 'ಹೂ' ಎಂದಾಯಿತು !

....

ಅನಂತರ ವಚನ ಸಾಹಿತ್ಯದ ಆದ್ಯ ಪ್ರವರ್ತಕರಾದ ಭಗವಾನ್ ಬಸವೇಶ್ವರರ ವಚನಗಳಲ್ಲಿ ಕೂಡ ಪುಷ್ಪ ಪ್ರೀತಿ ಅಲ್ಲಲ್ಲಿ ಇಣಿಕಿನೋಡಿರುವುದು ಕಂಡುಬರುತ್ತದೆ. ಭಗವಂತನ ನಿಲುವನ್ನು ವರ್ಣನೆ ಮಾಡುವಾಗ ಬಸವಣ್ಣನವರು ಕೊಡುವ ಒಂದು ಉಪಮಾ ಪರಂಪರೆ ಇದು :

ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ
ಇದ್ದಿತ್ತು ;
ಸಸಿಯೊಳಗಣ ರಸದ ರುಚಿಯಂತೆ ಇದ್ದಿತ್ತು ;
ನನೆಯೊಳಗಣ ಪರಿಮಳದಂತೆ ಇದ್ದಿತ್ತು ;
ಕೂಡಲ ಸಂಗಮದೇವರ ನಿಲುವು ಕನ್ನೆಯ
ಸ್ನೇಹದಂತೆ ಇದ್ದಿತ್ತು !

ಇಲ್ಲಿ ಭಗವಂತನು ಅವಿನಾಭಾವ—ಸಂಬಂಧದಿಂದ ಈ ವಸ್ತುಗಳಲ್ಲಿ ಇರುತ್ತಾನೆ ಎಂದು ಹೇಳುವಾಗ – ಮೊಗ್ಗಿನೊಳಗಿರುವ ಪರಿಮಳದಂತೆ ಎಂದು ಹೂವಿನ ಪೂರ್ವಸ್ಥಿತಿಯಾದ ಮೊಗ್ಗನ್ನು ಪ್ರಸ್ತಾಪಿಸಿದ್ದಾರೆ.

ಅವರ ಇನ್ನೊಂದು ವಚನ :--

"ಚಕೋರಂಗೆ ಚಂದ್ರಮನ ಬೆಳಕಿನ ಚಿಂತೆ ;
ಅಂಬುಜಕೆ ಭಾನುವಿನ ಉದಯದ ಚಿಂತೆ ;
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ ;
ಎನಗೆ ಎಮ್ಮಯ ಕೂಡಲಸಂಗಮದೇವರ ನೆನೆವ
ಚಿಂತೆ!"

ಎಂಬುದರಲ್ಲಿ ತಾವರೆಗೆ ಸೂರ್ಯೋದಯದ ಚಿಂತೆ ಮತ್ತು ಭ್ರಮರಕ್ಕೆ ಹೂವಿನ ಜೇನನ್ನು ಹೀರುವ ಚಿಂತೆ–ಇವನ್ನು ಪ್ರಸ್ತಾಪಿಸುವಾಗ ಹೂವನ್ನೇ ತಮ್ಮ ಪ್ರೀತಿಯ ವಸ್ತುವಾಗಿ ಪರಿಭಾವಿಸಿರುವುದು ಕಂಡುಬರುತ್ತದೆ.

ರಸಿಕಚಕ್ರಿ ಎನಿಸಿದ ಹರಿಹರ ಮಹಾಕವಿಯು ಗಿರಿಜಾದೇವಿಯ ಪುಷ್ಪಾಪಚಯ ಸಂದರ್ಭದಲ್ಲಿ ಈ ಕೆಳಕಂಡಂತೆ ಹೂವುಗಳ ಬಗೆಗೆ ತನಗಿರುವ ಪ್ರೇಮವನ್ನು ತೋಡಿಕೊಂಡಿದ್ದಾನೆ.

ಈತನು ತನ್ನ ಪುಷ್ಪರಗಳೆಯಲ್ಲಂತೂ ಹೂವುಗಳನ್ನು ಪರಮಾತ್ಮನ ಪ್ರತಿರೂಪವೋ ಎಂಬಂತೆ ಕೊಂಡಾಡಿ ನಮಸ್ಕರಿಸಿ ಪರಮಾನಂದದಿಂದ ಕುಣಿದಾಡುತ್ತಾನೆ.

ಅಳಿ ಎರಗದ, ಅನಿಲನಲುಗದ, ರವಿಕರಂ ಪುಗದ ಬೆಳೆಬೆಳೆದು ನಳನಳಿಸುವ ಇರುವಂತಿಗೆಯನ್ನು ಕಂಡು "ಪರಶಿವಂಗೆ ಓಲೈಪ ಪೂವ ನೀಡೇ" ಎಂದೂ ಸಂಪಗೆಯ ಮರದೆಡೆಗೆ ಬಂದು "ಏನವ್ವ ಸಂಪಿಗೆಯೇ ಶಿವನ ಸಿರಿಮುಡಿಗಿಂದು ನೀನೀವ ಪೊಸ ಕುಸುಮಮಂ ನೀಡು" ಎಂದೂ ಅದಿರ್ಗಂತಿಯ ಬಳಿ ಬಂದು "ಮುಖವೈದರ

ವಂಗೆ ಸಂದಲ್ಲಿ ಬರ್ದುಂಕುವೆ" ಎಂದೂ ಕೇತಕೆಯ ಕುಸುಮಗಳನ್ನು ಕೈಕೊಳ್ಳುವಾಗ "ಹೊರಗೆ ಮುಳ್ಳೊಗೆ ಕುಸಕ್ಕಕ್ಕು ನಿನ್ನಪರಿ" ಎಂದೂ ದವನದ ಬಳಿ ನಿಂತು "ದವನವೇ ತಿನವ ಪರಿಮಳದ ಹೆಬ್ಬಸೇ ಬಾರ," "ಭುವನದೊಳ್ ನಿನಗೆ ಸರಿ ಇಲ್ಲ ಸೌರಭಸಾರ" ಎಂದೂ ಇದೇ ರೀತಿಯಲ್ಲಿ ಅನೇಕ ತರದ ಹೂವುಗಳನ್ನು ಬಲು ಬಗೆಯಾಗಿ ಪ್ರಾರ್ಥಿಸಿ ಅವುಗಳ ಬಗೆಗೆ ತನಗಿರುವ ಅವಿರಳವಾದ ಪ್ರೀತಿಯನ್ನು ತೋಡಿಕೊಂಡಿದ್ದಾನೆ.

ಕನ್ನಡಿಗರಿಗೆ ಅತಿ ನೆಚ್ಚಿನ ಕವಿ ಎನಿಸಿಕೊಂಡಿರುವ ಕುಮಾರವ್ಯಾಸನು ತನ್ನ ಕಾವ್ಯದಲ್ಲಿ--

....ಅರಳಿದಂಬುಜ ಸತ್ತಿಗೆಯ ಮಂಜರಿಯ ಕುಸುಮದ, ಚಾಮರದ ಚಾತುರ ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ....ನೆರೆತಳಿತಶೋಕೆಯ, ಕೆಂಪುಗಳ ಪರಿಪಳಿತ ಕಮಲದ ಕಂಪುಗಳ ಬನಬನದ ಗುಂಪುಗಳ ಎಳಲತೆಯ ನುಣ್ಪುಗಳ........ಪಸರಿಸಿತು ಮಧುಮಾಸ ತಾವರೆಯೆಸಳ ದೋಣಿಯ ಮೇಲೆ ಹಾಯ್ದುವು ಕುಸುಮರಸಮಬ್ಬರದ ತ್ವರೆಯಸು ಕೂಡೆ ತುಂಬಿಗಳು ;........ (ಆದಿಪರ್ವ : ಸಂಧಿ ೧)............ಸರಸಿಜದ ಪರಿಮಳಕೆ, ತುಂಬಿಯ ಬರವ ಕೊಟ್ಟನು............ಕೆರಳಿ ನೈದಿಲು ಸಿರಿಯ ಸೂರೆಯ ತರಿಸಿದನು........—(ವಿರಾಟಪರ್ವ : ೧೦.)........ನಳಿನವಳದೊಳಗಡಗಿದುವು ನೈದಿಲುಗಳಲಿ ತಸಿದೊರೆವ ತುಂಬಿಯ ಕಳರವಕೆ ಬೆಚ್ಚಿದವು, ಹೊಕ್ಕವು ಬಗಿದು ತಿಳಿಗೊಳನ........ (ದ್ರೋಣಪರ್ವ : ೧೭)" ಈ ರೀತಿಯಾಗಿ ಸಾಧ್ಯವಾದೆಡೆಯಲ್ಲೆಲ್ಲಾ ಕಮಲವೇ ಮೊದಲಾದ ಹೂವುಗಳ ಚಿತ್ರಣವನ್ನು ಕಥಾಭಾಗದೊಂದಿಗೆ ಕೋದಿರುವುದು ಕಂಡುಬರುತ್ತದೆ.

ರತ್ನಾಕರವರ್ಣಿಯು ತನ್ನ "ಭರತೇಶ ವೈಭವ" ಕಾವ್ಯದಲ್ಲಿ ತನಗಿದ್ದ ಪುಷ್ಪಪ್ರೀತಿಯನ್ನು ಉಪ್ಪರಿಗೆ ಸಂಧಿಯಲ್ಲಿ-ಅರಸಿಯರು ಅರಸನಿಗೆ ಕಾಣಿಕೆ ಕೊಡುವ ಸಂದರ್ಭದಲ್ಲಿ ಅರ್ಪಿಸಿದ ಪುಷ್ಪಾಭರಣಗಳನ್ನು ಈ ರೀತಿ ವರ್ಣಿಸಿದ್ದಾನೆ :

....ನೀಲಾಂಗಿಯೊರ್ವಳು ಬಂದು ಕಾಣಿಕೆಗೊಂದು ನೀಲಾಂಬುಜವ ತಂದಿತ್ತು....ರಾಣಿಯೊರ್ವಳು ಬಂದು ಹೊಂದಾವರೆಯ ಕೈಗಾಣಿಕೆ ಇತ್ತು ಕೈಮುಗಿದು........ ಕೆಂಪಿಯೋರ್ವಳು ಬಂದು ರಾಯನ ಹಸ್ತಕೆ ಸಂಪಗೆ ಹೂಗಳ ನೀಡಿ........ಕರಿಯಳೊಬ್ಬಳು ಬಂದು ಚಕ್ರವರ್ತಿಗೆ ತನ್ನ ಕರಕುಶಲದೊಳು ರಚಿಸಿದ ಸುರಗಿಯ ಮಾಲೆಯನಿತ್ತಳು............ಹೊಂಗೇದಗೆಯ ಕಠಾರಿ[illegible] ನೋರ್ವ ಲತಾಂಗಿ ತಂದಿತ್ತಳು ನೃಪಗೆ........ಬ[illegible] ಜವ್ವನೆಯೊರ್ವಳಡಿ ಇಟ್ಟು, ಕಾಣ್ಕೆಗೆ ಬೆಟ್ಟದಾವರೆಯ[illegible] ತಂದಿತ್ತು........ಅಂಜೂತಂಜಾತ ಬಾಲೆ ಬಂದೊರ್ವ[illegible] ಸಾಗೆ ಕೆಂಜಾಜಿ ಸರಗೊಡುವಾಗ ಕೆಂಜಾಜಿ ಜಗುಳಿ[illegible] ಕಾಣಿಕೆಯಲ್ಲ ಪುಷ್ಪಾಂಜಲಿಯೆಂದರಾಳಿಯರು.......... ಎಲ್ಲರ ಮುಂದೊರ್ವ ಮುಗ್ಧೆ ನಾಚುತೆ ಬಂದು ಮಲ್ಲಿ[illegible] ಸರಗೊಡುವಾಗ ಮಲ್ಲಿಗೆ ಜಾರಿತು ಜಾರಿದರೇನದೆ[illegible] ಲ್ಲಿಗೆಯೆಂದನು ನೃಪತಿ........ಪಾದರಿಯಲರನೊರ್ವ[illegible] ಕೊಡುತಿರೆ ಜಾರಿ ಪಾದದೆಡೆಗೆ ಬಿದ್ದುದನನ........ಪ[illegible] ದಾರ ಸೋದಾರನೊತ್ತಿಗೆ ಪಾದಾರಿ ಬರಬಹುದೇ ಭ[illegible] ತೇಶ....ಎಂದು ಪಂಡಿತೆ ಅರಸನ ನಸುನಗಿಸಿದಳು...... ನಡೆತಂದು ರಮಣಿಯೊರ್ವಳು ರಾಯಗಿತ್ತಳು ಮು[illegible] ವಾಳದೊಂದು ಝಲ್ಲಿಯನು........ಮಾಪಿನ ತಳಿರ ತಂ[illegible] ತ್ರಳೊರ್ವಳು ತನ್ನ ಮಾವಾನ ಮಗನ ಹಸ್ತದೊಳು....

ಆಧುನಿಕ ಕವಿಗಳು ಕೂಡ ತಮ್ಮ ಪುಷ್ಪ ಪ್ರೀತಿಯನ್ನು ತಮ್ಮ ಕವನಗಳಲ್ಲಿ ಅಲ್ಲಲ್ಲಿ ಪ್ರಕಟಿಸಿರುವುದನ್ನು ನಾ[illegible] ಕಾಣುತ್ತೇವೆ.

ಶ್ರೀ ಪು.ತಿ.ನ. ಅವರು ತಮ್ಮ "ಹಣತೆ" ಎಂಬ ಕವ[illegible] ಸಂಕಲನದಲ್ಲಿ "ಹೂಗಳೇತಕೆ" ಎಂಬ ಕವನದಲ್ಲಿ...... ಗಿರಿಯನೇರುತರಸಿದಲರ, ಹಸುಳೆ, ಏತಕೆರಚುವೆ ದೇವನಡಿಯೊಳವನು ಇಡದೆ ಸುಮ್ಮನೇಕೆ ಬಿಸುಡುವೆ ....ಸೆಳೆದು ಮುಡುಪಿನಲರನೇತ-ಕವನೆ ಮುಡಿ[illegible] ಲಿಲ್ಲವು ? ಅಲರನದಕೆ ನೆಲದೊಳೊಗೆವೆ ಮಲೆಯ ಸಿ[illegible] ಗೀಯನು" ಎಂದೂ, ಆನಂದನ "ಗೆಜ್ಜನ್ರ" ಎಂ[illegible] ಕವನದಲ್ಲಿ............ಬಿಳಿಮೊಲ್ಲೆ ದಂಡೆ ; ಉಪವನದ[illegible] ದಿಲೆಯು ; ನವನೀತಮಂಡೆ ;" ಎಂದೂ, "ಹೆಣ್ಣೊ ಬ[illegible] ಕಣಸು" ಎಂಬುದರಲ್ಲಿ "ಬಿರಿದ ಹೂವಿಗೆ ಸೋತುಹೂ[illegible] ದರು, ಕೊಯ್ಯದದನೇ ನೋಡುವಾಸೆಯು" "ಚಲು[illegible] ನನ್ನವಳೆಂದು ಬಯಸದೆ ಚಿರವು ನೋಡುವ ಬಯಕೆಯು[illegible] ಎಂದೂ, "ಒಲುಮೆವೆಣ್ಣು" ಎಂಬ ಕವಿತೆಯ[illegible] "ರೋಜದಂತೆ ಕೆನ್ನೆ, ರೋಜದೆಸಳಿನಂತೆ ತುಟಿಗಳ[illegible] ರೋಜದಂತೆ ನಗುವ ಬಾಯಿ, ಕಂಪಿನಂತೆ ಲಜ್ಜೆಯ[illegible] ಎಂದೂ, "ಕೊಳದ ತಡಿಯಲ್ಲಿ" ಎಂಬುದರಲ್ಲಿ "ಬಿಳಿ[illegible] ಗುಲಾಬಿಯಲದುರುವ ದುಂಬಿಯ ನೆನಪತರದು ಕಣ್[illegible]

ಎಂದೂ,—ಈ ರೀತಿಯಲ್ಲಿ ಪುಷ್ಪಗಳ ಬಗೆಗೆ ತಮಗಿರುವ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ.

ಅಂಬಿಕಾತನಯದತ್ತರು ತಮ್ಮ "ಸಖೀಗೀತ" ಕವನದ "ಹೂತsದ ಹುಣಸಿ" ಎಂಬ ಕವನದಲ್ಲಿ "ಹೂತsದ ಹುಣಸಿಯಾ ಚಿಗುರು ಮದರಂಗಿ ಬಣ್ಣದುಗುರು, ರುಚಿಗೆ ಹುಳಿಯೊಗರು, ನೋಡ್ಯೆ ಜೀವಕ್ಕನಿಸಿತs ಹಗರು ||...........ಅಡ್ಡಾಗತೇನಿ ನೆಳ್ಳಾಗ, ಹೀಂಗ, ಹೂವು ಚಿಗುರು ಹೆಂಗ, ಅವs ಹಾಸಿಥಾಂಗ, ಹುಳಿ ಚಿಗುರು ಸುರಿಸಿ ನಾದಂಗ ||........ಕವಿ ಜೀವದ ಬ್ಯಾಸರ ಹರಿಸಾಕ ಹಾಡಸುಡಿಸಾಕ, ಹೆಚ್ಚಿಗೇನು ಬೇಕ? ಒಂದು ಹೂತ, ಹುಣಿಸಿಮರ ಸಾಕ ||........" ಎಂದೂ ಶ್ರಾವಣದ ವೈಭವ ಎಂಬ ಕವನದಲ್ಲಿ "ಹುಲ್ಲು ಹೂವು ಆದರೇನು, ಹಬ್ಬದುಬ್ಬಿ ಸಲ್ಲಿವೆ........ರಂಗು ಇಹುದು, ರೂಪವಿಹುದು, ಗಂಧ ಒಳ್ಳೆತಿಲ್ಲವು ; ಸಯುವು, ಸುಣುವು, ಇದ್ದು ಏನು ? ವ್ಯರ್ಥವಾಯಿತೆಲ್ಲವು ! ಚದುರು ಹೂ ಲವಂಗ ಮತ್ತೆ ಇವಕೆ ಹೆಸರು ಹೇಸಿಗೆ : ಹೆಸರು ಪಡೆದ ಹೂ ಲವಂಗ ಮತ್ತೆ ಇದಕೆ ಹೆಸರು ಹೇಸಿಗೆ ; ಹೆಸರು ಪಡೆದ ಹೂವೆ ನಿನಗೆ ಇಲ್ಲ ಮಳೆಯು ಬೇಸಿಗೆ........ ಹೊಲದ ಹೂವು ನೆಲದಪಾಗೆ ನಿಂತ ಕಡೆಗೆ ನಿಲ್ಲದೆ........ ಹೂವು ಪಕಳೆ ಪ್ರಾಣ ತುಂಬಿ ಚಿಟ್ಟೆಯಾಗಿ ಕಾಂಬವೊ ! ಕುಣಿದು ದಣಿದ ಚಿಟ್ಟೆ–ಪಕ್ಕ ಹೂವು ಎನಿಸಿಕೊಂಬವೊ!" ಎಂದೂ, "ಗರಿ" ಎಂಬ ಕವನ ಸಂಕಲನದಲ್ಲಿ "ಹೂ" ಎಂಬ ಕವನವನ್ನೇ ರಚಿಸುತ್ತಾ "ಬ್ರಹ್ಮನೇ ಸಮಾಧಿಯಲಿ ಒಲವಿನಲಿ ಸಲಿವಿನಲಿ ಚಲುವಿನಾ ಕಾಣಿಕೆಗೆ "ಹೂವು ಎಂದು ಎಂದ........"ಹೂ" ಎಂಬ ಮನದುಸಿರೆ ನೆಲದ ಬಸಿರಲಿ ಮೊಳೆದು ಮಣ್ಣಿನಾವಾಸದಲಿ ಮಾಸದಲೆ ಬೆಳೆದು ;....ನನೆಯಾಗಿ ಮೊನೆಯಾಗಿ ಮುಗುಳಾಗಿ ಅರಳಾಗಿ "ಪುಃ" ಎಂದು ಬಿಟ್ಟುಸಿರೆ ತಾನೆ ಹೆಸರಾಯ್ತು........ ಹೂವೆ ಚಂದಕೆ ಅರಸ ಚೆಂದದೊಳು ಇದು ಸರಸ ಇದುವೆ ಚಂದದ ಗುಡಿಯ ಗೋಪುರಕೆ ಕಳಸ. ಇದುವೆ ಚಂದದ ಕುಸುರು ನರುಗಂಪು ಇದರುಸಿರು ಇದಕೆ "ಹೂ" ಎಂಬ ಹಗುರಾದ ಸವಿ ಹೆಸರು" ಎಂದೂ, "ನಿರಾಶೆ" ಎಂಬ ಕವಿತೆಯಲಿ "....ನೀಳನ ತುಂಬಿನ ನಿಡುದುದಿಯಲ್ಲಿ ಬಿರಿದಿತೊ ಹೂವಿನ ಎದೆಗುದಿಯಲ್ಲಿ ; ಎರಡೇ ಎಸಳು ನಾಲ್ಕೇ ಪಕಳೆ ಕಳೇವರದೊಳು ಕಂಡಿತೊಂದು ಕಳೆ........ಕಣ್ಣ ನೆಳೆದರೂ ಸೋಲಿಸಲಿಲ್ಲ ಮನವ ಸೆಳೆದರು ಸೆರೆಗೊಳ್ಳಲಿಲ್ಲ........ಸೆಟೆದ ಹೂವು ಸೆಟೆಸೆಟೆದೇ ಇತ್ತು, ಬಿರುಗಾಳಿಯು ವೈಮುರಗಟ್ಟಿತ್ತು........ ಹುಡಿಯಣ್ಣುವಿಲ್ಲ ನೀರ್ನಿಂತಿಲ್ಲ ಇದ ಹುಡುಕುವ ಅಳಿ ಬರಲೇ ಇಲ್ಲ........ ಸುತ್ತಣ ಗಾಳಿಯು ಬಿಸು ಸುಯ್ದಿತ್ತು ಅದಕೂ ಈ ಹೂ ಬಾಡದೆ ಇತ್ತು........ಮಿಟಮಿಟ ಸ್ವರ್ಗದೊಳಿತ್ತು ಸಮಾಧಿ, ಕಾಣಲಿಲ್ಲ ಈ ಹೂವಿನ ಹಾದಿ.... ಬರೆದೊಲು ಇದ್ದೊಲು ಇತ್ತು ವಿಚಿತ್ರ, ಪ್ರಕೃತಿ ಪುಟದೊಳೇ ಹೂವಿನ ಚಿತ್ರ" ಎಂದೂ ಇವೇ ಮೊದಲಾದ ತಮ್ಮ ಸುಂದರ ಕವನಗಳಲ್ಲಿ ಹೂವಿನ ತರ–ತಮ ಭಾವವನ್ನು ಮಾರ್ಮಿಕವಾಗಿ ಆದರೂ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

......O......

ಧರ್ಮ ದೀಕ್ಷೆ

ಜಿ. ಎನ್. ದಿವಾಕರಾಚಾರ್

ಮಾನವನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸ ಅಜಗಜಾಂತರ. ಪ್ರಾಣಿಗಳಿಗೆ ಕೇವಲ ಬುದ್ಧಿ ಮಾತ್ರ ಇದೆ. ಮಾನವನಿಗಾದರೋ ಇದರ ಜೊತೆಗೆ ಜ್ಞಾನ ಸಂಪತ್ತು ಮತ್ತು ವಿವೇಚನಾ ಶಕ್ತಿಗಳಿವೆ. ಇವೆರಡಕ್ಕೂ ಮನಸ್ಸೇ ಮೂಲಕಾರಣ. ಆ ಮನಸ್ಸು ಪೂರಕ, ಪ್ರೇರಕ ಮತ್ತು ಸರ್ವಸಾಧಕ. ಆದುದರಿಂದಲೇ ಹಿರಿಯರು "ಮನಸ್ಸಿದ್ದಲ್ಲಿ ಮಾರ್ಗವುಂಟು" (where there is a will, there is a way) ಎಂದು ಹೇಳಿದ್ದಾರೆ. ಈ ಮನಸ್ಸು ಸುಮನವಾಗಬೇಕಾದರೆ ಧರ್ಮದಿಂದ ಕೂಡಿರಬೇಕು. ಧರ್ಮವೇ ದೇವರು. ಮನಸ್ಸು ಧರ್ಮವೆಂಬ ದೇವರನ್ನು ಹುಡುಕುವ ಮಾರ್ಗವನ್ನು ಹಿಡಿಯಬೇಕು. ಆ ದೇವರು ಅಂತಹ ಮನಸ್ಸನ್ನೇ ನೋಡುವನು. "ಶಿವಂ ಮನಂ ನೋಪ್ಪನ್ನೆ ಹರಹರಾ ಶ್ರೀ ಚನ್ನಸೋಮೇಶ್ವರಾ" ಎಂದು ಸೋಮನಾಥ ಕವಿಯು ಹೇಳಿದ್ದಾನೆ. ಆ ಮನಸ್ಸಿನಂತೆಯೇ ಮಹಾದೇವ. ಧರ್ಮಸ್ವರೂಪನಾದ ದೇವರನ್ನು ಕಾಣಬೇಕಾದರೆ ಧರ್ಮಸಂಗ್ರಹ ಮಾಡಬೇಕು, ತನ್ಮೂಲಕ ಪರಮಾತ್ಮನನ್ನು ಕಂಡು ಅವನ ಕೃಪಾಪ್ರಸಾದಕ್ಕೆ ಪಾತ್ರರಾಗಬೇಕು. ಜನರು ನುಡಿದಂತೆ ನಡೆದು ಸನ್ಮಾರ್ಗಪ್ರವರ್ತಕರಾಗಬೇಕು. "ಮಾನವನು ಮಾನವನಾಗಿಯೇ ಬಾಳುವುದನ್ನು ಕಲಿಯಬೇಕು" ಎಂಬುದೇ ಶ್ರೀ ಸಿದ್ಧಗಂಗಾ ಕ್ಷೇತ್ರದ ಸಿದ್ಧಗಂಗಾ ಪತ್ರಿಕೆಯ ಜ್ಞಾನದಾಸೋಹದ ಏಕೈಕ ಪರಮೋದ್ದೇಶವಾಗಿದೆ. ಈ ಧರ್ಮಸಂಗ್ರಹ ಮತ್ತು ಧರ್ಮಸಂಸ್ಥಾಪನೆಯ ಉದ್ದೇಶವನ್ನು ಈ ತ್ರೈಮಾಸಿಕ ಪತ್ರಿಕೆಯ ಮುಖಚಿತ್ರವೇ ನಿರೂಪಿಸುವ ಒಂದು ಅರ್ಥಗರ್ಭಿತ "ಸಂಕೇತ"ವಾಗಿದೆ. [Face is the index of mind.] ಈ ಸಾಂಕೇತಿಕ ಭಾವಪೂರ್ಣ ಮುಖವೇ ಧಾರ್ಮಿಕ ಅಂತರಂಗದ ಪರಿಶಿಷ್ಟ. ಈ ಧಾರ್ಮಿಕ ಮತ್ತು ಚಾರಿತ್ರಿಕ ಹಿನ್ನೆಲೆಯುಳ್ಳ ಸಂಕೇತದ ವೈಶಿಷ್ಟ್ಯವು ವೈವಿಧ್ಯವಾಗಿದ್ದರೂ, ಸೂತ್ರ ಮಾತ್ರ ಒಂದೇ. ಅದೇ ಅಮರವಾದ ಪವಿತ್ರ "ಧರ್ಮ" ಸೂತ್ರ. ಈ ಧರ್ಮ ಸೂತ್ರವೆಂಬ ಏಕೈಕ ಲತೆಯಲ್ಲಿ ಶೋಭಿಸುತ್ತಿರುವ ಆಧ್ಯಾತ್ಮ ಮಧುವನ್ನು ತುಂಬಿಕೊಂಡಿರುವ ಪುಷ್ಪಗಳೇ ಇಲ್ಲಿ ಕಾಣುತ್ತಿರುವ ವೈದಿಕ ಮಹಾಪುರುಷರ ಭಾವಚಿತ್ರಗಳು. ಈ ಮಹಾತ್ಮರ ವಿಷಯವನ್ನು ಇದೀಗ ತಿಳಿಯೋಣ.

ಪುಷ್ಪ ೧. ಇದು ಋಷಿ ಪರಂಪರೆ. ಮಾನವನಲ್ಲಿ ಆಧ್ಯಾತ್ಮಿಕ ಪ್ರವೃತ್ತಿ ಬೆಳೆದು ಬಂದು ನಮ್ಮ ಸ್ವಾರ್ಥ ಹೃದಯದ ಕಲ್ಮಷವನ್ನು ಹೋಗಲಾಡಿಸಿ, ಇಹಪರ ಸೌಖ್ಯಗಳನ್ನು ಕರುಣಿಸಿ ಪರಿಪೂರ್ಣತೆಯೆಡೆಗೆ ಕರೆದೊಯ್ದ ಋಷಿಪರಂಪರೆ (ಸಿದ್ಧಗಂಗಾ ಪುಟ 4 ಸಂಚಿಕೆ 4-1967) ಯನ್ನು ಸೂಚಿಸುವ ಸಂಕೇತವಾಗಿದೆ ಇದು. ವಸಿಷ್ಟ, ವಿಶ್ವಾಮಿತ್ರ, ವಾಲ್ಮೀಕಿ, ಶುಕ, ವೇದವ್ಯಾಸರು ಇವರೇ ಮೊದಲಾದ ಮಹರ್ಷಿಗಳು ತಮ್ಮ ಶಿಷ್ಯರಿಗೆ ತಮ್ಮ ಆಶ್ರಮಗಳಲ್ಲಿ ವೇದೋಪನಿಷತ್ತುಗಳ ಸಾರಾಮೃತಧಾರೆಯನ್ನೆರೆದು, ದೇವರನ್ನು ಒಲಿಸುವ ವಿಧಾನವನ್ನು ಮತ್ತು ಧರ್ಮದ ಮಹತ್ವವನ್ನು ಉಪದೇಶ ಮಾಡಿದ್ದಾರೆ. ಇಂದಿನ ಧರ್ಮಬೋಧೆಗೂ, ಕಾವ್ಯಕವಿತೆಗಳಿಗೂ ಇವರೇ ಮೂಲಪುರುಷರಾದುದರಿಂದ "ಮಾನವನು ಋಷಿ ಪರಂಪರೆಗೆ ಚಿರಋಣಿಯಾಗಿದ್ದಾನೆ." ಇದೇ ಈ ಸಂಕೇತದ ಭಾವ.

ಪುಷ್ಪ ೨. ಬುದ್ಧದೇವ. ದುಷ್ಟಶಿಕ್ಷಕ ಶಿಷ್ಟರಕ್ಷಕನಾದ ಮಹಾವಿಷ್ಣುವಿನ ಅವತಾರವೇ ಬೌದ್ಧಾವತಾರ. ಧರ್ಮಸಂಸ್ಥಾಪನಾ ಕಾರ್ಯಾರ್ಥವಾಗಿ ರಾಜಪುತ್ರನಾಗಿ ಜನಿಸಿದನು. "ಮನುಷ್ಯನ ಜೀವನ ದುಃಖದಿಂದ ತುಂಬಿದೆ" ಎಂಬುವನ್ನು ಕಣ್ಣಾರೆ ಕಂಡಮೇಲೆ ಈ ದುಃಖಕ್ಕೆ ಕಾರಣವನ್ನು ಕಂಡುಹಿಡಿಯಲು ನಿಜವಾದ ಧರ್ಮವಾವುದೆಂಬ ಧರ್ಮ ಸಂಶೋಧನೆಗಾಗಿ ರಾಜಪುತ್ರನಾಗಿದ್ದರೂ ಅರಮನೆಯ ಭೋಗಭಾಗ್ಯಗಳನ್ನು ತ್ಯಜಿಸಿ. ತಪಸ್ಸಿಗೆ ತೆರಳಿದನು. ತ್ಯಾಗವೀರ ಬುದ್ಧ, ಜ್ಞಾನೋದಯವಾದ ಮೇಲೆ ಈ ರೀತಿ ಧರ್ಮಬೋಧೆ ಮಾಡಿದನು : "ಆಶೆಯೇ ದುಃಖಕ್ಕೆ ಕಾರಣ ಆದ್ದರಿಂದ ಆಶೆಯನ್ನು ಬಿಡಬೇಕು. ಪ್ರಾಣಿಹಿಂಸೆ ಮಾಡಬಾರದು. ಮನುಷ್ಯರೆಲ್ಲರೂ ಸಮಾನರು. ಒಳ್ಳೆಯ ಕೆಲಸ ಮಾಡಬೇಕು. ಬೈದವರನ್ನು ಬೈಯ್ಯಬಾರದು. ಕೋಪ ಬೇಡ. ಸಹನೆ ಇರಲಿ. ಜಗಳಗಂಟಿಗಳ ಸ್ನೇಹ ಬೇಡ" ಇದು ತನ್ನ ಹನ್ನೆರಡು ವರ್ಷಗಳ ತಪಸ್ಸಿದ್ಧಿಯಿಂದುಂಟಾದ ದಿವ್ಯ ಜ್ಞಾನೋದಯದ ಪ್ರತಿಫಲ. ಆಸೆಯನ್ನು ಬಿಡಬೇಕೆಂದು ನಾವು ಅಷ್ಟೈಶ್ವರ್ಯ ಮತ್ತು ಅಷ್ಟಭೋಗ ಯುಕ್ತವಾದ ಸಂಸಾರವನ್ನೂ ಇಷ್ಟಾರ್ಥಗಳನ್ನೂ ಪೂರ್ಣವಾಗಿ ತ್ಯಜಿಸಬೇಕೆಂದಲ್ಲ ; ಅಷ್ಟೈಶ್ವರ್ಯದ ಸ್ವಲ್ಪ ಭಾಗದಿಂದ ಸತ್ಪಾತ್ರದಾನ ಧರ್ಮಾದಿಗಳನ್ನು ಮಾಡಿ ಪುಣ್ಯಸಂಪಾದನೆ ಮಾಡಬೇಕು. ಅಷ್ಟಭೋಗಗಳನ್ನು ಸಂಪೂರ್ಣ ಹೀರದೆ ಸ್ವಲ್ಪಭಾಗದಿಂದ ಇಂದ್ರಿಯ ನಿಗ್ರಹ ಮಾಡಬೇಕೆಂದೂ, ಇವುಗಳ ಮೋಹದಲ್ಲಿ ಅತಿಯಾಗಿರದೆ ಮಿತವಾಗಿರಬೇಕೆಂದೂ ಆಶೆಗೆ ಅಂಟಿಯೂ ಅಂಟದಂತೆ ಜೀವನಯಾತ್ರೆಯನ್ನು ಸಾಗಿಸಿ ಮುಕ್ತಿ ಸಂಪಾದನೆ ಮಾಡಬೇಕೆಂದೂ ಭಾವ. – "ಪ್ರಾಣಿ ಹಿಂಸೆ ಮಾಡಬಾರದು" ಎಂದು ಹೇಳಿದ್ದಾರೆ. ಪ್ರಾಣವನ್ನು ಧರಿಸಿರುವ ಯಾವ ದೇಹಕ್ಕೂ ಯಾವ ಮನಸ್ಸಿಗೂ ಹಿಂಸೆಮಾಡಬಾರದು. ಏಕೆಂದರೆ ವಿಶ್ವಪ್ರೇಮಿಯಾದ ಪರಮಾತ್ಮನು ಎಲ್ಲ ಪ್ರಾಣಿಗಳಲ್ಲಿಯೂ ಇದ್ದಾನೆ. ಆದ್ದರಿಂದ ಅವನನ್ನು ಹಿಂಸೆ ಮಾಡಿದಂತಾಗುತ್ತದೆ. ದುಷ್ಟಶಿಕ್ಷಣಕ್ಕಾಗಿ ಪವಿತ್ರವಾದ ಮನಸ್ಸುಳ್ಳ ಮಾನವನಿಗೆ ಉಪದ್ರವವನ್ನುಂಟುಮಾಡುವ ಕ್ರೂರ (ದುಷ್ಟ) ಪ್ರಾಣಿಗಳನ್ನು ಕೊಲ್ಲುವುದು ಪಾಪವಲ್ಲವೆಂದೂ ಹಿಂಸೆಯಲ್ಲವೆಂದೂ ಭಾವ. ಅಮೂಲ್ಯವಾದ ಮನಸ್ಸಿಗೆ ನೋವನ್ನುಂಟುಮಾಡುವುದು ಮಹಾಹಿಂಸೆ ಮಾಡಿದಂತಾಗುತ್ತದೆ. ಇವಕ್ಕಿಂತಲೂ ಅಧಿಕವಾದ ಹಿಂಸೆ ಮತ್ತೊಂದಿಲ್ಲ. ಮಿಗಿಲಾದ ಪಾಪವೂ ಮತ್ತೊಂದಿಲ್ಲ. ಆದ್ದರಿಂದ ಪಾಪಪ್ರಾಪ್ತವಾದ ಮನೋಹಿಂಸೆಯನ್ನು ಮಾಡಬಾರದೆಂದು ಭಾವ. "ಪ್ರಾಣಿ ಹಿಂಸೆ ಮಾಡುವುದು ಮಹಾಪಾಪ. ಮನುಷ್ಯರಲ್ಲಿ ಮೇಲು ಕೀಳು ಎಂಬ ಭಾವನೆ ಇರಬಾರದು, ಒಳ್ಳೆಯ ಗುಣ ನಡತೆಗಳಿಂದ ಮೋಕ್ಷ ದೊರಕುವುದು." ಎಂದು ಬೋಧಿಸಿದ (ವರ್ಧಮಾನ) ಮಹಾವೀರನೂ ಇವರ ಶ್ರೇಣಿಗೆ ಸೇರಿದ ಜೈನಮತ ಧರ್ಮಪ್ರಚಾರಕ.

ಪುಷ್ಪ ೩. ಶ್ರೀ ಶಂಕರಾಚಾರ್ಯರು. ಇವರು ಮತಬೋಧಕರು ಮತ್ತು ಧರ್ಮಸಂಸ್ಥಾಪನಾಚಾರ್ಯರು. ಮಾನವ ಕುಲಕೋಟಿಯ ಕಲ್ಯಾಣಕ್ಕಾಗಿ ಶ್ರಮಿಸಿದ ಮಹಾತ್ಮರು. "ದೇವರು ಒಬ್ಬನೇ, ಜ್ಞಾನವಿಲ್ಲದವರಿಗೆ ಮೋಕ್ಷವಿಲ್ಲ" ಎಂದು ಬೋಧಿಸಿ ಧರ್ಮರಕ್ಷಣೆಗಾಗಿ ಮಠಗಳನ್ನು ಸ್ಥಾಪಿಸಿದರು. ಭಕ್ತಿಯೇ ಸರ್ವಸಾಧಕವೆಂದು ಭಾವ. "ಭಕ್ತಿಯೇ ಮೋಕ್ಷಕ್ಕೆ ಸಾಧನ" ಎಂಬ ಧರ್ಮಬೋಧೆ ಮಾಡಿದ ವೈಷ್ಣವ ಮತಪ್ರಚಾರಕರಾದ ಶ್ರೀ ರಾಮಾನುಜಾಚಾರ್ಯರೂ, ಮಧ್ವಾಚಾರ್ಯರೂ ಇವರ ಶ್ರೇಣಿಗೆ ಸೇರಿದ ವೈದಿಕ ಮಹಾಪುರುಷರು.

ಪುಷ್ಪ ೪. ಜಗಜ್ಯೋತಿ ಬಸವೇಶ್ವರರು. ನಂದೀಶನ ಅವತಾರವಾದ ಇವರು ಅನ್ವರ್ಥನಾಮಕ್ಕೆ ತಕ್ಕಂತೆ ಜಗತ್ತಿಗೇ ಜ್ಯೋತಿ ಎನಿಸಿದ್ದಾರೆ. ತಮ್ಮ ಆಧ್ಯಾತ್ಮಿಕ ಶಕ್ತಿ ಎಂಬ ಜ್ಯೋತಿಯಿಂದ ಜನಸಮುದಾಯವನ್ನು ಬೆಳಗಿ ಶ್ರೇಷ್ಠ ಸಮಾಜ ಸುಧಾರಕರೆನಿಸಿದ್ದಾರೆ. ಇವರು ಬಿಜ್ಜಳ ಮಹಾರಾಜನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿದ್ದರೂ ಶಿವನ ಪರಮಭಕ್ತರಾಗಿದ್ದುಕೊಂಡು ಪಾರಮಾರ್ಥವನ್ನು ಪರಿಶುದ್ಧತೆಯಿಂದ ಕಾಯೇನ, ವಾಚಾ, ಮನಸಾ ಸಾಧಿಸಿ ಸಾರವನ್ನು ವಚನರೂಪದಲ್ಲಿ ಹೇಳಿದ್ದಾರೆ. ಇವರ ವಚನಗಳು "ಬಸವಣ್ಣನವರ ವಚನ"ಗಳೆಂದು ಜಗತ್ಪ್ರಸಿದ್ಧವಾಗಿವೆ. ಜನರ ನೂರಾರು ನಡೆನುಡಿಗಳನ್ನೂ ಜಾತಿಮತಗಳನ್ನೂ ಒಂದಾಗಿಸಲು ಶ್ರಮಿಸಿ ಅವರು ಮುಕ್ತಿಮಾರ್ಗದರ್ಶಕರಾಗಿದ್ದಾರೆ. (ಸಿದ್ಧಗಂಗಾ ಪು. 9 ಸಂ. 4 ವರ್ಷ 67). "ದಯವೇ ಧರ್ಮದ ಮೂಲವಯ್ಯ" ಎಂದು ಹೇಳಿದ್ದಾರೆ. ಆದ್ದರಿಂದ ಭೂತ ದಯಾ ಪರರಾಗಿರಬೇಕೆಂದು ಭಾವ.

"ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮ ದೇವರ ನೊಲಿಸುವ ಪರಿ." ಎಂದು ಸಂದೇಶ ನೀಡಿದ್ದಾರೆ. ಹೀಗೆ ನುಡಿದಂತೆಯೇ ನಡೆದು ಧರ್ಮೋದ್ಧಾರ ಮಾಡಿದ್ದಾರೆ. "ಮಾನವರೆಲ್ಲರೂ ಸಮಾನರು. ಕಾಯಕವೇ ಕೈಲಾಸ (Work is workship). ಮಾನವ ವೃತ್ತಿಯನ್ನು ಕೀಳೆಂದು ಭಾವಿಸಬಾರದು. ಸ್ತ್ರೀಯರಿಗೂ ಸಮಾಜದಲ್ಲಿ ಸಮಾನಗೌರವ ಮತ್ತು ಅಧಿಕಾರಗಳಿವೆ. ಜನ್ಮಮಾತ್ರದಿಂದಲೇ ಯಾರೂ ಮೇಲುಕೀಳಾಗಲಾರರು. ಒಳ್ಳೆಯ ನಡತೆಯಿಂದಲೇ ಮಾನವನಿಗೆ ಗೌರವ. ಆಚಾರವೇ ಸ್ವರ್ಗ; ಅನಾಚಾರವೇ ನರಕ" ಎಂದು ಸಂದೇಶ ನೀಡಿದ್ದಾರೆ. ಇವರು ಧರ್ಮ ಪ್ರಚಾರಾರ್ಥವಾಗಿ ಕಲ್ಯಾಣದಲ್ಲಿ "ಅನುಭವ ಮಂಟಪ"ವೆಂಬ ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಶಿವಶರಣರಾದ ಬಸವೇಶ್ವರರು ಕೂಡಲಸಂಗಮ ದೇವರಲ್ಲಿ ಐಕ್ಯರಾದರು. ಜನತೆಯು ಧರ್ಮವನ್ನರಿತು ಅದರಂತೆ ನುಡಿದು, ನಡೆದು ಸನ್ಮಾರ್ಗ ಪ್ರವರ್ತಕರಾಗಿ ಪರಮಾತ್ಮನಲ್ಲಿ ಭಕ್ತಿ ಮತ್ತು ನಂಬಿಕೆಯನ್ನಿಟ್ಟು ಮೋಕ್ಷ ಸಂಪಾದನೆಯನ್ನು ಮಾಡಬೇಕೆಂಬುದೇ ಈ ಸಂಕೇತದ ಭಾವ.

ಪುಷ್ಪ ೫. ಮೋಹನದಾಸ ಕರಮಚಂದ ಗಾಂಧಿ. ಇವರು ಮಹಾತ್ಮರು, ಪೂಜ್ಯರು ಹಾಗೂ ರಾಷ್ಟ್ರಪಿತರು ಎಂದು ಕರೆಯಲ್ಪಟ್ಟರು. ಇವೆಲ್ಲ ಕೀರ್ತಿ ಗೌರವಗಳಿಗೆ ಆಧಾರವಾಗಿ ಗೀತಾರಾಧಕರಾದ ಇವರು "ಭಗವದ್ಗೀತೆ"ಯ ಪಠನ ಶ್ರವಣ ಮನನ ನಿಧಿಧ್ಯಾಸ ಮತ್ತು ಅನುಷ್ಠಾನಗಳಿಂದ ಪ್ರಬಲವಾದ ಆಧ್ಯಾತ್ಮಿಕ ಶಕ್ತಿಯನ್ನು ಗಳಿಸಿದರು. ಸರ್ವವನ್ನೂ ಸುಟ್ಟು ಭಸ್ಮಮಾಡಬಲ್ಲ ಈ ಅದ್ಭುತ ಶಕ್ತಿಯಿಂದಾದ ಅಹಿಂಸಾಧರ್ಮ ಮತ್ತು ಸತ್ಯಾಗ್ರಹಗಳಿಂದಲೇ ಮದ್ದು ಗುಂಡುಗಳ ರಾಕ್ಷಸಶಕ್ತಿ ಪ್ರಭಾವಿತರಾದ ಭಾರತದಲ್ಲಿ ಬೇರೂರಿದ್ದ ಆಂಗ್ಲೇಯರನ್ನು ಹೊರದೂಡಿ ಭಾರತಮಾತೆಗೆ ಸ್ವಾತಂತ್ರ್ಯ ಶಾಂತಿ ಸಮರದಲ್ಲಿ ಜಯಮಾಲೆ ಹಾಕಿದರು. ಸತ್ಯ, ಶಾಂತಿ, ತ್ಯಾಗ, ಧರ್ಮ ಮತ್ತು ಅಹಿಂಸೆಗಳೆಂಬ ವಜ್ರಾಯುಧಗಳ ಶಕ್ತಿ ಎಷ್ಟು ಮಹತ್ವವುಳ್ಳದ್ದು ಎಷ್ಟು ಶ್ಲಾಘನೀಯವಾದುದು ಎಂಬುದನ್ನು ಜಗತ್ತಿಗೆ ತೋರಿಸಿದರು. ಇವರು ಗಳಿಸಿಕೊಟ್ಟ ಸ್ವಾತಂತ್ರ್ಯವು 'ಧರ್ಮಸ್ಯೈ ಜಯ'ವೆಂಬ ಸಾಕ್ಷಾತ್ಕಾರವಾಯಿತು. ಸತ್ಯ ಧರ್ಮಗಳ ನಿಲುವಿನಿಂದ ರಾಜ್ಯವನ್ನೂ ಸಂಪಾದಿಸಬಹುದೆಂಬುದೇ ಇಲ್ಲಿನ ಭಾವ. ಸತ್ಯಹರಿಶ್ಚಂದ್ರನು ಸತ್ಯದಿಂದಲೇ ಪುನಃ ರಾಜ್ಯವನ್ನು ಪಡೆಯಲಿಲ್ಲವೇ? ಧರ್ಮರಾಯನು ಧರ್ಮದಿಂದಲೇ ಪುನಃ ರಾಜ್ಯವನ್ನು ಪಡೆಯಲಿಲ್ಲವೇ? ಆದರೆ "ತಾಳಿದವನು ಬಾಳಿಯಾನು" ಎಂಬ ಆರ್ಯವಾಕ್ಯದಂತೆ ಸಹನೆ, ಶಾಂತಿ ಮತ್ತು ತಾಳ್ಮೆ ಇರಬೇಕೆಂಬುದೇ ಇಲ್ಲಿಯ ಭಾವ. ವಿಶ್ವಪ್ರೇಮವೂ ಒಂದು ಧರ್ಮ. "ಅಸಾಧ್ಯವೆಂಬುದೆಲ್ಲವೂ ಇಂತಹ ಧರ್ಮದಿಂದಲೇ ಸಾಧ್ಯವಾಗುತ್ತದೆ" ಎಂಬುದನ್ನು ಕಾರ್ಯತಃ ಜಗತ್ತಿಗೇ ತೋರಿಸಿದ ಪೂಜ್ಯ ನೆಹರೂರವರೂ, ನ್ಯಾಯವೂ ಒಂದು ಧರ್ಮ. ಆದುದರಿಂದ ನ್ಯಾಯದ ನಿಲುವಿಗಾಗಿ ಪ್ರಾಣತೆತ್ತರೂ ವೀರಸ್ವರ್ಗ ಲಭಿಸುತ್ತದೆ. ಮೋಕ್ಷ ದೊರೆಯುತ್ತದೆ ಎಂಬುದನ್ನು ಕಾರ್ಯತಃ ನಿರೂಪಿಸಿದ ಶ್ರೀ ಲಾಲ್‌ಬಹಾದುರ್‌ಶಾಸ್ತ್ರಿಯವರೂ ಇವರ ಶ್ರೇಣಿಗೇ ಸೇರಿದವರು.

ಪುಷ್ಪ ೬. ಸ್ವಾಮಿ ವಿವೇಕಾನಂದರು. ಅನ್ವರ್ಥನಾಮಕ್ಕೆ ತಕ್ಕಂತೆ ಇವರು ವಿವೇಕದಿಂದಲೇ ಆನಂದವನ್ನು ಪಡೆದ-ಸ್ವಾಮೀಜಿ. ಧರ್ಮಸಾಧನೆಯತ್ತ ಸಾಗುವಾಗ ಮನುಷ್ಯ ಮಾತ್ರದವನು ಅನೇಕ ತೊಂದರೆ, ಕಷ್ಟಕಾರ್ಪಣ್ಯಗಳಿಗೆ ಈಡಾಗುತ್ತಾನೆ. ಆದ್ದರಿಂದ ಈ ಸಾಧನೆಯಲ್ಲಿ ಅನೇಕ ತಪ್ಪುಗಳನ್ನು ಮಾಡುತ್ತಾನೆ. ಆದರೆ ಅದು ತಪ್ಪೆಂದು ಭಾವಿಸಿ ಗುರಿಸಾಧನೆಯಲ್ಲಿ ನಿರುತ್ಸಾಹಿಯಾಗಬಾರದು." ನಡೆವವನು ಎಡವದೆ ಕುಳಿತವನು ಎಡವುವನೆ ?" ಎಂದು ಆರ್ಯವಾಕ್ಯವಿದೆ. ಆದುದರಿಂದಲೇ ಸ್ವಾಮೀಜಿಯವರು ಈ ರೀತಿ ಹೇಳಿದ್ದಾರೆ. "No man is perfect in this world, Every human being is an err !" ಸತ್ಸಂಗ, ಸತ್ಕರ್ಮ ಮತ್ತು ಸದಭ್ಯಾಸಗಳಿಂದ ಪರಿಪೂರ್ಣತೆಯನ್ನೂ ಗುರಿಮುಟ್ಟುವುದನ್ನೂ ಸಾಧಿಸಬಹುದೆಂದು ಇಲ್ಲಿಯ ಭಾವ. "ಎಲ್ಲಾ ಧರ್ಮಗಳ ಗುರಿ ಒಂದೇ. ಎಲ್ಲರೂ ತಮ್ಮ ತಮ್ಮ ಧರ್ಮಗಳ ಮೂಲಕ ದೇವರನ್ನು ಕಾಣಲು ಸಾಧ್ಯ" ಎಂದು ಬೋಧಿಸಿದ ಶ್ರೀ ರಾಮಕೃಷ್ಣ

ಪರಮಹಂಸರ ಪಟ್ಟಶಿಷ್ಯರಾವ ಸ್ವಾಮಿ ವಿವೇಕಾನಂದರೂ ಸಹ ಅಂತೆಯೇ ಬೋಧಿಸಿ ಧರ್ಮಪ್ರಸಾರ ಮಾಡಿದ್ದಾರೆ.

ಒಂದೊಂದು ಮತದ ಧರ್ಮದ ಬೋಧೆಯು ವಿವಿಧ ವಾಗಿದ್ದರೂ ಆ ಎಲ್ಲಾ ಧರ್ಮಗಳ ಗುರಿ ಮಾತ್ರ ಒಂದೇ ಆಗಿದೆ. ಅದೇ ದೇವರನ್ನು ಕಾಣುವ ಗುರಿ. ಧರ್ಮ ಸಂಗ್ರಹಕ್ಕಾಗಿ ಕ್ರೈಸ್ತಮತ ಬೋಧಕನಾದ ಏಸುಕ್ರಿಸ್ತನು ಈ ರೀತಿ ಬೋಧಿಸಿದ್ದಾನೆ: "ದೇವರಲ್ಲಿ ಭಕ್ತಿಯನ್ನಿಡ ಬೇಕು. ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳಬೇಕು. ಮೇಲುಕೀಳುಗಳೆಂಬ ಭೇದ ಮಾಡಬಾರದು. ದೇವರು ಎಲ್ಲರ ಹೃದಯದಲ್ಲೂ ಇದ್ದಾನೆ. ಯಾರನ್ನೂ ದ್ವೇಷಿಸ ಬಾರದು." ಇಸ್ಲಾಂ ಮತ–ಧರ್ಮಸಂಸ್ಥಾಪಕನಾದ ಮಹಮದ್ ಪೈಗಂಬರ್ ಈ ರೀತಿ ಧರ್ಮಬೋಧೆ ಮಾಡಿ ದ್ದಾನೆ: "ದೇವರಿಗೆ ನಿರ್ದಿಷ್ಟವಾದ ಒಂದು ರೂಪಿಲ್ಲ; ಆದ್ದರಿಂದ ಮೂರ್ತಿಪೂಜೆ ಮಾಡಬಾರದು. ಮನುಷ್ಯ ರೆಲ್ಲರೂ ಸಮಾನರು. ದೇವರು ಒಬ್ಬನೇ. ತಂದೆತಾಯಿಗಳ ಸೇವೆ ಮಾಡಬೇಕು." ಸಿಖ್ ಧರ್ಮಬೋಧಕರಾದ ದೀಕ್ಷಿತರಾದ ಗುರುನಾನಕ್ ಈ ರೀತಿ ಧರ್ಮಬೋಧೆ ಮಾಡಿದ್ದಾನೆ: "ದೇವರು ಒಬ್ಬನೇ. ಮಾನವಜಾತಿ ಒಂದೇ. ಮೂರ್ತಿಪೂಜೆ ಮಾಡಬಾರದು. ದೇವರು ಎಲ್ಲ ಧರ್ಮವನ್ನೂ ಎಲ್ಲ ಧಾರ್ಮಿಕರನ್ನೂ ಒಂದೇ ರೀತಿ ಯಿಂದ ಕಾಣುತ್ತಾನೆ. ಶುದ್ಧ ಮನಸ್ಸಿನಿಂದ ದೇವರನ್ನು ಭಜಿಸಬೇಕು. ಇದೇ ನಿಜವಾದ ಮಾನವ ಧರ್ಮ." ರಾಜನೂ ಧರ್ಮಬೋಧಕನೂ ಆದ ಅಶೋಕನು ಈ ರೀತಿ ಬೋಧಿಸಿ ಶಿಲಾಶಾಸನಗಳನ್ನು ಕೆತ್ತಿಸಿದ್ದಾನೆ: "ಗುರುಹಿರಿಯರಲ್ಲಿ ಭಕ್ತಿಯನ್ನಿಡಿ. ನ್ಯಾಯದಿಂದ ನಡೆ ಯಿರಿ. ಎಲ್ಲ ಧರ್ಮಗಳನ್ನೂ ಸಹನೆಯಿಂದ ನೋಡಿ." ಅಂಬಾಭವಾನಿಯ ಪರಮಭಕ್ತನಾದ ಶಿವಾಜಿಯು ಇಂತಹ ಎಲ್ಲಾ ಧರ್ಮಗಳನ್ನೂ ಹಿಂದೂಧರ್ಮವೆಂದು ತಿಳಿದು ಹಿಂದೂ ಧರ್ಮವನ್ನು ರಕ್ಷಿಸಿದ್ದಾನೆ. ಸ್ತ್ರೀಯರ ಪಾತಿವ್ರತ್ಯ ಧರ್ಮಕ್ಕೆ ಚ್ಯುತಿಬಾರದಂತೆ ನೋಡಿಕೊಂಡು ಅವರನ್ನು ಗೌರವಿಸಿದ್ದಾನೆ.

ಇಂತಹ ಧರ್ಮ ಪರಂಪರೆಗೆ ಸೇರಿದ ಮಹಾತ್ಮರ, ಪೂಜ್ಯರ ಸ್ಮರಣೆಯನ್ನು ಮಾಡಿ ಅವರ ಬೋಧನೆಯನ್ನು ಜ್ಞಾಪಕಕ್ಕೆ ತಂದುಕೊಂಡು ಅದರಂತೆ ನಡೆಯನ್ನು ಕಲಿ ಯಲಿ ಎಂಬುದೇ ಇಲ್ಲಿಯ ಭಾವಚಿತ್ರಗಳ ಸಾಂಕೇತಿಕ ಅಂತರ್ಗತ ಭಾವ.

ಗುರುಕುಲಾಶ್ರಮವೂ, ಬೃಹದ್ ವಿದ್ಯಾಸಂಸ್ಥೆಗಳ ನ್ನೊಳಗೊಂಡ ಜ್ಞಾನಪೀಠವೂ, ಪುಣ್ಯಕ್ಷೇತ್ರವೂ ಆದ ಶ್ರೀ ಸಿದ್ಧಗಂಗಾ ಕ್ಷೇತ್ರದ ನಿತ್ಯಜ್ಞಾನಾನ್ನದಾಸೋಹಿಗ ಳಾದ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ಮೇಲೆ ಹೇಳಿದ ಪುಷ್ಪಗಳ ಶ್ರೇಣಿಗೆ ಸೇರಿದ ಒಂದು ಅಪೂರ್ವ ಪುಷ್ಪವೆಂದರೆ ತಪ್ಪಾಗಲಾರದು. ಇಂತಹ ಮಹಾತ್ಮರು ಮತ್ತು ಪೂಜ್ಯರು ಗೃಹಸ್ಥಾಶ್ರಮ, ಸನ್ಯಾಸಾಶ್ರಮ, ಬ್ರಹ್ಮಚರ್ಯಾಶ್ರಮ ಇವೇ ಮೊದಲಾದ ಎಲ್ಲಾ ಆಶ್ರಮ ಗಳಲ್ಲೂ ಬೂದಿಮುಚ್ಚಿದ ಕೆಂಡದಂತೆ ಇದ್ದಾರೆ. ಹಿಂದೆಯೂ ಇದ್ದರು. ದೈವಾಂಶ ಸಂಭೂತರಾದ ಇಂತಹ ವರ ಕಷ್ಟಾರ್ಜಿತ ದಿವ್ಯಶಕ್ತಿಯಿಂದಲೇ ಈಗಲೂ ಧರ್ಮ ಸ್ತಂಭವು ನಿಂತು ಜಗತ್ತೆಂಬ ಭವ್ಯಭವನವನ್ನು ರಕ್ಷಿಸುತ್ತಿ ರುವುದು. ಈ ಎಲ್ಲ ಮಹಾತ್ಮರಿಗೆ ಜಾತಿಪಂಥಗಳ, ಮೇಲುಕೀಳುಗಳ, ಹಿರಿದುಕಿರಿದುಗಳ ಅಂತರವಿಲ್ಲ. ಈ ವಿಧವಾದ ಎಲ್ಲ ಪುಷ್ಪಗಳೂ ಧರ್ಮವೆಂಬ ಒಂದೇ ಬಳ್ಳಿ ಯಲ್ಲಿ ಬಿಟ್ಟ ಹೂಗಳೆಂಬುದೇ ಇಲ್ಲಿರುವ ಐಕ್ಯಕ ಲತೆಯ ಭಾವ.

ಭಾಗ—೨

ಈ ಎಲ್ಲ ಮಹಾತ್ಮರ ಕೀರ್ತಿ ಆ ಚಂದ್ರಾರ್ಕ ಪರ್ಯಂತವೂ ಉಳಿದಿರುವುದಕ್ಕೆ ಅವರು ಪರಿಪಾಲಿಸಿಕೊಂಡು ಬಂದ ಧರ್ಮವೇ ಆಧಾರ. ಧರ್ಮವು ಈರೇಳು ಲೋಕ ಗಳನ್ನು ಬೆಳಗುವ ಕೋಟಿ ಸೂರ್ಯ ಪ್ರಕಾಶಮಾನ ವಾದ ಸರ್ವಚೇತನ ಕಾರಣವಾದ ಪವಿತ್ರ ಜ್ಯೋತಿ ಎಂಬುದನ್ನು ಇಲ್ಲಿರುವ ಜ್ಯೋತಿ ಸಂಕೇತವು ನಿರೂಪಿಸು ತ್ತದೆ. ಚೈತನ್ಯವೆಂಬುದು ಪರಮವಾದ ಆತ್ಮಸ್ವರೂಪವು. ಆದ್ದರಿಂದ ಚೈತನ್ಯವೇ "ಪರಮಾತ್ಮ." ಈ ಪರಮಾತ್ಮನು, ದೇವರು, ಭಗವಂತ, ಕರ್ತ ಇವೇ ಮೊದಲಾದ ಹೆಸರು ಗಳಿಂದ ಕರೆಯಲ್ಪಡುತ್ತಿದ್ದಾನೆ. ಇವನು ಚಿರಂಜೀವಿ ಯಾಗಿದ್ದಾನೆ, ನಿರಾಕಾರನಾಗಿದ್ದು ಸರ್ವವ್ಯಾಪಕನಾಗಿ ದ್ದಾನೆ. ಅಗೋಚರನಾಗಿದ್ದು ಜೀವಿಗಳಿಂದ ಕರ್ಮಗ ಳನ್ನು ಮಾಡಿಸುತ್ತಿದ್ದಾನೆ. ಈ ಪರಮಾತ್ಮನ ಭಿನ್ನಾಂಶ

ಗಳೇ ಆತ್ಮಗಳು. ಈ ಆತ್ಮಗಳು ಅಂಡಜ, ಪಿಂಡಜ, ಜಲಜ ಮತ್ತು ಉದ್ಭಿಜಗಳಿಂದಾದ ಜೀವಕೋಟಿಯ ದೇಹ ದೇವಾಲಯದಲ್ಲಿ ಹೃದಯದಲ್ಲಿ "ಆತ್ಮಲಿಂಗ"ನಾಗಿ ನಿಂತು ಜೀವಿಗಳ ಸಕಲ ಕರ್ಮಗಳನ್ನೂ ನಡೆಸುತ್ತಿರುವನು ಎಂಬುದೇ ಇಲ್ಲಿ ಧರ್ಮಜ್ಯೋತಿಯ ಸುತ್ತಲೂ ತಿರುಗುತ್ತಿರುವ ಬಹು ದಳಗಳುಳ್ಳ ಧರ್ಮಚಕ್ರದ ನಿರೂಪಣೆ. ಇದು ಪರಮಾತ್ಮನ ವಿಶ್ವಕರ್ಮವನ್ನು ಸೂಚಿಸುವ ಸಂಕೇತವಾಗಿದೆ. ನಿಸರ್ಗದಲ್ಲಿ ಸರ್ವಚೈತನ್ಯಕ್ಕೂ ಆ ಪರಮಾತ್ಮನೇ ಕಾರಣಕರ್ತನು. "ದೇವಲೋಕದ ಸೂತ್ರಧಾರಿ, ಜೀವಲೋಕದ ಪಾತ್ರಧಾರಿ" ಎಂಬುದೇ ಈ ಸಂಕೇತದ ಭಾವ. ಆದಿಶಕ್ತಿ ಸ್ವರೂಪನಾದ ವಿಶ್ವಕರ್ಮನು ಸಕಲವನ್ನೂ ಸೃಷ್ಟಿಸುವ ಕರ್ತನಾದ ಬೃಹಸ್ಪತಿ ಎನಿಸಿದನು. (ಸಿದ್ಧಗಂಗಾ ತ್ರೈ॥ ಪು. 46 ಸಂ. 4 ವ. 1967 ಮತ್ತು ಪು. 3 ಸಂ. 2 ವ. 67) ಅವನೇ ಪರಬ್ರಹ್ಮನು. ಅವನೇ ಗುರು. ಆ ಗುರುವು ಸತ್ವರಜತಮೋಗುಣತ್ರಯ ಪ್ರಧಾನಿತರಾದ ಬ್ರಹ್ಮವಿಷ್ಣು ಮಹೇಶ್ವರರಾಗಿ ಭಾಗವಾಗಿ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಿಗೆ ಕರ್ತನಾದನು. ಪರಮಾತ್ಮನು ವಿಶ್ವಪ್ರೇಮಕ್ಕಾಗಿ ಎಲ್ಲ ಪ್ರಾಣಿಗಳಲ್ಲಿಯೂ ತಾನೇ ಹೆಣ್ಣಾದನು. ಪುರುಷ ಮತ್ತು ಸ್ತ್ರೀ ಎರಡೂ ತಾನೇ ಆದನು. (ಸಿ. ತ್ರೈ. ಪು. 47 ಸಂ. 4 ವ. 1967) ತಾನೇ ದೇವತೆಗಳಾದ ಸರಸ್ವತಿ, ಲಕ್ಷ್ಮಿ, ಪಾರ್ವತಿಯರಾಗಿ ಕ್ರಮವಾಗಿ ಬ್ರಹ್ಮ; ವಿಷ್ಣು ಮತ್ತು ಪರಮೇಶ್ವರ ಪತ್ನಿಯರಾದನು. ಈ ಪರಮಾತ್ಮನನ್ನು ಕಾಣಲು ಆಧ್ಯಾತ್ಮಿಕ ಶಕ್ತಿ ಪೂರ್ಣನಾಗಿ ಬೆಳೆಯಬೇಕು. ಮಹರ್ಷಿಗಳು ಇವನ್ನು ಸಾಧಿಸಿ ದೇವರನ್ನು ನೋಡಿದ್ದಾರೆ. ಆ ಪರಮಾತ್ಮನನ್ನು ಬಾಹ್ಯನೇತ್ರಗಳಿಂದ ನಾವು ಕಾಣದಿದ್ದರೂ ಅವನನ್ನು ಲೀಲೆಗಳ ರೂಪದಲ್ಲಿ ಕಾಣಬಹುದು. ದೇವಲೀಲೆ ಅನುಪಮವಾದುದು (ಸಿ. ತ್ರೈ॥ ಪು. 21 ಸಂ. 4 ವ. 1967). ಪರಮಾತ್ಮನು ವೃಕ್ಷ ಮೂಲವಾದರೆ ತ್ರಿಮೂರ್ತಿಗಳೇ ಕಾಂಡಗಳು. ಅಷ್ಟದಿಕ್ಪಾಲಕರೇ ರೆಂಬೆಗಳು. ನವಗ್ರಹಗಳೇ ಕೊಂಬೆಗಳು. (33) ಮೂವತ್ತುಮೂರು ಕೋಟಿ ದೇವಾನುದೇವತೆಗಳೇ ಪತ್ರಗಳು. ಋಷಿಮುನಿಗಳೂ, ಸಾಧುಸಂತರೂ ರಾಜಮಹಾರಾಜರೂ ಪ್ರಜಾಪಾಲಕರೂ ಮತ್ತು ಸತ್ಪುರುಷರು ಫಲಪುಷ್ಪಗಳು. ಜೀವಕೋಟಿಯು ಈ ವೃಕ್ಷದಿಂದಲೇ ಆಶ್ರಿತವಾಗಿರುವ ಕ್ರಿಮಿಕೀಟಾದಿ ಅಣುಜೀವಿಗಳು. ಈ ಬೃಹದಾಕಾರವಾದ ವೃಕ್ಷವು ಬ್ರಹ್ಮಾಂಡವನ್ನೇ ವ್ಯಾಪಿಸಿದೆ. ಈ ಎಲ್ಲ ಜೀವಕೋಟಿಗೆ ಪಂಚಭೂತಗಳು ಆ ಪರಮಾತ್ಮನಿಂದಲೇ ಒದಗುತ್ತಿವೆ. ಮನುಷ್ಯಮಾತ್ರದವನು ದುಂಬಿಯಂತಾಗಿ ಆ ಎಲ್ಲ ಪುಷ್ಪಗಳಲ್ಲಿನ ಆಧ್ಯಾತ್ಮ ಮಧುವನ್ನು ಸಂಪೂರ್ಣ ಹೀರಬೇಕು. ಅಂದು ಮಾತ್ರ ಅವನು ಪರಮಾತ್ಮನನ್ನು ಕಾಣುವನು. (ಸಿ. ತ್ರೈ. ಪು. 2 ಸಂ. 1 ವ. 1967). ಆಗ ಮಾತ್ರ ಅವನು ಇಹಪರದಲ್ಲೂ ಸಲ್ಲತಕ್ಕವನಾಗಿ ನಿತ್ಯಸುಖಿಯಾಗುತ್ತಾನೆ ಇಂತಹ ಅಮೋಘ ಶಕ್ತಿಯನ್ನು ಗಳಿಸಲು ಈ ರೀತಿಯ ಅಷ್ಟಾಂಗ ಮಾರ್ಗವನ್ನು ಹಿಡಿಯಬೇಕು : (1) ಒಳ್ಳೆಯ ಭಾವನೆ, (2) ಒಳ್ಳೆಯ ಮಾತು, (3) ಒಳ್ಳೆಯ ಕೆಲಸ, (4) ಸತ್ಯವನ್ನು ನುಡಿಯುವುದು, (5) ಸತ್ಯದಿಂದ ನಡೆವುದು, (6) ಅಹಿಂಸಾವ್ರತಾಚರಣೆ (7) ಇತರರನ್ನು ತನ್ನಂತೆ ತಿಳಿಯುವುದು ಮತ್ತು (8) ಸತ್ಸಂಗ ಮಾಡುವುದು. ಸತ್ಸಂಗದಲ್ಲಿ ಸಜ್ಜನರ ಸಹವಾಸ, ವೇದೋಪನಿಷತ್ ಗ್ರಂಥಗಳು ಭಗವದ್ಗೀತೆ, ಖುರಾನ್, ಬೈಬಲ್ ಮುಂತಾದ ಧಾರ್ಮಿಕ ಗ್ರಂಥಗಳ ಪಠಣ, ಶ್ರವಣ, ಮನನ, ನಿಧಿಧ್ಯಾಸ ಮತ್ತು ಅನುಷ್ಠಾನಗಳೂ ಸೇರಿವೆ. ಈ ಸತ್ಕರ್ಮಾನುಷ್ಠಾನಗಳಿಂದ ಪಾಪವನ್ನು ಅಸತ್ಯವನ್ನು ಮತ್ತು ಅಧರ್ಮವನ್ನು ಕಂಡರೆ ಭೀತಿಯುಂಟಾಗುತ್ತದೆ. ಈ ಸತ್ಸಂಗದಿಂದ ನಿರ್ಮೋಹತ್ವವೂ, ನಿರ್ಮೋಹತ್ವದಿಂದ ನಿಶ್ಚಲತತ್ವವೂ, ಇದರಿಂದ ಜೀವನ್ಮುಕ್ತಿಯೂ ಲಭಿಸುತ್ತವೆ. ಭೀತಿಯುಂಟಾದರೆ ಭಕ್ತಿಯುಂಟಾಗುತ್ತದೆ. ಈ ಭಕ್ತಿಯಿಂದ ಧರ್ಮೋದಯವಾಗುತ್ತದೆ. ಇಂತಹ ಧರ್ಮದಿಂದಲೇ ಚತುರ್ವಿಧ ಫಲಪುರುಷಾರ್ಥಗಳಾದ ಧರ್ಮಾರ್ಥ ಕಾಮಮೋಕ್ಷಗಳ ಸಂಪಾದನೆಯಾಗಬೇಕು. ಈ ಅಷ್ಟ ನಿಯಮಗಳನ್ನು ಪರಿಪಾಲಿಸುವಾಗ ನಮ್ಮ ಪವಿತ್ರ ಮನವು ಗುರುವೆಂಬ ಈ ಜ್ಯೋತಿಯ ಸುತ್ತಲೂ ಪತಂಗದಂತೆ ಸುತ್ತಿ ಸುತ್ತಿ ನೊಂದು ಬೆಂದು ಆ ಪರಮ ಗುರುವನ್ನು ನೋಡಬೇಕು. (ಸಿ. ತ್ರೈ. ಪು. 2 ಸಂ. 1 ವ. 1967) ಭಾವಕ್ಕೆ ತಕ್ಕಂತೆ ಆಗ ಮೋಕ್ಷ ಸಾಧನೆಯಾಗಿ ಜೀವನ್ಮುಕ್ತಿ ದೊರೆಯುತ್ತದೆ ಎಂದು ಇಲ್ಲಿನ ಜ್ಯೋತಿ ಸಂಕೇತವು ಸೂಚಿಸುತ್ತದೆ.

"ಜ್ಯೋತಿರ್ಮಯ ಧರ್ಮಮೂರ್ತಿಯಾದ ಗುರುವು ಸತ್ಯಧರ್ಮವೆಂಬ ಪೀಠದ ಮೇಲೆ ನಿಂತಿರುವ ಆಧಾರ ಸ್ತಂಭದ ಮೇಲೆ ಪಂಚಭೂತಗಳನ್ನು ಸೂಚಿಸುವ ಪಂಚ ದೀಪಗಳಿಂದ ಅವ್ಯಕ್ತವಾಗಿ ಜ್ಞಾನಜ್ಯೋತಿಯಾಗಿ ಚಿದಂಬರದಲ್ಲಿ ಸಚ್ಚಿದಾನಂದ ಸ್ವರೂಪನಾಗಿ ನಿಂತು ಕೋಟಿ ಸೂರ್ಯ ಪ್ರಕಾಶಮಾನವಾಗಿ ಅಖಂಡವಾಗಿ ಪ್ರಜ್ವಲಿಸುತ್ತಿದ್ದಾನೆ" ಎಂಬುದನ್ನೂ ಈ ಜ್ಞಾನ ಜ್ಯೋತಿಯ ಪ್ರಭಾವಳಿಯನ್ನೇ ಹಿನ್ನೆಲೆಯಾಗಿಟ್ಟು ಕೊಂಡು ಪರಮಾತ್ಮನನ್ನು ನೋಡಬೇಕೆಂಬುದನ್ನೂ ಈ ಜ್ಯೋತಿ ಸಂಕೇತದ ಅಂತರ್ಭಾವವು ಸೂಚಿಸುತ್ತದೆ.

"ಈ ಪರಮಾತ್ಮನು ಹಿಂದೂಗಳ ಗುಡಿಗೋಪುರಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರನಾಗಿಯೂ, ಜೈನರ ಬಸದಿಗಳಲ್ಲಿ (ವರ್ಧಮಾನ) ಮಹಾವೀರನಾಗಿಯೂ, ಗೊಮ್ಮಟೇಶ್ವರನಾಗಿಯೂ, ಕ್ರಿಶ್ಚಿಯನ್ನರಿಗೆ ಚರ್ಚುಗಳಲ್ಲಿ ಏಸು ಕ್ರಿಸ್ತನಾಗಿಯೂ, ಮುಸ್ಲಿಮರಿಗೆ ಮಸೀದಿಗಳಲ್ಲಿ "ಅಲ್ಲಾ"ನಾಗಿಯೂ ನೆಲಸಿ ಆರಾಧಿಸಲ್ಪಡುತ್ತಿದ್ದಾನೆ" ಎಂಬುವನ್ನು ಇಲ್ಲಿ ಕಾಣುವ ಗುಡಿ, ಗೋಪುರ, ಬಸದಿ, ಚರ್ಚು, ಮಸೀದಿಗಳು ಮತ್ತು ದೇವಸ್ಥಾನಗಳಾಗಿ ನಿಂತು ಸಾರುತ್ತಿವೆ.

ಶೈವರ ಆರಾಧ್ಯ ದೈವ ಶಿವನಾದರೂ, ವೈಷ್ಣವರಿಗೆ ವಿಷ್ಣುವಾದರೂ, ಜೈನರಿಗೆ ಮಹಾವೀರ (ಗೊಮ್ಮಟೇಶ್ವರ)ನಾದರೂ, ಕ್ರಿಶ್ಚಿಯನ್ನರಿಗೆ ಏಸುಕ್ರಿಸ್ತನಾದರೂ, ಮುಸಲ್ಮಾನರಿಗೆ ಅಲ್ಲನಾದರೂ ಆ ದೇವರು ಬಹುನಾಮಗಳಿಂದ ಕರೆಯಲ್ಪಡುತ್ತಿರುವ, ಅನೇಕ ವಿಧಗಳಿಂದ ಅರ್ಚಿಸಲ್ಪಡುತ್ತಿರುವ "ಪರಮಾತ್ಮ" (ಆದಿಶಕ್ತಿ) ಎಂಬ ಒಬ್ಬನೇ ಆಗಿದ್ದಾನೆ. ವಿಶ್ವೇಶ್ವರನಾದ ದೇವದೇವನಾದ ಪರಮೇಶ್ವರನೂ ಸಹ ಆ ಪರಮಾತ್ಮನನ್ನೇ ಕುರಿತು ಯೋಗಧ್ಯಾನಮಗ್ನನಾಗಿ ಕುಳಿತು ತಪಸ್ಸನ್ನಾಚರಿಸುತ್ತಿದ್ದಾನೆ. ಈ ಎಲ್ಲ ಧರ್ಮದ ಎಲ್ಲ ಮತೀಯರೂ ಪರಮಾತ್ಮನ ಭಿನ್ನಾಂಶ ಸಂಭೂತರು. ಅವನ ಮಕ್ಕಳು. ಆದ್ದರಿಂದ ಮಾನವ ವರ್ಗಕ್ಕೆ ಸೇರಿರುವ ನಾವೆಲ್ಲರೂ ಸಹೋದರ ಸಹೋದರಿಯರು ಎಂಬುದನ್ನು ಸೂಚಿಸುವದೇ ಈ ಎಲ್ಲ ದೇವಾಲಯಗಳೂ ಒಟ್ಟಿಗೆ ಒಂದೇ ಕಡೆ ಇರುವುದರ ಅರ್ಥಗರ್ಭಿತ ಭಾವ.

ನಮಗೆ ತಾಯ್ತಂದೆಯರೇ ಗುರುಹಿರಿಯರೇ ಪ್ರತ್ಯಕ್ಷ ದೈವಸ್ವರೂಪರು. ನಾವೆಲ್ಲರೂ ಅವರ ಆಶೀರ್ವಾದಕ್ಕೆ ಮತ್ತು ದಯಾಮಯನಾದ ಪರಮಾತ್ಮನ ಕೃಪೆಗೆ ಪಾತ್ರರಾದವರು. ದೇವಸನ್ನಿಧಿಯಲ್ಲಿ ಭಕ್ತಿಯಿಂದ ಕೂಡಿದ ಭಯದಲ್ಲೂ. ಸತಿಯ ಪಾತಿವ್ರತ್ಯ ಧರ್ಮದಲ್ಲೂ ಪತಿಯು ಸತಿಯಲ್ಲಿ ತೋರುವ ಗೃಹಲಕ್ಷ್ಮೀ ಭಾವ ಮತ್ತು ಕರುಣೆಯಲ್ಲೂ, ಗುರುವಿಗೆ ಶಿಷ್ಯರ ಮೇಲಿನ ಪ್ರೀತಿ ಮತ್ತು ದಯೆಯಲ್ಲೂ, ಶಿಷ್ಯರಲ್ಲಿ ಗುರುವಿನ ಮೇಲಿನ ಭಯ ಭಕ್ತಿ ವಿನಯ ಮತ್ತು ವಿಧೇಯತೆಯಲ್ಲೂ, ಹಿರಿಯರಿಗೆ ಕಿರಿಯರಲ್ಲಿ ದಯೆ ಮತ್ತು ಕ್ಷಮಾಗುಣಗಳಲ್ಲೂ, ಸ್ನೇಹಿತರ ಅನ್ಯೋನ್ಯ ಭಾವದಲ್ಲೂ, ಸಾಧು, ಸಂತರು ಮತ್ತು ಸಜ್ಜನರ ಮೇಲಿನ ದೈವಿಕ ಮನೋಭಾವದಲ್ಲೂ, ಪ್ರಜೆ ಮತ್ತು ಪ್ರಜಾರಕ್ಷಕರ ನಡುವಿನ ಗೌರವ, ಅಭಿಮಾನ ಮತ್ತು ಸಮರಸ ಭಾವದಲ್ಲೂ, ಪ್ರಾಣಿದಯೆ, ಸತ್ಯ, ತ್ಯಾಗ, ಪ್ರೀತಿವಾತ್ಸಲ್ಯ, ಶಾಂತಿ ಮತ್ತು ಸಹನೆ ಮೊದಲಾದ ಸದ್ಗುಣಗಳಿರುವಲ್ಲಿಯೂ, ಮತ್ತು ಸೌಂದರ್ಯವೇ ಮೂರ್ತಿವೆತ್ತಂತೆ ಇರುವ ಪ್ರಕೃತಿಯಲ್ಲಿಯೂ ಪರಮಾತ್ಮನನ್ನು ಕಾಣಬಹುದು. ಅಂದಮೇಲೆ ನಮ್ಮ ಎಲ್ಲ ನಡೆನುಡಿಗಳಲ್ಲೂ ಧರ್ಮವಿರಲೇಬೇಕೆಂದಾಯ್ತು. ಈ ಧರ್ಮವನ್ನು ಎಷ್ಟು ವಿವರಿಸಿದರೂ ಸಾಲದು. ಈ ತ್ರೈಮಾಸಿಕ ಪತ್ರಿಕೆಯ ಮುಖ ಚಿತ್ರದಲ್ಲಿ ಧರ್ಮವು ಕಲಾರೂಪ ತಾಳಿದೆ. ಧಾರ್ಮಿಕ ಮಹಾಪುರುಷರ ಪರಂಪರೆಯನ್ನೂ, ಪರಮಾತ್ಮ ಸ್ವರೂಪವಾದ ಜ್ಯೋತಿಯನ್ನೂ, ಧರ್ಮಚಕ್ರವನ್ನೂ ಮತ್ತು ಎಲ್ಲ ಮತೀಯ ದೇವಾಲಯಗಳನ್ನೂ ಶ್ರೀ M. C. Veer ಅವರು ಬಹಳ ಅಂದವಾಗಿಯೂ ಅರ್ಥಗರ್ಭಿತವಾಗಿಯೂ ಚಿತ್ರಿಸಿದ್ದಾರೆ. ತನ್ಮೂಲಕ ಜನತೆಯ ಐಕಮತ್ಯ ಭಾವಕ್ಕೆ ಕರೆ ನೀಡಿದ್ದಾರೆ.

ಭಾಗ ೩. ನಾವು ನಮ್ಮ ಮತ ಪದ್ಧತಿಗಳಿಗನುಸಾರವಾಗಿ ಬಹುನಾಮಗಳಿಂದ ಸ್ತುತಿಸುತ್ತೇವೆಯಾದರೂ ಆ ದಿವ್ಯ ಮೂರ್ತಿ ಪರಮಾತ್ಮನಿಗೆ ಯಾವ ಮತವೂ ಇಲ್ಲ-ಧರ್ಮವೆಂಬುದೊಂದೇ ಮತ. ಯಾವ ಜಾತಿಯೂ ಇಲ್ಲ-ಸತ್ಯವೆಂಬುದೊಂದೇ ಜಾತಿ. ಅವನಿಗೆ ಸಲ್ಲಿಸಬೇಕಾದ ಯಾವ ವ್ರತವೂ ಇಲ್ಲ. ಅಹಿಂಸೆಯೊಂದೇ ವ್ರತ. ಅವನು ಕ್ರಾಂತಿಯನ್ನು ಅಪೇಕ್ಷಿಸುವುದಿಲ್ಲ-

ನಿರ್ಮಲ ಚಿತ್ತದಿಂದ ಕೂಡಿದ ಶಾಂತಿಯೊಂದನ್ನೇ ನಿರೀಕ್ಷಿಸುತ್ತಾನೆ. ಅವನಲ್ಲಿ ನಂಬಿಕೆ ಇಟ್ಟವರನ್ನು ಕಾಪಾಡುವನು.

ನಂಬಿಕೆಟ್ಟವರಿಲ್ಲವೋ ರಂಗಯ್ಯನ ।
ನಂಬದೆ ಕೆಟ್ಟರೆ ಕೆಡಲಿ ॥

ಎಂದು ಪುರಂದರದಾಸರು ಕೀರ್ತನೆಯ ರೂಪದಲ್ಲಿ ಹಾಡಿ ಸಾರಿದ್ದಾರೆ. ಈ ಎಲ್ಲ ಮತೀಯ ಪಂಗಡಗಳ ಧರ್ಮ ಪ್ರಸಾರಕ್ಕೆ ಶ್ರೀ ಸಿದ್ಧಗಂಗಾ ಪತ್ರಿಕೆಯಲ್ಲಿ ಸಮಾನ ಅವಕಾಶವಿದೆ. ಇದರಿಂದ ಜನತೆಗೆ ಧರ್ಮ ಬೋಧೆ ದೊರೆಯುತ್ತದೆ. ಶ್ರೀ ಕ್ಷೇತ್ರವು ಈ ರೀತಿಯಲ್ಲಿ ಧರ್ಮದ ಚೌಕಟ್ಟಿನಲ್ಲಿಯೇ ಇದ್ದು ಧರ್ಮಕ್ಷೇತ್ರವಾಗಿದೆ. ಇಂತಹ ಧರ್ಮ ಪ್ರಗತಿಯಿಂದಲೇ ಕ್ಷೇತ್ರಾಭಿವೃದ್ಧಿ ಸರ್ವತೋಮುಖವಾಗಿದೆ. ಶ್ರೀ ಕ್ಷೇತ್ರವು ನಿತ್ಯ ಜ್ಞಾನಾನ್ನ ದಾಸೋಹ ಮಾಡುವುದರ ಮೂಲಕ ಜನಗಣ ಮನವನ್ನು ಪವಿತ್ರಗೊಳಿಸಿ ಧಾರ್ಮಿಕ ಪ್ರವೃತ್ತಿಯನ್ನುಂಟುಮಾಡುತ್ತದೆ. ಇದನ್ನು ಒಂದು ಸಮಾಜ ಸುಧಾರಣಾ ಕೇಂದ್ರವೆಂದೇ ಹೇಳಬಹುದು. ಧರ್ಮದಿಂದಲೇ ನಮ್ಮ ಭಾರತ (ಇಂಡಿಯ) ದೇಶವು ಸರ್ವಶಕ್ತವಾಗಿದ್ದು ಅಪಾರ ಕೀರ್ತಿ ಗಳಿಸಿದೆ.

ಪ್ರಜೆಗಳಿಗಾಗಿ ಪ್ರಜೆಗಳಿಂದಾದ ಪ್ರಜಾರಾಜ್ಯವಿರುವಂತೆ ಧರ್ಮಕ್ಕಾಗಿ ಧರ್ಮದಿಂದಾದ ಧರ್ಮ ಸಾಮ್ರಾಜ್ಯ ವಿರುವಂತಾಗಬೇಕು. ಅಂತಹ ರಾಜ್ಯದಲ್ಲಿ ದೊರೆಯಬಹುದಾದ ಮತವು ಒಮ್ಮತವಾಗಿರುತ್ತದೆ. ಆಗ ಧರ್ಮಕ್ಕೇ ಜಯಲಭಿಸುತ್ತದೆ. ಸತ್ಯಕ್ಕೆ ಸಾವಿಲ್ಲ. ಆದುದರಿಂದಲೇ "ನಾವು ಹಿಂದೂಗಳಾಗಿ ಬಾಳದಿದ್ದರೆ ಸರ್ವನಾಶವಾದೀತು !" ಎಂದು ಶ್ರೀ ಶ್ರೀಗಳವರು ಸರ್ವಧರ್ಮೀಯ ಹಿಂದೂಪರಿಶಕ್ತಿ ಧರ್ಮಸಂರಕ್ಷಣೆಯ ಬಗ್ಗೆ ಎಚ್ಚರಿಕೆಯನ್ನು ಅಪ್ಪಣೆ ಕೊಡಿಸಿದ್ದಾರೆ.

ಇಹದಲ್ಲಿ ನಮ್ಮ ಜೀವನ ರಥವು ಸದ್ಧರ್ಮವೆಂಬ ರಸ್ತೆಯಲ್ಲಿ ಜ್ಞಾನವೆಂಬ ಜ್ಯೋತಿಯ ಬೆಳಕಿನಲ್ಲಿ ಮೋಕ್ಷದಾಯಕ ಪರಮೇಶ್ವರನನ್ನು ನೋಡಲು ಗುರಿಯೆಂಬ ಒಂದೇ ದಿಕ್ಕನ್ನು ಹಿಡಿದು ಸಾಗಿದರೂ ಮಾರ್ಗದಲ್ಲಿ ಕಷ್ಟಗಳೆಂಬ (ಭವರೋಗವೆಂಬ) ಕಲ್ಲುಗಳ ಮೇಲೆ ಹತ್ತಿ ಪಾಪವೆಂಬ ತಗ್ಗಿಗೆ ಧುಮುಕಿ ದುಃಖವನ್ನಪ್ಪಿ ಮೋಕ್ಷವೆಂಬ (ಪರವೆಂಬ) ದೈವಸನ್ನಿಧಿಯನ್ನು ಸೇರುವುದು ಕಠಿಣವೆಂದ ಮೇಲೆ ; ಅದೇ ಜೀವನರಥವು ಮಾರ್ಗತಪ್ಪಿ ಅಧರ್ಮವೆಂಬ ಹಳ್ಳಕೊಳ್ಳಗಳಲ್ಲಿ ಅಜ್ಞಾನವೆಂಬ ಅಂಧಕಾರದಲ್ಲಿ ಗುರಿತಪ್ಪಿ ದಿಕ್ಕುಗಾಣದೆ ಸಾಗಿದರೆ ಪರಮ ಕಷ್ಟಕಾರಕವಾದ ಕೊರಕಲುಗಳಲ್ಲಿ ಬಿದ್ದು ಛಿನ್ನವಾಗಿ ಎಲ್ಲಾ ಜನ್ಮಗಳನ್ನೆತ್ತುವ ನರಕವೆಂಬ ಪಾತಾಳವನ್ನಪ್ಪಿ ಅತ್ಯಂತ ದುಃಖವನ್ನನುಭವಿಸಿ ಮೋಕ್ಷವೆಂಬ ದೈವಸನ್ನಿಧಿಯನ್ನು ಸೇರುವುದು, ಎಷ್ಟು ಕಠಿಣವಾಗಬಹುದು." ಸರ್ವಶ್ರೇಷ್ಠವಾದ ಧರ್ಮವನ್ನು ಎಷ್ಟು ವಿವರಿಸಿದರೂ ಕಡಿಮೆಯೇ ಸರಿ.

"ಶ್ರೀ ಕ್ಷೇತ್ರದ ಜ್ಞಾನಪ್ರಸಾರದ ಅಂಗವಾದ ಪತ್ರಿಕೋದ್ಯಮ ಶಾಖೆಯು ದಿನೇ ದಿನೇ ಬೆಳೆದು ತ್ರೈಮಾಸಿಕವು "ಮಾಸಿಕ ಪತ್ರಿಕೆ"ಯಾಗಿ ಇತೋಪ್ಯಧಿಕವಾದ ಧರ್ಮಪ್ರಸಾರ ಮಾಡುವಂತಾಗಲಿ ಇದರಿಂದ ಜನತೆ ಸಚ್ಚಿದಾನಂದ ಸುಖವನ್ನು ಪಡೆದು, ಪರಮೇಶ್ವರನ ಕೃಪೆಗೆ ಪಾತ್ರವಾಗಲಿ !" ಎಂದು ಹಾರೈಸೋಣ.

ಸರ್ವೇ ಜನಾಸ್ಸುಖಿನೋ ಭವಂತು ।
ಸಮಸ್ತ ಸನ್ಮಂಗಳಾನಿ ಭವಂತು ।

ಜೈ ಹಿಂದ್ !

"ಚೀಪ್‌ರೇಟ್ ಅಳಿಯ"ನ "ಪುರಾಣ ದರ್ಶನ"

—ಎಂ ಜಿ. ನಾಗರಾಜ ರಾವ್

ಸಂಜೆ ತಂತಿ ಬಂದುದನ್ನು ಕಂಡು ಅಂಜಿದೆ. ಆತುರದಲ್ಲಿ ಲಕ್ಕೋಟೆ ಬಿಚ್ಚಿ ನೋಡಿದೆ: ಓದಿ ನೋಡಿದೆ; ಕುಣಿದಾಡಿದೆ. ಹಾಗೆಯೇ ಮೇಲಕ್ಕೆ ಹಾರಿದ್ದರೆ ಆಕಾಶಕ್ಕೆ ಮೂರು ಗೇಣಿನ ಅಂತರವೂ ಉಳಿಯುತ್ತಿರಲಿಲ್ಲ. ವೇನೊ! ಒಂದೇ ಪ್ರಯತ್ನದಲ್ಲಿ ಬಿ.ಎಸ್ಸಿ. ಪಾಸಾಗಿದೆ, ಅದೂ ಫಸ್ಟ್‌ಕ್ಲಾಸ್‌ನಲ್ಲಿ!

ಮುಂದೆ?

ಮನಸಿನ ಕಲ್ಪನೆಗೆ ಆಕಾಶಗೋಪುರಕ್ಕೆ ಕೊನೆ ಎಲ್ಲಿ ಬಂತು? ಭವ್ಯ ಭವಿಷ್ಯದ ಬಗ್ಗೆ ಬಗೆಯಲ್ಲ ಬಗೆಬಗೆಯ ಊಹಾಪೋಹಗಳೆದ್ದುವು.

ಬೆಚ್ಚನೆಯ ಮನೆ! ವೆಚ್ಚಕ್ಕೆ ಹೊನ್ನು!! ಇಚ್ಛೆಯರಿವ ಸತಿ!!! ಎಲ್ಲಾ ನನ್ನದಾಗುವುದರಲ್ಲಿ ಸಂಶಯವೇನು? ಅಪ್ಪ ಕಟ್ಟಿಸಿದ ಮನೆ, ನನ್ನ ಪಾಲು. ಇನ್ನು ವೆಚ್ಚಕ್ಕೆ ಹೊನ್ನು—ಇಂಜಿನಿಯರ್ (ಅಥವಾ ಡಾಕ್ಟರ್) ಆಗುವುದು. ಆಗ ಇಚ್ಛೆಯರಿವ ಸತಿ ತಾನೇ ಬರುತ್ತಾಳೆ. ಆವೇಶದಲ್ಲಿ ಕೂಗಿದೆ– "ಈಗ B.E., ಓದುವುದು"

B.E., ಗೆ ಅರ್ಜಿ ಹಾಕಿದೆ. ಯಾರು ಯಾರನ್ನು ನೋಡಿ ಏನು ಏನನ್ನು ಮಾಡಬೇಕಾಗಿತ್ತೋ ಯಾವುದಕ್ಕೂ ಕಡಮೆಯಾಗಲಿಲ್ಲ. ಇಂಟರ್‌ವ್ಯೂಗೆ ಮೊದಲೆ ಸಿದ್ಧವಾಗಿದ್ದ ಪಟ್ಟಿಯಲ್ಲಿ ನನ್ನ ಹೆಸರು ಆಗಲೇ ಒಂದು ಜಾಗ ಕಂಡಿದ್ದ ಮೇಲೆ ಇನ್ನಾವ ಚಿಂತೆ? ಹದಿನಾರಾಣೆಯ ನಿಶ್ಚಯದೊಡನೆ ಪರೀಕ್ಷಕರ (ನಿರೀಕ್ಷಕರ?) ಗುಂಪಿನ ಮುಂದೆ ನಿಂತೆ.

ಅನಿರೀಕ್ಷಿತವಾಗಿ ಪ್ರಶ್ನೆ ಬಂತು. "ನಿಮಗೆ ಈ ವರ್ಷ seat ಕೊಡದೆ ಹೋದರೆ ಏನು ಮಾಡುತ್ತೀರಿ?"

ಒಂದುಕ್ಷಣ ಯೋಚಿಸಿ ಹೇಳಿದೆ. "ಮುಂದಿನ ವರ್ಷದವರೆಗೆ ಕಾದಿದ್ದಾದರೂ B.E., ಯನ್ನೇ ಓದುತ್ತೇನೆ" ನನ್ನ ದೃಢ ನಿಶ್ಚಯಕ್ಕೆ ಮಾರು ಹೋಗಿ ಸೀಟ್ ಕೊಟ್ಟೇ ಕೊಡುತ್ತಾರೆ ಎಂದು ಧೈರ್ಯವಾಗಿದ್ದೆ. ಫಲಿತಾಂಶ ನೋಡಿದಾಗ ನನ್ನ ಹೆಸರೇ ಇಲ್ಲ.

ಅಂತೂ ನಾನೆ ಬೆಪ್ಪಾದೆ. ವರ್ಷಕಾಲ ಕಾಲಹರಣ ಮಾಡುವುದೇಕೆ? ಎಲ್ಲಾದರೂ ಕೆಲಸಕ್ಕೆ ಸೇರುವ ಪ್ರಯತ್ನಮಾಡೋಣ—ಎಂದು ಯೋಚಿಸಿದೆ. ನಾಲ್ಕಾರು ಕಡೆ ಅರ್ಜಿ ಹಾಕಿದೆ. ಒಂದು 'ಇಂಟರ್‌ವ್ಯೂ' ಗೆ ಕರೆ ಬಂತು.

"ಏನು ಓದಿದ್ದೀರಿ"—ಪ್ರಶ್ನೆ.

"B.Sc., ಫಸ್ಟ್‌ಕ್ಲಾಸ್‌ನಲ್ಲಿ ಪಾಸ್‌ಮಾಡಿದ್ದೇನೆ."

"ನಿಮ್ಮ ವಯಸ್ಸು"

ನಾನು ಅಭಿಮಾನದಿಂದ ಹೇಳಿದೆ— "ಹದಿನೆಂಟು ವರ್ಷ"

ಇಷ್ಟು ಚಿಕ್ಕ ವಯಸ್ಸಿಗೆ! ಎಂದು ಆಶ್ಚರ್ಯ ಸೂಚಿಸುತ್ತಾರೆ. ನನ್ನ ಮೇಧಾಶಕ್ತಿಗೆ ಮೆಚ್ಚಿ ಖಾಯಂ ಕೆಲಸವನ್ನೇ ಕೊಡುತ್ತಾರೆ, ಎಂದು ನಿರೀಕ್ಷಿಸಿದ್ದೆ. ಆದರೆ ಬಂದ ಉತ್ತರ?

ಈ ವಯಸ್ಸಿಗೇ ಏಕೆ, ನಿಮಗೆ ಸಂಪಾದನೆಯ ಕಡೆ ಗಮನ? Age bar ಆಗಲಿರುವವರಿಗೆ ಅವಕಾಶ ಕೊಡಿ. ಎರಡು ವರ್ಷ ಆರಾಮವಾಗಿ ಇರಿ;

'ಹಾರಿಬಲ್ !' ಎಂದು ನಿಟ್ಟುಸಿರು ಬಿಡುತ್ತಾ ಹೊರಕ್ಕೆ ಬಂದೆ, 'ಆರಾಮ್' ಹೋಟೆಲಿನತ್ತ ಸಾಗಿದೆ.

"ಫ್ಯಾಕ್ಟರಿಗಳಲ್ಲಿ ಕೆಲಸ ಸಿಗುವುದು ಕಷ್ಟ 'ಸ್ಕೂಲ್ ಮೇಸ್ತ್ರ ಕೆಲಸ' ಸುಲಭವಾಗಿ ಸಿಗುತ್ತೆ ಪ್ರಯತ್ನ ಮಾಡಿ ನೋಡು"—ಎಂದು ಬುದ್ಧಿವಾದ ಹೇಳಿದ ನಾಣಿಯ ಮಾತನ್ನು ಮೊದಲು ತಿರಸ್ಕರಿಸಿದ್ದೆ; ಆದರೆ ಆಮೇಲೆ ಅದಕ್ಕೇ ಶರಣು ಹೋಗಿ ಅರ್ಜಿ ಹಾಕಿದೆ. B Sc . ಜೊತೆಗೆ ಹಿಂದೀ ವಿದ್ವಾನ್ ಪರೀಕ್ಷೆಯನ್ನೂ ಮಾಡಿ ಕೊಂಡಿದ್ದ ನನಗೆ ಒಂದಲ್ಲ ಒಂದಕ್ಕೆ ಅವಕಾಶ ಸಿಗುತ್ತೆ ಎಂಬ ನಂಬಿಕೆ ಇತ್ತು.

ಇಂಟರ್ ವ್ಯೂಗೆ ಬಂದಾಗ ಸೈನ್ಸ್ ಗ್ರಾಜುಯೇಟ್ ಗಳ ಜೊತೆಗೆ ನುಗ್ಗಿದೆ. ಅಲ್ಲಿ ಮೊದಲನೆಯ ಪ್ರಶ್ನೆ 'ನಿಮ್ಮ Qualifications ಏನು ?'

B.Sc., ಫಸ್ಟ್‌ಕ್ಲಾಸ್ ಜೊತೆಗೆ ಹಿಂದೀ ವಿದ್ವಾನ್ ಆಗಿದೆ" ಎಂದೆ

ನಿಮ್ಮಂಥವರೆಲ್ಲ ಇಲ್ಲಿ ನುಗ್ಗಿದರೆ ಬರೀ B.A., B.Sc., ಮಾಡಿಕೊಂಡವರ ಗತಿ ಏನ್ರಿ ? ಈಗೇನು ಹಿಂದೀಗೆ ಬೇಕಾದ ಅವಕಾಶ ಇದೆ ಆ 'field' ನಲ್ಲಿ ಪ್ರಯತ್ನಪಡಿ.

ಈ ಮಾತುಕೇಳಿ ನಿರಾಸೆಯಾಗಿ ಎದ್ದು ಹೋದೆ ಎರಡನೆಯ ಬಾರಿ, ಅದೃಷ್ಟ ಪರೀಕ್ಷೆಗೆ ಇನ್ನೊಂದು ಕಡೆ ಪಂಡಿತರ ಸಾಲಿನಲ್ಲಿ ನಿಂತು, ಸರದಿಗಾಗಿ ಕಾದು ಕುಳಿತೆ.

ಅಲ್ಲಿ ಬಂದ ಉತ್ತರ—"ನಿಮ್ಮಂಥವರೆಲ್ಲ ಇಲ್ಲಿ ಬಂದರೆ ಶುದ್ಧ ಪಂಡಿತರಿಗೆ ಸ್ಥಳ ಎಲ್ಲಿ ಸಿಕ್ಕೀತು ? ನಿಮ್ಮಂಥ ವರು ರಿಸರ್ಚ್—ರಿಸರ್ಚ್ ಕಡೆ ಗಮನಕೊಡಬೇಕು; ಅಷ್ಟೇ ಅಲ್ಲ ತಾತಾ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಯತ್ನ ಮಾಡಿ ಎಂಬ ಉಪದೇಶ ಬೇರೆ ! ನಿರಾಶೆ ಕೋಪ, ಎರಡೂ ನನ್ನನ್ನು ಹುಚ್ಚನನ್ನಾಗಿಸಿದ್ದವು. ಎಷ್ಟು ಬೇಕೋ ಅಷ್ಟೇ ಓದಿದರೆ ಒಂದು ಕಾಟ ; ಹೆಚ್ಚು ಓದಿದರೆ ಮತ್ತೊಂದು ಕಾಟ.

ಇಂಟರ್ ವ್ಯೂಗಳಿಗೆ ಸುತ್ತಿ ಸುತ್ತಿ ಸಾಕಾಗಿತ್ತು. ದೇಹ ದಣಿದಿತ್ತು ; ಮನಸ್ಸು ಒಣಗಿತ್ತು ನಿರುದ್ಯೋಗದ ಬೇಸಿಗೆಯಿಂದ ರೈಲಿಗೆ ತಲೆ ಕೊಟ್ಟವರು, ವಿಷ ತೆಗೆದು ಕೊಂಡವರೂ ಹೇಡಿಗಳೆಂದು ನಿರ್ಧರಿಸಿದ್ದ ನನಗೆ, ಆ ಒಂದು ಕ್ಷಣ ಅವರೇ ಜಾಣರು ಎನಿಸಿತು. ಹಿಂದೆಯೆ, ತಾಳಿ ಬಾಳಲಾರದ ಆತುರಗಾರರು ಎಂದು ಅವರನ್ನು ಮೂದಲಿಸಿ ಮುಂದೆ ಹೆಜ್ಜೆ ಹಾಕಿದೆ.

ಕೊನೆಗೆ ದೊರೆತ ಕೆಲಸ, ಇಂಟರ್‌ವ್ಯೂ ಇಲ್ಲದೆಯೇ ದೊರೆಯಿತು. ಒಂದು ಆಫೀಸ್‌ನಲ್ಲಿ (ಅದರಿಂದ ಆಫೀಸಿಗೆ ಯಾವ ಅನ್ಯಾಯವೂ ಆಗಲಿಲ್ಲ ಎನ್ನಿ) ನಾನು ಇಂಟರ್‌ವ್ಯೂಗಳು ಅನಾವಶ್ಯಕ ಎಂಬ ಆತುರದ ಸಿದ್ಧಾಂತಕ್ಕೂ ಒಂದು ಬಿಟ್ಟೆ [ಅದಕ್ಕಾಗಿ ಬಹಳ ವೆಚ್ಚ ಮಾಡಿ ಅನೇಕರನ್ನು ಅನಾವಶ್ಯಕವಾಗಿ ಆಸೆ ನಿರಾಶೆ ಗಳಲ್ಲಿ ಮುಳುಗಿಸಿ ಎಬ್ಬಿಸಿ. ಕೊನೆಗೆ ಯಾವುದೋ ಪ್ರಭಾವಕ್ಕೆ ಒಳಗಾಗಿ ಅನರ್ಹರನ್ನೇ ಆರಿಸಿಕೊಳ್ಳ ಬಹುದು ಅಥವಾ ಆ 'ಜರಡಿ'ಯನ್ನು ಬಿಟ್ಟು ನೇರವಾಗಿ ಉತ್ತಮರನ್ನೇ ಆರಿಸಿಕೊಳ್ಳಬಹುದು ಎಂದು ನಾನು ವಾದಿಸಿದೆ. ನಾಣಿ ಅದನ್ನು ಒಪ್ಪದಿದ್ದರೂ ನನ್ನ ತರ್ಕ ನನಗೆ ಒಗ್ಗಿ ಬಂದಿದೆ. ನಾನಂತೂ ಮನಸಾರ ಒಪ್ಪಿದ್ದೇನೆ ; ಅದನ್ನು.]

೨

ಸಪ್ಪೆ ಮುಖ ಹಾಕಿಕೊಂಡು ಹೋಗುತ್ತಿದ್ದ, ನಾಣಿ ನಾನೇ ಕೂಗಿಕೇಳಿದೆ.

ನಿನ್ನ ಇಂಟರ್‌ವ್ಯೂ-ರಿಸಲ್ಟ್ ಏನಾಯಿತಯ್ಯಾ ?"

ಏನೂ ಪ್ರಯೋಜನವಿಲ್ಲ ಕಣೋ, ಈ ಬಾರಿಯೂ ಹೆಣ್ಣು ಒಪ್ಪಿಗೆಯಾಗಲಿಲ್ಲ"

"ಏನಾಗಿತ್ತು, ಹುಡುಗಿ ಕಪ್ಪೇನು ? ಮುಟ್ಟಿ ಕೈ ತೊಳೆಯಬೇಕು. ಎನ್ನುತ್ತಿದ್ದೆಯಲ್ಲ ಹಾಗೆ." "ಹಾ ಗೇನೂ ಇಲ್ಲ ಬೆಳ್ಳಗೇ ಇದ್ದಳು.

"ಹಾಗಾದರೆ. ಆ ಮೂಗು ಉದ್ದ, ಕಣ್ಣು ಚಿಕ್ಕದು, ಎಂದು ಹೇಳಿಬಿಟ್ಟೆಯಲ್ಲ—ಆ ರೀತಿ...."

"ಹಾಗೂ ಇಲ್ಲ ಸುಂದರವಾಗಿಯೇ ಇದ್ದಳು."

"ಮತ್ತೆ ? ಹೋದ ತಿಂಗಳಲ್ಲಿ ಒಪ್ಪಿದ ಹೆಣ್ಣನ್ನು ವರದಕ್ಷಿಣೆ ಕಾರಣದಿಂದ ಬೇಡ ಅಂದೆಯಲ್ಲ ಆ ರೀತಿಯೇ ನಾದರೂ...."

"ಅವರೇನೋ ಕೇಳಿದಷ್ಟು ವರದಕ್ಷಿಣೆ ಕೊಡು
ವುದಕ್ಕೂ ಸಿದ್ಧನಾಗಿದ್ದರೂ."

"ಹಾಗಾದರೆ ಅದೆಂಥಾ ಹೊಸ ದೋಷ ಕಂಡು
ಹಿಡಿದೆಯೋ."

"ನೋಡು ರಾಜು. ನನಗೆ ಆ ನೀಲಿಬಣ್ಣ ಕಂಡರೆ
ಆಗುವುದಿಲ್ಲ. ಆ ಬಣ್ಣ ಕಂಡರೆ ಅದೇಕೋ ಪೈಬೇಕಿ
ಆಗುತ್ತೆ. ನನ್ನ ಗ್ರಹಚಾರಕ್ಕೆ, ಆ ಹುಡುಗಿ ಅದೇ ನೀಲಿ
ಸೀರೆಯನ್ನೇ ಉಟ್ಟಿದ್ದಳು. ನೋಡುತ್ತಲೇ–ನನಗೆ ಬೇಡ
ಆ ಹುಡುಗಿ, ಅಂದುಬಿಟ್ಟೆ.

ಅವನ ಮಾತುಗಳನ್ನು ಕೇಳಿ ನನಗೆ ಕೋಪ ಉಕ್ಕಿ
ಬಂತು. ಕೊನೆಗೆ ತಿರಸ್ಕಾರದಿಂದ ಹೇಳಿದೆ—ಎಷ್ಟು
ಸುಲಭವಾಗಿ 'ಬೇಡ ಅಂದು ಬಿಟ್ಟೆ' ಅನ್ನುತ್ತಿಯಲ್ಲೋ.
ಆಗ ಆ ಹುಡುಗಿ ಮನಸ್ಸಿನಲ್ಲಿ ಎಂಥಾ ವೇದನೆಯಾಗಿರ
ಬಹುದು ಎನ್ನುವುದನ್ನು ನೀನೇ ಯೋಚಿಸಿನೋಡು.
ಯಾವುದಾದರೂ ಇಂಟರ್‌ವ್ಯೂನಲ್ಲಿ 'ಬೇಡ' ಅನ್ನಿಸಿ
ಕೊಂಡವನಿಗೆ—ನನಗೆ ಗೊತ್ತು ಆ ವೇದನೆ ಆ ದುಃಖ.

ತನ್ನ ಕಾರ್ಯವನ್ನು ಸಮರ್ಥಿಸಿಕೊಂಡ, ನಾಣಿ:-

ಆ ಹುಡುಗಿಗೆ ಆ ಬಣ್ಣ ತುಂಬ ಇಷ್ಟ, ಇರಬೇಕು.
ನನಗೆ ಅದನ್ನು ಕಂಡರೇ ಆಗುವುದಿಲ್ಲ. ಕಣ್ಣಿಗೆ
ಕಾಣುವ ಈ ವಿಚಾರದಲ್ಲಿಯೇ ಹೊಂದಿಕೆ ಇಲ್ಲದಿರುವಾಗ
ಮುಂದಿನ ಜೀವನದಲ್ಲಿ ಹೇಗೆ ಹೊಂದುಕೊಳ್ಳುವುದು?
ಅವರ ಮನಸ್ಸು ನೋಯುತ್ತೆ ಎಂದು ಒಪ್ಪಿಕೊಂಡು
ಸಾಯೋವರೆಗೂ ಅತ್ತು ಅಳಿಸುವುದಕ್ಕಿಂತ ಕಿವಿಗೆ ಕಠಿಣ
ವಾದರೂ ನಿಷ್ಠುರವಾದ ಮಾತು ನುಡಿಯುವುದೇ
ಮೇಲು."

ಕೊನೆಗೆ ನಾಣಿ ನನಗೆ ಒಂದು ಸವಾಲುಹಾಕಿದ.

"ನೀನೇನು ಮಾಡುತ್ತಿಯೋ, ನೋಡದೆ ಹೋಗು
ತ್ತೀನೆಯೋ."

ಉತ್ಸಾಹದಲ್ಲಿ ನಾನೆಂದೆ—"ನಾನು ಇಂಥಾ ಇಂಟರ್
ವ್ಯೂ ನಡೆಸಿದಾಗ ಯಾರ ಮನಸ್ಸಿಗೂ ನೋವು ಕೊಡು
ವುದಿಲ್ಲ. ಮೊದಲು ಬಂದ ಹೆಣ್ಣನ್ನು ಮದುವೆಯಾಗು
ತ್ತೇನೆ"

ಮೇಲೆ ನೋಡಿದೆ, ಸೂರ್ಯ ತೆಂಗಿನ ಗರಿಗಳ
ನಡುವೆ ಕಾಣಿಸಿಕೊಂಡ; ಪ್ರತ್ಯಕ್ಷನಾಗಿ ತನ್ನ ಕಿರಣ
ಗಳಿಂದ ನನ್ನನ್ನು ಆಶೀರ್ವದಿಸುವಂತೆ.

ಮನೆಗೆ ಬಂದೆ. ವಿಚಾರ ತರಂಗಗಳು ಮನದಲ್ಲಿ
ಸುಳಿಸುಳಿಯಾಗಿ ಸುಳಿದವು. ನಾನು ಮಾಡಿದ ಪ್ರತಿಜ್ಞೆ
ಸರಿಯೇ? ಎಂದು ಚಿಂತಿಸಿದೆ.

ಹೆಣ್ಣಿಗೆ ಗಂಡು; ಗಂಡಿಗೆ ಕೆಲಸ. ಹೆಣ್ಣಿಗೆ ತಕ್ಕ
ಗಂಡು; ಗಂಡಿಗೆ ಯೋಗ್ಯ ಉದ್ಯೋಗ ಇವೆರಡರಲ್ಲಿ
ಭಗೀರಥ ಪ್ರಯತ್ನಕ್ಕಿಂತ ಸ್ವಲ್ಪವಾದರೂ ಸುಲಭವಾ
ದದ್ದು ಯಾವುದು? ಗಂಡಿಗೆ ತಕ್ಕ ಕೆಲಸ! ಇಂಟರ್
ವ್ಯೂಗಳ ಕಾಟ!! ಮೂರು ಕೆಲಸಕ್ಕೆ ನೂರು ಜನಕ್ಕೆ
ಕರೆ! ತಮ್ಮ ದರ್ಪ ತೋರಿಸುವುದಕ್ಕೆ ಅಥವಾ ಬಂದವ
ರನ್ನು ನೋಡಿನಗುವುದಕ್ಕೋ! ಈ ಏರ್ಪಾಟು ಇರಬೇಕು
ಎನಿಸಿತು. ಅಲ್ಲಿ 'ಇಲ್ಲ' ಎನಿಸಿಕೊಂಡ ಗಂಡು ಹೆಣ್ಣು
ನೋಡಲು ಹೋದಾಗ 'ಬೇಡ' ಎಂದು ಸೇಡು ತೀರಿಸ
ಕೊಳ್ಳಬಾರದೇಕೆ? ಛೆ, ಇದೆಂಥಾ ನೀಚತನ!

"ನೂರು ರೂಪಾಯಿ ಕೊಟ್ಟರೆ ನಿಮಗೇ ಆರ್ಡರ್
ಕಳಿಸುತ್ತೇನೆ" "ಮೂರುಸಾವಿರಕೊಟ್ಟರೆ ನಿಮ್ಮ ಹುಡುಗಿ
ಯನ್ನೇ ಮದುವೆಯಾಗುತ್ತೇನೆ" —ಹಿಂದೆ ಎಂದೋ
ಎಲ್ಲೋ ಕೇಳಿದ್ದ ಮಾತುಗಳು ಮಾರ್ದನಿ ನುಡಿದುವು.
ಕರ್ಣ ಪಟಲದಲ್ಲಿ.

ಕೆಲಸಕೊಡುವ ಅಧಿಕಾರ, ಸಂಗಾತಿಯನ್ನು ಆರಿಸಿ
ಕೊಳ್ಳುವ ಅವಕಾಶ ಇರುವದರಿಂದ ಅಲ್ಲವೆ ಜನ ಅವರ
ಬಳಿಗೆ ಹೋಗುವುದು? ಈ ಇಂಟರ್‌ವ್ಯೂ —ದರ್ಶನ
ಗಳ ಹಾವಳಿ ತಪ್ಪುವುದೆಂದಿಗೆ? —ಪದ್ಧತಿಗೆ ಅನುಸರಿ
ಸುವ ಮಾತಾದರೆ ಅದು ಬೇರೆ ವಿಚಾರ ಹಾಗಲ್ಲದೆ ದುಡ್ಡು
ಕೊಟ್ಟ ಮಾತ್ರಕ್ಕೇ ಸೀಟು, ಕೆಲಸ, ಗಂಡು ಸಿಕ್ಕಿಬಿಟ್ಟು
—ದಡ್ಡತನ ನ್ಯಾಯವಾದೀತೆ?

ಮನಸ್ಸು ಸಮಾಧಾನ ಹೇಳಿತು. "ಅಧಿಕಾರ
ಬಂದಾಗ ಎಲ್ಲರೂ ಹಾಗೆಯೇ ಅದು ಸಹಜ"

"ನಾನು ಮಾತ್ರ ಹಾಗೆ ಮಾಡುವುದಿಲ್ಲ"–ಎಂದಿತು
ಒಳ ಮನಸ್ಸು

ನಾನೆಲ್ಲಿ ಆರಿಸುವ ಅಧಿಕಾರ ಎಲ್ಲಿ? "ನನಗೇ ನಗು
ಬಂತು

"ಏಕಾಗಬಾರದು? ಒಂದಲ್ಲ ಒಂದು ದಿನ ದೊಡ್ಡ
ಆಫೀಸರಾಗಬಹುದು. ಮುಂದಾಗುವುದನ್ನು ಕಂಡವರು
ಯಾರು?"

ಹೌದು. ಒಂದು ದಿನ ನಾಣಿ ಚೆನ್ನ ತಪ್ಪುತ್ತಾ ಹೇಳಿದ—"ಮುಂದಾಗುವುದನ್ನು ಕಂಡವರು ಯಾರು ? ನಿನಗೇನಪ್ಪ ಓದಿದ್ದೀಯ ; ಕೆಲಸಕ್ಕೇನು ಕೊರತೆ ? ಹೆಣ್ಣಿಗೇನು ಕೊರತೆ !"

ಹೌದು ನನಗೆ ಹೆಣ್ಣುಗಳಿಗೇನು ಕಡಿಮೆ ? ಹತ್ತಾರು ಮಂದಿ ಹೆಣ್ಣು ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಯಾರಾದರು ಒಬ್ಬರನ್ನಲ್ಲವೆ ಆರಿಸಬೇಕಾದದ್ದು !

ಎಲ್ಲರನ್ನು ನಾನೇ ಮದುವೆಮಾಡಿಕೊಳ್ಳಬಹುದಾಗಿದ್ದರೆ. ಎಷ್ಟು ಚೆನ್ನಾಗಿತ್ತು ! ಛೀ ಇದೆಂಥಾ ಹುಚ್ಚು ಕಲ್ಪನೆ ! ಒಮ್ಮೊಮ್ಮೆ ನಮ್ಮ ಆಫೀಸರ್ ಹೇಳುತ್ತಿದ್ದ ಮಾತು ಜ್ಞಾಪಕಕ್ಕೆ ಬಂತು—"ನೋಡಿ ರಾಜು, ನಿರುದ್ಯೋಗಸ್ಥರೆಲ್ಲರಿಗೂ ನಮ್ಮ ಆಫೀಸಿನಲ್ಲೇ ಕೆಲಸ ಕೊಡುವುದಕ್ಕೆ ಸಾಧ್ಯವಾದರೆ ಎಷ್ಟು ಚೆನ್ನಾಗಿರುತ್ತೆ !"— ಹೀಗೆನ್ನುತ್ತಿದ್ದ ಅವರ ಉದಾರತೆಗೆ ತಲೆಬಾಗಿದೆ.

ನಾಣಿಯ ಮುಂದೆ ಮಾಡಿದ ಪ್ರತಿಜ್ಞೆ ಸಾಧು ಎನಿಸಿತು. ಏನೇ ಆಗಲಿ ನಾನು ಮಾತ್ರ ಇಂಟರ್‌ವ್ಯೂನಲ್ಲಿ ಯಾವ ಹೆಣ್ಣಿನ ಮನಸನ್ನೂ ನೋಯಿಸುವುದಿಲ್ಲ. ಎಂದರೆ–ನೋಡಿದ ಮೊದಲ ಹೆಣ್ಣನ್ನೆ ಒಪ್ಪಿಕೊಳ್ಳತಕ್ಕದ್ದು ಇದೇ ನಿಶ್ಚಯ. ಹೀಗೆ ನಿಶ್ಚಯ ಮಾಡಿದೆ.

ಹೆಣ್ಣು ಅನುಕೂಲಳಾಗಿ ಇರದಿದ್ದರೆ ?—ಶಂಕೆ ತೋರಿತು.

ಆರಿಸಿ ಆರಿಸಿ ಒಪ್ಪಿಕೊಂಡ ಮಾತ್ರಕ್ಕೆ ಹೆಣ್ಣು ಅನುಕೂಲಳಾಗಿಯೇ ಇರುವ ಭರವಸೆಯನ್ನು ಕೊಡುವವರು ಯಾರು ?–ಮತ್ತೊಂದು ಶಂಕೆ.

ನನ್ನ ನಿಶ್ಚಯಕ್ಕೆ ಅಂತಿಮ ಗೆಲುವು ದೊರೆಯಿತು.

೩

ಮೊದಲು ನೋಡಿದ ಹೆಣ್ಣನ್ನೆ ಒಪ್ಪಿದೆ. 'ಚೀಪ್ ರೇಟ್ ಅಳಿಯ' ಎಂದು ನಾಣಿ ಹಾಸ್ಯಮಾಡಿದ.

'ಆಗಲೇಳು' ಎಂದೆ.

ಅದೇಕೋ ಹೆಣ್ಣನ್ನು ಇನ್ನೊಮ್ಮೆ ನೋಡಬೇಕು ಎನಿಸಿತು. ಉಚಿತವೆ ? ಎಂದು ಪ್ರಶ್ನಿಸಿಕೊಂಡೆ. ನನ್ನವಳನ್ನು ನಾನು ನೋಡುವುದರಲ್ಲಿ ತಪ್ಪೇನು? ಎಂದು ಸಮಾಧಾನ ಮಾಡಿಕೊಂಡೆ. ಆದರೆ ನೆಪ ಬೇಕಲ್ಲ.

ಅಂದು ನಾನು ಸರಿಯಾಗಿ ನೋಡಲಿಲ್ಲ" ... ಇನ್ನೊಮ್ಮೆ 'ಮರು-ದರ್ಶನಕ್ಕೆ' ಸಿದ್ಧವಾಯಿತು.

○ ○○ ○

ಮದುವೆಯಾದ ಕೆಲವು ದಿನಕ್ಕೆ ನನ್ನವಳಿ... ಕಾಗದ ಬಂತು. ನನ್ನನ್ನು ಮೆಚ್ಚಿಕೊಂಡು ಬರೆದಿ... ಹುದೆಂದು ಆತುರದಿಂದ ಓದಿದೆ.

....

"ಮೊದಲು ನೀವು ಒಪ್ಪಿದ ವಿಚಾರ ಅಪ್ಪಿ... 'ಆಗಲಿ' ಎಂದು ಹೇಳಿಬಿಟ್ಟದ್ದು ನಮ್ಮೆಲ್ಲರಿಗೂ ಅತ್ಯ... ಆನಂದವನ್ನು ನೀಡಿತು. ಭೂಮಿಯ ಮೇಲೆ ನಿಮ್ಮ... ವರೂ ಇದ್ದಾರೆ ಎಂದು ನಾನು ಆಶ್ಚರ್ಯಪಟ್ಟೆ. ಆದ...

ಆದರೆ ನೀವು 'ಸರಿಯಾಗಿ ನೋಡಿಲ್ಲ ಪುನಃ ನೋ... ಬೇಕು' ಎಂದು ಹೇಳಿ ಕಳಿಸಿದಾಗ ನನಗೆ ... ಬಂದಿತು. ಎಲ್ಲಿ ನೀವು ಎರಡನೆಯ ಬಾರಿ 'ಇಂಟ... ವ್ಯೂ' ನಡೆಸಿ ಬೇಡ ಎಂದು ಬಿಡುತ್ತೀರೊ ಎಂ... ಶಂಕಿಸಿದೆ. ನಾನು ಹೊರಗೆ ಬರಲು ಒಪ್ಪಲಿಲ್ಲ. ನ... ತಾಯಿ ಕಣ್ಣಲ್ಲಿ ನೀರು ಹಾಕಿಕೊಂಡು 'ಇನ್ನೊಂ... ಸಲ ಬಂದು ಬಿಡಮ್ಮ' ಎಂದರು. ತಂದೆಯ... 'ಎಲ್ಲ ಬಂದು ಕುಳಿತಿದ್ದಾರೆ, ನನಗೆ ಅವಮಾ... ಮಾಡಬೇಡಮ್ಮ' ಎಂದು ತಲೆಯನ್ನು ನೇವರಿಸಿದ... ಹೇಗೊ ದೇವರ ಮೇಲೆ ಭಾರ ಹಾಕಿ ಹೊರಗೆ ಬ... ನಿಮ್ಮ ಮುಂದೆ ಕುಳಿತೆ.

ನನಗೆ ನಿಮ್ಮ ಮರುದರ್ಶನದ ಉದ್ದೇಶ ಮೊದ... ತಿಳಿದಿದ್ದರೆ ನಾವು ಮೂವರು ದುಃಖದಿಂದ ಕಂಗೆಡ ಬೇ... ಗಿರಲಿಲ್ಲ. ಅಂತೂ ಸೂರ್ಯನಾರಾಯಣನ ಆಶೀವಾ... ದಿಂದ ಎಲ್ಲ ಒಳ್ಳೆಯದೇ ಆಯಿತಲ್ಲ...........

ಕಾಗದ ಓದಿಮುಗಿಸಿದೆ. ಕೊನೆಗೂ ನಾ... ಒಮ್ಮೆ ಅಲ್ಲ ಎರಡು ಬಾರಿ ಇಂಟರ್‌ವ್ಯೂ ನ... ಒಂದಲ್ಲ ಮೂರು ಜೀವವನ್ನು ಅಳಿಸಿದ್ದೆ.

ಆದರೂ 'ಕೃತಿಯ ಸಾಧನೆಗಿಂತ ಉದ್ದೇಶ ಮುಖ್ಯ' ಎಂದು ನಮ್ಮ ಗುರುಗಳು ಹೇಳುತ್ತಿದ್ದುದನ್ನು ಜ್ಞಾ... ಸಮಾಧಾನ ತಂದುಕೊಂಡೆ.

(ಆಕಾಶವಾಣಿಯಲ್ಲಿ ಪ್ರಸಾರಿತವಾದದ್ದು)



ಸಿದ್ಧಗಂಗಾ ಮಾತೆಯೇ

ಓ ಸಿದ್ಧ ಗಂಗಾ ಮಾತೆಯೇ ಪಾಪಹರಣ ನಿಧಿಯೇ
ತ್ರಿವಿಧ ದಾಸೋಹದರಮನೆಯೇ ವಿದ್ಯೆಯರಮನೆಯೇ ;
ಶಿಲ್ಪ ಸೃಷ್ಟಿಯಿಂ ಗುಡ್ಡ ರಾಶಿಮಧ್ಯದಲಿ,
ಭಕ್ತಿಯಿಂ ನಿರ್ಮಿಸಿದವರಾರು ಘನತರದಿ,
ಮಠವಲ್ಲ ಕಲ್ಯಾಣ ಪಟ್ಟಣವೆಂಬುವನೊಬ್ಬ,
ಕಲ್ಯಾಣವಲ್ಲ ದಾಸೋಹಗಳ ನೆಲೆಯೆಂಬ ಮತ್ತೊಬ್ಬ.
ಓ ಸಿದ್ಧಗಂಗಾ ಸಿದ್ಧಲಿಂಗೇಶ್ವರರೇ,
ಸಿದ್ಧೇಶ್ವರ ಸೃಷ್ಟಿಯು ಹೊಳೆವ ಜ್ಞಾನ ಕೇಂದ್ರವೇ,
ನಿನ್ನಂದ ನೋಡಿ ತೃಪ್ತಿ ಪಡದವರಾರು,
ದಾಸೋಹವ ನೋಡಿ ನರ್ತಿಸದವರಾರು,
ಎತ್ತನೋಡಿದಡತ್ತ ಶಿವಕುಮಾರನಿಹನು,
ಸರ್ವವೂ ಶೂನ್ಯವೆಂದುಪದೇಶಿಸುವನು,
ಅಟವಿ ಸಿದ್ಧರಿದ್ದ ಗವಿಯುಲ್ಲನಿಂದೆಂದು,
ನಿರ್ಣಯ ಮಾಡಿಹುದು ಕ್ಷಿತಿಯ ಹುಸಿಯೆಂದು.
ನೂರನೇಲೆ ನಾಲ್ವತ್ತೆಂಟು ಮೆಟ್ಟಿಲೊಳು,
ಪಾಪವನು ಛಿದ್ರಿಸುವ ಮಾತೆಯಿಹಳು ;
ಓ ಗುರು ಸಿದ್ಧಲಿಂಗಾ ! ಪಕ್ಕದಲೆ ಇರುವೆಯಾ
ಇದ್ದರೇಕೆ ಎಮ್ಮೊಳು ನಿರ್ದಯೆಯು,
ಗುರು ಸಿದ್ಧಲಿಂಗ ಯತಿಯು ಕುಳಿತಿರುವನಲ್ಲಿ ;
ಸರಸತಿಯು ಸಿರಿಯ ಮಗನಿಹನು ಇಲ್ಲಿ ;
ಅಟವಿ ಸಿದ್ಧ, ಉದ್ದಾನರು ಕಂಗೊಳಿಪರಿಲ್ಲಿ ;
ಭಕುತರಿಗೆ ಭಕ್ತಬೋಧೆಯಿಹುದಿಲ್ಲಿ ;
ವರಶ್ರೀಗುರು ಶಿವಕುಮರರಿಲ್ಲಿ ಕುಳಿತಿಹರು,
ನಗುಮುಖದಿ ಜಗಕುಪದೇಶವ ಮಾಡುವರು,
ಕೆತ್ತಿಹನು ಮನದೊಳು ಕೈಲಾಸವನು,
ಸಾಧಿಸಿರಿ ಕಾಯಕವ ಎಂದುಪದೇಶಿಸುವನು,
ಉದ್ದಾನ ಯತಿವರನ ಗದ್ದಿಗೆಯೊಂದಿಹುದು,

ಸಾಜದಿಂ ಜನಕೆ ಭಕ್ತಿಯನು ಬೋಧಿಪುದು.
ಎಲ್ಲ ಭಕ್ತರಿಗೆ ಜಲವೊಂದಿಹುದು,
ಪಾಪಿಗಳಿಗದೇ ಪುಣ್ಯತೀರ್ಥವಹುದು,
ದೇಶದೇಶದ ಜನರು ದಿನ ದಿನ ಬರುತಿಹರು,
ದಾಸೋಹದ ನೆಲೆನೋಡಿ ಅಚ್ಚರಿಪಡುತಿಹರು,
ಭಕ್ತರೇ ಕಟ್ಟಿಹರು ಧನ್ಯರೀ ಕ್ಷೇತ್ರವ
ಭಕ್ತಿಯಲಿ ಧ್ಯಾನಿಸರು ಸಿದ್ಧಲಿಂಗ ಯತಿಯ
ಇದ ನೋಡಿದ ಮನವೇ ಪುಣ್ಯಶಾಲಿ,
ಇಲ್ಲಿ ಮಿಂದ ತನುವೇ ಭಾಗ್ಯಶಾಲಿ ;
ಗುಂಡುಗಳ ಮಧ್ಯದಲಿ ಲಿಪಿಯೊಂದಿಹುದು
ಧರೆಯೊಳ್ "ಕಾಯಕವೇ ಕೈಲಾಸವೆ"ಂದು ಸಾರುತಿಹುದು ;
ಓ ಸಿದ್ಧಗಂಗಾ ಮಾತೆಯೇ ಪಾಪಹರಣನಿಧಿಯೇ ;
ಲೋಕದ ಧರ್ಮದ ಮಾತೆಯೇ ಜ್ಞಾನದರಮನೆಯೇ !

—o—o—

ಮಾನವರು

ಜೀವನದ ಗುರಿಯೇನು? ಎಂಬುದನು ತಿಳಿಯದಿಹರಿವರು.
ಲೋಕದಾಮೋಹದಲಿ ಸುಖಕಾಗಿ ತೊಳಲಾಡುತಿಹರು.
ಇಹವೆಂಬ ಬಲೆಯಲ್ಲಿ ಸಿಲುಕಾಡಿ ಹೊಡೆದಾಡುತಿಹರು
ಪಾರಮ್ಯ-ಪಾವನತೆಯೆಲ್ಲವನು ಮರೆವ ಮಾನವರು.

ಹುಳುಕಡ್ಡಿಗಳ ರೀತಿ ಬಿದ್ದೆದ್ದು ಹಾರುವರು ಇವರು
ಗಾಳಿಯದು ಬೀಸುತಿಹ ದಿಕ್ಕಿನಲಿ ತೂರುವರು ಇವರು
ಇಹದಿಂದ ಮುಕ್ತಿಯಿಹುದೆಂಬುದನು ನಂಬದಿಹರಿವರು
ಜೀವನದ ದೋಣಿಯಲಿ ತೇಲುವರು ಮತ್ತೆ ಮುಳುಗುವರು.

ಮಾನವನ ಜೀವನವು ಮುಕ್ತಿಪಥವೆಂದರಿಯದಿಹರು.
ಸಾಧನೆಯು ಮುಕ್ತಿಯೆಡೆ ತೋರ್ವುದೆಂಬುದ ನಂಬದಿಹರು
ಸಫಲತೆಯ ಸಾಧನೆಗೆ ಶ್ರಮ ಪಡದೆ ಮರುಳರಾಗಿಹರು
ದೈವತ್ವ-ಸಾಧನೆಯು ಶಾಶ್ವತದ ಸುಖವೀವುದನರಿಯದಿಹರು.

—ರವಿಕಿರಣ

ಶ್ರೀ ಸಿದ್ಧಗಂಗಾ ಮಠಾಧೀಶ ಶ್ರೀಮನ್ನಿರಂಜನ ಪ್ರಣವಸ್ವರೂಪಿ

ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ

ರಜತಮಹೋತ್ಸವದ ಸಿದ್ಧತೆಗಾಗಿ ನೆರೆದ ಭಕ್ತಜನರ ಮಹಾಸಭೆಯಲ್ಲಿ ಪಠಿಸಿದ

—: ಪದ್ಯಕುಸುಮ ಮಾಲಿಕೆ :—

ಮಂಗಳಾಂಗ ನಿರಂಗ ಸಂಗವರ್ಜಿತ ಸರ್ವ
ಮಂಗಳಕ್ಕಧಿನಾಥ, ಲಿಂಗಸ್ವರೂಪನೇ
ತುಂಗಗುಣ, ಪರಮಕರುಣಾಪಾಂಗ ಶರಣಜನ ಹೃದಯ ಸರಸಿರುಹ ಭೃಂಗ
ಜಂಗಮಾಗ್ರಣಿಯೆ ವರಚಿತ್ಸುಧಾಭರಿತಾಂತ
ರಂಗ ದುರಿತ ವಿಭಂಗ ತೋಂಟಾದಾ ಗುರುಸಿದ್ಧ
ಲಿಂಗೇಶ ಸಿದ್ಧಗಂಗಾನಿಲಯ ರಕ್ಷಿಸುಗೆ ಸರ್ವರಂ ಕಾರುಣ್ಯದಿಂ

ಶ್ರೀ ಸಿದ್ಧಗಂಗಾ ಶಿವಕ್ಷೇತ್ರದಲಿ ನೆರೆಯು
ತೀಸಮಾರಂಭಕ್ಕೆ ಶೋಭೆಯಂ ಬೀರುತ್ತ
ಲೀಸಭಾಮಲಯಮಂ ತೊಳಗಿ ಬೆಳಗಿಸುತಿರುವ ಸದ್ಭಕ್ತ ಸಂದೋಹವೇ
ಲೇಸಿನಿಂದಧ್ಯಕ್ಷತಾ ಪೀಠವನು ವಹಿಸಿ
ಭಾಸಿಸುವ ವರಸಚಿವ ವೀರೇಂದ್ರ ಪಾಟೀಲ
ರೇ, ಶರಣಮಾರ್ಗಿಗಳೆ ತಮ್ಮೆಲ್ಲರಿಗು ಪರಮಹಾರ್ದಿಕಂ ಸುಸ್ವಾಗತಂ

ಧರೆಗೆ ದಕ್ಷಿಣಕಾಶಿಯೆಂದು ಪೆಸರಂ ಪಡೆದು
ಮೆರೆಯುತಿಹ ಸ ಕ್ಷೇತ್ರವಿದು ತಾಂ ಪುರಾತನಂ
ಹರಭಕ್ತ ಗೌತಮಂ ತಪವನಾಚರಿಸುತ್ತ ಗೋವಧೆಯ ದೋಷಮಂ ಕಳೆದನಿಲ್ಲಿ
ಗುರುಗೋಸಲಾಸಿದ್ಧ ತಪವೆಸಗಿ ಜನರನು
ದ್ಧರಿಸಲ್ಕೆ ದೇವಗಂಗೆಯು ಬರಿಸಿದಂ ತನ್ನ
ವರ ಮಹಿಮೆಯಿಂದಲದುಕಾರಣದೊಳೀಕ್ಷೇತ್ರ ಸಿದ್ಧಗಂಗಾಭಿಧಾನಂ

ಗುರುಸಿದ್ಧಲಿಂಗದೇಶಿಕ, ಚನ್ನಬಸವೇಶ,
ಶರಣಜನವಂದ್ಯನಟವೀಂದ್ರ ಯೋಗೀಂದ್ರ,
ವರತಪೋನಿಧಿ ಭಕ್ತಜನಕಾಮಧೇನೆನಿಪುದಾನ ಯೋಗಿವರನು
ನಿರುಪಮಿತರಜ ಮಹಾಮಹಿಮರಿವರೆಲ್ಲರುಂ
ಪರತರದ ತಪವೆಸಗಿದಾ ಪುಣ್ಯರಾಶಿಯೇ
ಕರಮೆಸೆವ ಸಿದ್ಧಗಿರಿಯೆನಿಸಿ ನಿಂತಿಹುದವರ ಧವಲ ಕೀರ್ತಿಯ ಸಾರುತೆ

ಅಟವೀಶಗುರುವರಂ ಮೋಕ್ಷಲಕ್ಷ್ಮೀವರಂ
ಸಕಲಜೀವದಲೇಸ ಬಯಸುವ ದಯಾಪರಂ
ಆತನಿಂದೀ ಪುಣ್ಯಭೂಮಿಯೊಳಗನವರತ
ಪೂತವೇದದ ಘೋಷ ಮೊಳಗಿತ್ತೈ ದನಿಗೊಡುತ
ವಾಣಿ ಗೀರ್ವಾಣಿಯುಡಿಯಿಟ್ಟಳೀ ಕ್ಷೇತ್ರಕ್ಕೆ
ಪಾಠಶಾಲೆಯದೊಂದು ತೆರೆದುದೈ ಛಾತ್ರಕ್ಕೆ

ಅವನಕರಕಂಜಾತನುದ್ದಾನಯತಿವರಂ
ಭುವನಜನ ಸಂಸ್ತುತಂ ವಿಪುಲ ಮಹಿಮಾಶ್ರಯಂ
ಪರುಷಮಣಿ ಲೋಹವನು ಸೋಂಕಿದಾಗಳಿಗೆಯೊಳು
ವರಸುವರ್ಣಮದಪ್ಪ ಪರಿಯಿಂದಲವನಕರ
ಸ್ಪರುಶಮಾತ್ರದೆ ಜನಂ ರೋಗಬಾಧೆಯನುಳಿದು
ಹರುಷಮಂ ಪಡೆಯುತಿರ್ದರು. ಭವದ ಬಾಧೆಯನು

ಹರಿಸಿ ಭಕ್ತರಿಗೆಲ್ಲ ಸದ್ಗತಿಯನಿತ್ತನವ
ಕೊಟ್ಟದ್ದು ವರವಾಯ್ತು ಮುಟ್ಟದ್ದು ಮರವಾಯ್ತು
ಮೆಟ್ಟಿದ್ದು ಚಿರವಾಯ್ತು ಬಿಟ್ಟದ್ದು ಬೀಳಾಯ್ತು
ವಿದ್ಯೆಯನು ಕಲಿಯುತಿಹ ಛಾತ್ರವರ್ಗಕ್ಕೆಂದು
ವಿದ್ಯಾರ್ಥಿ ನಿಲಯಮಂ ಪ್ರಾರಂಭಿಸಿದನಂದು

ಸಿದ್ಧಲಿಂಗನ ಸುಪ್ರಸಿದ್ಧವಾಗಿಹ ಜಾತ್ರೆ
ಗುದ್ದಾನಯತಿವರನೆ ತಾನಾದ್ಯನಾಗಿಹಂ
ಎಡೆವಿಡದೆ ದಾಸೋಹ ಕಾರ್ಯಮಂ ನಡೆಸಿದಂ
ಕಡೆತನಕವೂ ಜ್ಞಾನದಾಸೋಹ ಮಾಡಿದಂ

ಅವನ ಬಳಿಕಾಶಿವನೆಧರೆಗವತರಿಸಿಬಂದ
ಬರುವಂದು ಮರ್ತ್ಯಕ್ಕೆ ಮಹವನಿಳಿಸುತೆ ತಂದ
ಶ್ರೀ ನಿರಂಜನ ಶಿವಕುಮಾರ ಗುರುವೆನ್ನುವಭಿ
ಧಾನದಿಂದೀಕ್ಷೇತ್ರಪತಿಯಾಗಿ ತಾ ನಿಂದ
ಇವ ಪರಮಶಿವಯೋಗಿ ಶಿವಸತ್ಸುಖದ ಭೋಗಿ
ನಡೆನುಡಿಯೊಳೊಂದಾಗಿ ನಡೆಯುತಿಹ ಸುವಿರಾಗಿ
ಅನುಭಾವವದುಮಾಗಿಯಿದ್ದಿಹುದು ಹಣ್ಣಾಗಿ
ಸರ್ವರೊಳಗನುರಾಗಿಯಂತೆಯೇ ಮಾಚಾಗಿ
ತಾನುತನ್ನವರೆಂಬ ಬಡವಬಲ್ಲಿದರೆಂಬ
ಉಚ್ಚನೀಚವದೆಂಬ ಜಾತಿವರ್ಣಗಳೆಂಬ
ತಾರತಮ್ಯವನುಳಿದು, ಲೋಕಸೇವೆಯೆ ಶಿವನ

ಸೇವೆಯೆಂಬುವ ಭಾವದಿಂ ನಡೆವ ಧನ್ಯಾತ್ಮ
ಎನಿತವನ ತೇಜಸ್ಸು ! ಎನಿತವನ ಓಜಸ್ಸು !
ಎನಿತವನ ದಾಸೋಹ ಭಾವದಾ ಹುಮ್ಮಸ್ಸು !
ಜನ ನೆರೆದು ಉಂಡಷ್ಟು ತಣಿಯುದಿವನ ಮನಸ್ಸು
ಜನದ ತೃಪ್ತಿಯು ಕಂಡು ನಲಿವುದಿವನ ತಪಸ್ಸು

ಶಕ್ತಿಯುಂ ಯುಕ್ತನಾದಾಗಲೇ ಪರಶಿವಂ
ಶಕ್ತನಾಗುವನೆಂತೊ ಸೃಷ್ಟಿಕಾರ್ಯಕ್ಕಂತೆ
ಶ್ರೀ ಶಿವಕುಮಾರಗುರುವರನ ದಿವ್ಯಜ್ಞಾನ
ಕಸಮಕ್ರಿಯಾಶಕ್ತಿಯಿರದೆ ತಾ ಮೇಳವಿಸಿ
ಸೃಜನಾತ್ಮಕದ ಮಹಾಶಕ್ತಿಯುದ್ಭವವಾಯ್ತು
ಋಜುತೆಗಾ ಕ್ರತುಶಕ್ತಿ ಬಿಡದೆ ತಲೆವಾಗಿಸಿತು
ಸಿದ್ಧಗಂಗೆಯು ಸಕಲ ವಿದ್ಯೆಗಳ ತವರಾಗಿ
ಉದ್ಧಾರವಾಗುತಿದೆ ಜನಕೋಟಿ ಋಣಿಯಾಗಿ.

ಶರಣರೀಭೂಮಿಯೊಳಗೆಸಗಿದ ತಪಃಫಲವೊ !
ನೆರಭಕ್ತಜನಗೈದ ಭೂರಿಪುಣ್ಯದ ಫಲವೊ !
ವೀರಶೈವದ ತತ್ತ್ವ ಸಾಕಾರಮಾಯಿತೊ !
ಸಾರತರ ಕಾಯಕವೆಯದು ರೂಪುಗೊಂಡಿತೊ !
ಎಂಬುವೊಲು ಮೆರೆವನೀ ಪರಮಜಂಗಮಮೂರ್ತಿ !
ತುಂಬಿ ತುಳುಕಿತು ಪೀಠಕಿವನಿಂದ ಸತ್ಕೀರ್ತಿ !


ಈ ತೆರದಿ ನಮಗಾಗಿ ನಾಡಿನೇಳಿಗೆಗಾಗಿ
ಸಾತಿಶಯದಲಿ ತನ್ನ ತನುಮನಧನಂಗಳನು
ಮುಡಿಪಿಡುತೆ ದುಡಿವ "ಗುರುದೇವ"ನೀಪೀಠವ
ನ್ನಡರುತಿಪ್ಪತ್ತೈದು ವರುಷಗಳು ಕಳೆದಿಹವು

ಭಕುತಸಮುದಾಯ ಬೆಳ್ಳಿಹಬ್ಬದ ಮಹೋತ್ಸವವ
ಭಕುತಿಯಿಂದಾಚರಿಸೆ ತವೆ ತವಕಪಡುತಿಹುದು ;
ವೇದ ಮೇಣ್ ಸಂಸ್ಕೃತಮಹಾಪಾಠಶಾಲೆಯುಂ
ಓದುತಿಹ ಬಾಲಕರ ವಿದ್ಯಾರ್ಥಿನಿಲಯಮುಂ
ನೆಲೆಗೊಂಡು ವರುಷವೈವತ್ತನ್ನು ದಾಂಟಿಹವು
ಸಲೆ ಜನತೆಗಾಗಿ ತಮ್ಮಯ ಸೇವೆಗೈದಿಹವು ;
ಇವರ ಸವಿನೆನಪಿನಾ ಸೌವರ್ಣವ ಸುಮಹೋ
ತ್ಸವನನಾಚರಿಸಲು ಸಂಕಲ್ಪಗೈದಿಹುದು

ಸಿದ್ಧಲಿಂಗನ ಮಯಮೋಳೀಯುತ್ತಲಿಪ ಸಕಲ
ಸಿದ್ಧತೆಯು ವೈಭವದಿ ಜರುಗಲೆಂದಾಶಿಸುವೆ
ಇದಕಾಗಿ ಕರೆಯ ಮನ್ನಿಸಿ ಬಂದ ತಮಗೆಲ್ಲ
ಮುದದಿಂದ ಮತ್ತೊಮ್ಮೆ ಸ್ವಾಗತವ ಬಯಸುವೆ.

ಮಂಗಳಂ ಶ್ರೀ ಸಿದ್ಧಲಿಂಗಗೆ
ಮಂಗಳಂ ಅಟವೀಂದ್ರಯೋಗಿಗೆ
ಮಂಗಳದ ಮನೆಯಾಗಿ ಮೆರೆವ ಜ್ಞಾನ ಯತಿವರಗೆ
ಮಂಗಳಂ ಕಾಯಕದ ತಪವೇ
ಮಂಗಳಂ ಶುಭಮೊಂದು ಬಗೆದಿಹ
ಮಂಗಳವೆ ತಾನಾಗಿ ಬೆಳಗುವ ಶಿವಕುಮಾರನಿಗೆ.

ಪಂ॥ ಹೆಚ್. ಎಸ್. ರಾಮಾರಾಧ್ಯ



ಅಂಧತೆ

ಬೆಂ. ಗು. ಚಂದ್ರಶೇಖರ

ಎರಡು ದುಡಿಯುವುದು ಗೇಣುದ್ದ ಹೊಟ್ಟೆಗಾಗಿ ಜೋಟುದ್ದ ಬಟ್ಟೆಗಾಗಿ ಎಂಬ ನಾಣ್ಣುಡಿ ಇಡೀ ಮಾನವ ಕೋಟಿಗೆ ತಿಳಿದ ವಿಷಯುವೇ ಸರಿ. ದಿನ—ನಿತ್ಯದ ಕಾರ್ಯಕ್ರಮಗಳಿಗೆ ಲೋಪ ಬರದಂತೆ ಕಾರ್ಯಚತುರರಾಗಲು ಪಂಚೇಂದ್ರಿಯಗಳ ಆವಶ್ಯಕತೆಯುಂಟೆಂದು ಹೇಳಬೇಕಾಗಿಲ್ಲ. ಈ ಪಂಚೇಂದ್ರಿಯಗಳಾದ ಕಣ್ಣು, ಮೂಗು, ಕಿವಿ, ನಾಲಗೆ ಮತ್ತು ಚರ್ಮಗಳಲ್ಲಿ ಕಣ್ಣು ಅತಿಮುಖ್ಯವಾದುದು. ಇದು ಮುಖಕ್ಕೆ ಕಾಂತಿಯನ್ನು ಕೊಡುವುದಲ್ಲದೆ ಸೃಷ್ಟಿ—ವೈಚಿತ್ರ್ಯಗಳ ಸೊಬಗನ್ನು ಎತ್ತಿ ತೋರಿಸುತ್ತ ಮಾನವನಿಗೊದಗಬಹುದಾದ ಅಪಘಾತದಿಂದ ತಪ್ಪಿಸುವ ಮುಖ್ಯಾಂಗವಾಗಿದೆ, ನಳಿನಾಕ್ಷಿ, ವಿಶಾಲಾಕ್ಷಿ, ಮುಕ್ಕಣ್ಣ, ಕಿರುಗಣ್ಣ ಇವೇ ಮೊದಲಾದ ನಾಮಕರಣಗಳನ್ನು ಮಾಡಲು ಕಣ್ಣು ಪುರೋಹಿತನ ಪಾತ್ರ ವಹಿಸುತ್ತದೆ. ಇಂತಹ ಶ್ರೇಷ್ಠವಾದ ಕಣ್ಣಿನ ಆವಶ್ಯಕತೆಯನ್ನು ಮತ್ತು ಅದು ಹಾಳಾಗದಂತೆ ಕಾಪಾಡಿಕೊಳ್ಳುವ ಮಾರ್ಗಗಳನ್ನು ಅರಿತುಕೊಳ್ಳಬೇಕಾದುದು ಅತ್ಯಗತ್ಯ.

ಕಣ್ಣು ಕಾಣದವರಿಗೆ ಕುರುಡರು ಅಥವ ಅಂಧರು ಎಂದು ಕರೆಯುವುದು ಸಾಮಾನ್ಯ ಬಳಕೆಯಲ್ಲಿದೆ.

ನಿರೂಪಣೆ:—ಬೆಳಕಿನ ಗ್ರಹಣ ಶಕ್ತಿಯು ನಾಶವಾದ ಕಣ್ಣಿನ ಗುಣಕ್ಕೆ ಅಂಧತೆ (Blindness) ಎನ್ನುತ್ತೇವೆ. ನಯನಶಾಸ್ತ್ರದ ಆಧಾರದ ಮೇಲೆ ನಿರೂಪಿಸುವುದಾದರೆ ದೃಷ್ಟಿಯ ಶಕ್ತಿಯು ಇದ್ದು ಹತ್ತಿರದ ಕೆಲಸಗಳನ್ನು ಸಹ ಮಾಡಲು ಅಸಾಧ್ಯವಾದಷ್ಟು ದೃಷ್ಟಿಹಾಳಾಗುವುದಕ್ಕೆ ಅಂಧತೆ ಎಂದು ಹೆಸರು.

ಬೆಳಕಿನ ಪ್ರಸರಣೆ :—ಬೆಳಕು ಸರಳರೇಖೆಯಲ್ಲಿ ಪ್ರಸರಿಸುವುದೆಂದು ಎಲ್ಲರಿಗೂ ತಿಳಿದಿದೆ. ಅದು ಕಣ್ಣಿನ ಮೂಲಕ ಹಾದು ಹೋಗುವಾಗ ಪಾರದರ್ಶಕವಾದ ಕರ್ನಿಕೆಯ (ಕರಿಯ ಗುಡ್ಡೆ, ಕಣ್ಣಾಲಿ, cornea) ಮೂಲಕ ಹಾದು ಹೋಗಬಲ್ಲುದೇ ಹೊರತು ಅಪಾರದರ್ಶಕವಾದ ಬಿಳಿಯ ಗುಡ್ಡೆ (Sclera) ಯ ಮೂಲಕ ಹಾದು ಹೋಗಾರದು. ಕರಿಯ ಗುಡ್ಡೆಯ ಮುಂಭಾಗದಲ್ಲಿ ಸ್ವಲ್ಪ ಉಬ್ಬಿರುವುದರಿಂದ ಬೆಳಕು ಹಾದು ಹೋಗುವಾಗ ತುಸು ಬಾಗುತ್ತದೆ ನಂತರ ಬೆಳಕು ಪಾಪೆಯ (pupil) ಮೂಲಕ ಹಾದು ಕಣ್ಮಣಿಯಲ್ಲಿ (Lens)ಪ್ರಸರಿಸಿ ಶಿಲಾಧಾತುವಿನ ಮೂಲಕ ಅಕ್ಷಿಪಟದ ಮೇಲೆ ಬೀಳುತ್ತದೆ. ಇದು ಮೊದಲನೆಯ ಹಂತ. ಎರಡನೆಯ ಹಂತದಲ್ಲಿ ಕಿರಣಗಳು ದೃಷ್ಟಿ ನರದ ಮೂಲಕ ದೃಷ್ಟಿ ಸಂಧಾನವನ್ನು ಸೇರುತ್ತದೆ. (Optic chiasma) ಇಲ್ಲಿಂದ ಕಿರಣಗಳು ದೃಷ್ಟಿವಹಿ (Optic Tract) ಯನ್ನು ಸೇರಿ ಕಿರಣಸಮೂಹರೇಖೆಗಳಾಗಿ ಮೆದುಳಿನ ದೃಷ್ಟಿಕೇಂದ್ರವಾದ ಹದಿನೇಳನೆಯ ಮಂಡಲವನ್ನು (area No. 17) ಸೇರುತ್ತದೆ. ಆಗ ಬೆಳಕಿನ ಸ್ವರೂಪ ಮತ್ತು ಬಾಹ್ಯ ಚಿತ್ರಗಳ ಸ್ವರೂಪವು ನಮಗುಂಟಾಗುತ್ತದೆ.

ಅಂಧತೆಯು ಪ್ರಾಪ್ತವಾಗುವ ವಿಧಾನ :—ಮೇಲೆ ಹೇಳಿರುವ ವಿವಿಧ ಹಂತಗಳಲ್ಲಿ ಬೆಳಕು ಪ್ರಸರಿಸುವಾಗ ಯಾವ ಹಂತದಲ್ಲಿ ಅಡಚಣೆಯಾದರೂ ಅಂಧತೆ ಪ್ರಾಪ್ತವಾಗುತ್ತದೆ.

ಘಟನೆಗಳು :— ಭಾರತದ ಜನಸಂಖ್ಯೆಯಲ್ಲಿ ಶೇ. 0·3 ರಷ್ಟು ಅಂದರೆ ಸುಮಾರು ಇಪ್ಪತ್ತು ಲಕ್ಷ ಕುರುಡರಿದ್ದಾರೆ. ಆರ್ಥಿಕ ದೃಷ್ಟಿಯಿಂದ ಯೋಚಿಸುವುದಾದರೆ ಒಬ್ಬರಿಗೆ ಕೇವಲ ದಿನಕ್ಕೆ ಎರಡು ರೂಪಾಯಿಗಳಾದರೂ ಸರ್ಕಾರದ ಖಜಾನೆಯಿಂದ ದಿನಕ್ಕೆ ನಲವತ್ತು ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುತ್ತಿದೆ. ಹಾಗೆ ಬಿಟ್ಟಲ್ಲಿ ಅಂಧರ ಸಂಖ್ಯೆ ಅಧಿಕವಾಗಿ, ಆರ್ಥಿಕ ಸ್ಥಿತಿ ಸಡಿಲವಾಗಿ ದೇಶದ ಗತಿ ಅಧೋಗತಿಯಾಗುತ್ತದೆ. ಆದಕಾರಣ ಅಂಧತೆಯ ಕಾರಣಗಳನ್ನು ಮತ್ತು ಅದರ ಪ್ರತಿ ಬಂಧಕಗಳನ್ನು ತಿಳಿದು ಕೊಳ್ಳುವುದು ಅತ್ಯಾವಶ್ಯಕ.

ಪ. ಅಮೇರಿಕ, ಆಸ್ಟ್ರೇಲಿಯ, ಯೂರೋಪಿನ ಪಶ್ಚಿಮ ಭಾಗ, ಆಫ್ರಿಕ ಮತ್ತು ಏಷ್ಯಖಂಡಗಳಲ್ಲಿ ಪ್ರತಿ ಲಕ್ಷ ಜನಕ್ಕೆ 200 ಮಂದಿಯೂ; ಭಾರತ, ಜಪಾನ್ ಮತ್ತು ಯೂರೋಪಿನ ಪೂರ್ವಭಾಗಗಳಲ್ಲಿ ಪ್ರತಿ ಲಕ್ಷಕ್ಕೆ 400 ಮಂದಿಯಂತೆಯೂ ; ಉ. ಆಫ್ರಿಕಾದಲ್ಲಿ ಪ್ರತಿ ಲಕ್ಷಕ್ಕೆ 800 ಮಂದಿಯಂತೆಯೂ ಕುರುಡರಿದ್ದಾರೆ.

ವಿಧಗಳು:—"ಕಣ್ಣು ಇದ್ದು ಕುರುಡರೆಷ್ಟೋ ಮಣ್ಣು ಹಿಡಿದ ಕಲ್ಲುಹಿಡಿದ" ಎಂಬಂತೆ ಆಧ್ಯಾತ್ಮಿಕ ದೃಷ್ಟಿಯಿಂದ ಅಂಧತೆಯನ್ನು ಆಂತರಿಕ ಮತ್ತು ಬಾಹ್ಯ ಅಂಧತೆ ಎಂದು ಎರಡು ಗುಂಪುಗಳಾಗಿ ವಿಂಗಡಿಸಿದರೆ, ವೈಜ್ಞಾನಿಕ ದೃಷ್ಟಿಯಿಂದಲೂ ಬೆಳಕು ಮತ್ತು ವರ್ಣ ಅಂಧತೆ(Colour Blindness) ಎಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು.

ಕಾರಣಗಳು ಮತ್ತು ಪ್ರತಿಬಂಧಕಗಳು:— ಬೆಳಕಿನ ಪ್ರಸಾರದ ವಿವಿಧ ಅಂಗಗಳ ಅಡಚಣೆಯ ಆಧಾರದ ಮೇಲೆ ಕಾರಣಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಪ್ರತಿಬಂಧಕಗಳನ್ನು ಚರ್ಚಿಸಬಹುದು.

ಅವುಗಳು:—

I a) ಭ್ರೂಣಾವಸ್ಥೆಯ ನ್ಯೂನತೆಗಳು (Cong nital errors)

b) ಕಣ್ಣಿನ ರಚನೆಗೆ ಸಂಬಂಧಿಸಿದ ಕಾರಣಗಳು:--

i) ಕಣ್ಣಿನ ಅರಿಯ ರೋಗ (conjunctiva disease)

ii) ಕರ್ನಿಕೆಯ ಕಾರಣಗಳು (cornea causes)

iii) ಪಾಪೆಯ ಪೊರೆ (Iris), ಪಾಶ್ವ್ರೀಕಾವಯ (ciliary body) ಮತ್ತು ಪಾಪೆ (Pupil) ಸಂಬಂಧಿಸಿದ ಕಾರಣಗಳು.

iv) ಜಲಾಧಾತುವಿನ ಹರಿಯುವಿಕೆಗೆ ಅಡಚಣೆ (defect in flow of Aqueous Humou

v) ಕಣ್ಮಣಿಯ ಪೊರೆ (cataract)

vi) ಶಿಲಾಧಾತು ಅಥವ ಕಾಚಧಾ (vitreous humour)ವಿನ ಕಲೆ.

vii) ಅಕ್ಷಿಪಟ ಮತ್ತು ದೃಷ್ಟಿನರದಗೊಂದಲಗಳ

viii) ದೃಷ್ಟಿಯ ರಕ್ತನಾಳದಲ್ಲಿ ರಕ್ತ ಗ ಕಟ್ಟುವಿಕೆ(Thromboembolic Manifest tions of Retinal vessels)

ix) ದೃಷ್ಟಿ ದೋಷಗಳು (Refracti errors)

c) ಕಾರ್ಖಾನೆಗಳು (Industries)

d) ಕೆಲವು ಸಾಮಾನ್ಯ ರೋಗಗಳು (Com mon diseases)

a) **ಭ್ರೂಣಾವಸ್ಥೆಯ ನ್ಯೂನತೆಗಳು:**—ಗ ಕೋಶದಲ್ಲಿ ಭ್ರೂಣವು ಬೆಳವಣಿಗೆಯಾಗುವಾಗ ಅನ ಕಾರಣಗಳಿಂದ ಮಗುವಿನಲ್ಲಿ ಒಂದು ಅಥವ ಎರ ಕಣ್ಣುಗಳು ವಿಕಸಿಸದೆ (un-developed) ಹೋ ಬಹುದು. ಮಕ್ಕಳು ಹುಟ್ಟು ಕುರುಡರಾಗಲು ಇ ಕಾರಣ. ಇದಕ್ಕೆ ಧೃತರಾಷ್ಟ್ರನು ಒಂದು ಉದಾಹರ ಕಣ್ಣಿನಪೊರೆ, ಕಣ್ಣಿನ ಒತ್ತಡದ ಏರುವಿಕೆ (Bup tholmos) ಮುಖ್ಯವಾದ ಕಾರಣಗಳಲ್ಲಿ ಎರ ಅಪಕ್ವವಾಗಿ (pre-mature) ಜನಿಸುವ ಶಿಶುಗ ಕಣ್ಮಣಿಯ ಹಿಂಭಾಗದಲ್ಲಿ ತೆಳುವಾದ ಪೊರೆಯಿ (Retrolental Fibroplasia) ಬೆಳಕಿನ ಕಿ ಗಳ ಪ್ರಸಾರಕ್ಕೆ ಅಡಚಣೆಯುಂಟಾಗುತ್ತದೆ.

ಘವನ್ನು ಎರಡು ಕಣ್ಣುಗಳಲ್ಲಿಯೂ ಕಾಣಬಹುದು. ೨. 5 ಶಿಶುಗಳು ಈ ರೀತಿಯಲ್ಲಿ ಅಂಧರಾಗುತ್ತವೆ.

(b) (i) **ಕಣ್ಣಿನ ಅರಿಯ ರೋಗಗಳು :—** ಸೆಯರಿಗಣ್ಣು (Trachoma), ಮೇಹದ ಕಣ್ಣು ನೋವು (Ophthalmia neanatorum), ಅನ್ನಾಂಗದ ದುರ್ಬಲತೆ (Hypovitaminosis vit A) ಮುಂತಾದವು ಮುಖ್ಯ ಕಾರಣಗಳು.

(ಅ) ರವೆಯರಿಗಣ್ಣು :— ಕಣ್ಣು ರೆಪ್ಪೆಯ ಳಮೈನ ಅರಿಯ ಮೇಲೆಲ್ಲಾ ರವೆಯ ಗಾತ್ರದ ಸಣ್ಣ ಣ್ಣ ಗಂಟುಗಳಾಗುತ್ತವೆ (Trachoma ollicles). ಮಕ್ಕಳಲ್ಲಿ ಶೇ.2ಭಾಗ ಅಂಧತೆಗೆ ಇದು ರಣ. ಕರಿಯ ಗುಡ್ಡೆಯ ಮೇಲೆ ಹೊಸ ರಕ್ತನಾಳ ಸು ಉತ್ಪನ್ನವಾಗುವುದರಿಂದ ಅದು ಅಪಾರದರ್ಶಕ ಗುತ್ತದೆ.

ಪ್ರತಿಬಂಧಕ:—ನೈರ್ಮಲ್ಯ ಅತಿಮುಖ್ಯವಾದುದು. ದು ಅಂಟುರೋಗವಾದುದರಿಂದ ರೋಗಿಗಳನ್ನು ರ್ಪಡಿಸಬೇಕು ಈ ರೋಗಿಗಳು ಉಪಯೋಗಿಸಿದ ವಸ್ತ್ರಗಳು ಮತ್ತು ಮೈ ಒರೆಸುವ ವಸ್ತ್ರಗಳನ್ನು ರೆಯವರು ಉಪಯೋಗಿಸಕೂಡದು. ವೈದ್ಯರಿಂದ ತ್ತಮ ಸಲಹೆ ಪಡೆಯುವುದು ಅತ್ಯಾವಶ್ಯಕ.

(ಆ) **ಮೇಹದ ಕಣ್ಣುನೋವು:**—ಈ ಪ್ರಪಂ ಒಟ್ಟು ಕುರುಡರಲ್ಲಿ ಶೇ. 30 ಮಂದಿ ಇದಕ್ಕೆ ತ್ತಾಗುತ್ತಾರೆ. ಸಾಮಾನ್ಯವಾಗಿ ಶಿಶುಗಳು ಇದಕ್ಕೆ ತ್ತಾಗುತ್ತವೆ. ಮೇಹ ರೋಗದಿಂದ (Gonorrea) ನರಳುತ್ತಿರುವ ಗರ್ಭಿಣಿಯರ ಜನನ—ದ್ವಾರದ ಲ್ಲಿ ಈ ರೋಗದ ದಂಡಾಣುಗಳು ಇದ್ದು, ಜನನ ಯಲ್ಲಿ ಶಿಶುವು ಜನನ ದ್ವಾರದ ಮೂಲಕ ಹಾದು ವಾಗ ಕೀವು ಕಣ್ಣಿಗೆ ಬಿದ್ದರೆ ಆ ಮಗುವು ಈ ಗಕ್ಕೆ ತುತ್ತಾಗುತ್ತದೆ. ಇದು ಶಿಶುವು ಜನಿಸಿದ ರನೆಯ ದಿನದಿಂದ ಆರು ದಿನಗಳಲ್ಲಿ ಪ್ರಾರಂಭ ುತ್ತದೆ. ಮಗುವು ಆಗ ಅತಿ ಬಾಧೆಯನ್ನನುಭವಿ ದೆ. ಮೇಲಣ ರೆಪ್ಪೆಯು ಊದಿ ಕಣ್ಣನ್ನು ಸಂಪೂರ್ಣವಾಗಿ ಮುಚ್ಚುತ್ತದೆ. ಕಣ್ಣು ಕೆಂಪಾಗಿ ಕೀವು ಸುರಿಯುವುದನ್ನು ಆಗ ಕಾಣಬಹುದು.

ಜನನವಾದ ಕೆಲವು ದಿನಗಳನಂತರವೂ ಮಗುವು ಆಕಸ್ಮಿಕವಾಗಿ ಈ ರೋಗಕ್ಕೆ ತುತ್ತಾಗಬಹುದು ; ಇದು ಅತಿ ವಿರಳ.

ಪ್ರೌಢರಿಗೂ ಸಹ ತಮ್ಮ ಜನನೇಂದ್ರಿಯದ ಮೇಲಿರುವ ಕೀವು ಆಕಸ್ಮಿಕವಾಗಿ ಕಣ್ಣಿಗೆ ಬಿದ್ದರೆ ಈ ರೋಗಕ್ಕೆ ತುತ್ತಾಗಬಹುದು.

ಪ್ರತಿಬಂಧಕ :— ಗರ್ಭಿಣಿಯರು ಈ ರೋಗ ದಿಂದ ನರಳುತ್ತಿದ್ದರೆ ನಾಚಿಕೆಯಿಂದ ತಮ್ಮ ರೋಗ ವನ್ನು ಗುಪ್ತವಾಗಿಟ್ಟುಕೊಳ್ಳದೆ, ತಮ್ಮ ಶಿಶುಗಳ ಕಣ್ಣು ಹಾಳಾಗದಂತೆ ವೈದ್ಯರಿಗೆ ತಿಳಿಸಿ ಆಗಲೇ ರೋಗ ವನ್ನು ವಾಸಿಮಾಡಿಕೊಳ್ಳುವುದು ಉತ್ತಮ. ಗರ್ಭಿಣಿ ಯಾದ ನಂತರ ತಿಂಗಳಿಗೊಮ್ಮೆಯಾದರೂ ತಜ್ಞ ವೈದ್ಯ ರಿಂದ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅನೇಕ ವೇಳೆ ಈ ರೋಗದಿಂದ ಗರ್ಭಪಾತವಾಗುತ್ತದೆ.

ಮಗುವು ಹುಟ್ಟಿದ ಕೂಡಲೇ ಮಗುವಿನ ಕಣ್ಣನ್ನು ಪರೀಕ್ಷಿಸಿ, ಎರಡು ಕಣ್ಣುಗಳನ್ನು ಬೇರೆ ಬೇರೆ ಹತ್ತಿ ಯಿಂದ ಒರೆಸಿ ಮೊದಲನೆಯ ಮೂರು ದಿವಸಗಳು ಪ್ರತಿದಿನವೂ ಒಂದೊಂದು ತೊಟ್ಟು ಶೇ. 1 ಭಾಗ ಬೆಳ್ಳಿಯ ನೈಟ್ರೇಟ್ ದ್ರಾವಣವನ್ನು ಹಾಕಬೇಕು. ಈ ವಿಧಾನಕ್ಕೆ 'ಕ್ರೀಡೆ ಪವರ" ವಿಧಾನ ಎನ್ನುತ್ತೇವೆ. ಈ ವಿಧಾನವನ್ನು ಒಂದು ವಾರ ಮುಂದುವರಿಸಿದರೆ ಉತ್ತಮ.

ರೋಗ ತಗುಲಿದರೆ ಮಗುವು ಮನೆಯಲ್ಲಿದ್ದ ಪಕ್ಷ ದಲ್ಲಿ ತತ್‌ಕ್ಷಣ ಆಸ್ಪತ್ರೆಗೆ ಸೇರಿಸಬೇಕು- ಮನೆಯಲ್ಲಿ ಚಿಕಿತ್ಸೆ ಮಾಡಲು ಸಾಧ್ಯವಿಲ್ಲ. "ಪೆನಿಸಿಲಿನ್ ಡ್ರಾಪ್ಸ್" ಇದರ ಸಿದ್ಧೌಷಧ. ಮಗುವಿನ ಕಣ್ಣಿಗೆ ತಾಯಿಯಿಂದಾ ಗಲೀ ಅಥವ ಇತರರಿಂದಾಗಲೀ ಕೀವು ಸೋಂಕದಂತೆ ಎಚ್ಚರಿಕೆ ವಹಿಸಬೇಕು. ಮೈತೊಳೆದ ನೀರಿನಿಂದ ಮುಖ ತೊಳೆಯುವುದು ಅಪಾಯಕರ.

(ii) **ಕರಿಯುಗುಡ್ಡೆ** :—ಯಾವ ಕಾರಣದಿಂದಾ ಗಲಿ ಕರಿಯುಗುಡ್ಡೆಯ ಮೇಲೆ ಬಿಳಿಯ ಕಲೆಗಳಾದರೆ

(Leucoma grade opacity) ಬೆಳಕಿನ ಕಿರಣಗಳು ಹಾದು ಹೋಗಲು ಅಡ್ಡಿಯಾಗುತ್ತದೆ. ಪೆಯು ರಿಗಣ್ಣು, ಮಂದ ರೋಗದ ಕಣ್ಣುನೋವು. A ಅನ್ನಾಂಗದ ದುರ್ಬಲತೆ, ಸಿಡುಬು, ಮತ್ತು ಆಕಸ್ಮಿಕ ಅಪಘಾತಗಳು-ಇವು ಬಿಳಿಯ ಕಲೆ ಉಂಟು ಮಾಡುತ್ತವೆ:

ಅ ನೋವಿನ ಕಣ್ಣುನೋವಿನಿಂದ ಕರಿಯ ಗುಡ್ಡೆಯ ಮೇಲೆ ಗಾಯವಾಗಿ ಅನಂತರ ವ್ರಣವಾಗಿ ಕೊನೆಗೆ ಬಿಳಿಯ ಕಲೆ ನಿಲ್ಲುತ್ತದೆ.

ಅ) "ಎ" ಅನ್ನಾಂಗದ ದುರ್ಬಲತೆ :— ನಿಯಮಿತ ಕ್ರಮದಲ್ಲಿ ಪ್ರತಿದಿನವೂ 5000 ಯೂನಿಟ್‌ಗಳಷ್ಟು 'ಎ' ಅನ್ನಾಂಗವು ದೊರೆಯದಿದ್ದರೆ ಕರಿಯ ಗುಡ್ಡೆಯು ಒಣಗಿ ಬಿಳಿಯ ಕಲೆ ನಿಲ್ಲುತ್ತದೆ. (xerosis, xerophtholmia, B spots and keratomalacia)

ಪ್ರತಿಬಂಧಕ :— "ಎ" ಅನ್ನಾಂಗವು ಹೆಚ್ಚಿರುವ ಮೀನೆಣ್ಣೆ, ಹಾಲು, ಮುಂತಾದುವನ್ನು ಸೇವಿಸುವುದು ಅತ್ಯವಶ್ಯಕ. ರೋಗವು ಪ್ರಾಪ್ತವಾದರೆ "ಪಿ ಪಾಲಿನ್" ಎಂಬ ಚುಚ್ಚು ಮದ್ದನ್ನು ಮಗುವಿಗೆ ಎರಡು ಅಥವ ಮೂರು ದಿನಗಳಿಗೊಮ್ಮೆ ಕೊಡಬೇಕು.

ಆ) ಸಿಡುಬು — ಇದು ಅಂಟುರೋಗ. ಈ ಗಾಯಗಳಲ್ಲಿರುವ ಕೀವು ಆಕಸ್ಮಿಕವಾಗಿ ಕಣ್ಣನ್ನು ಸೇರುವುದರಿಂದ ಇದು-ರೋಗಕಾರಕಗಳನ್ನು ಹೊಂದಿರುವುದರಿಂದ ಕರಿಯ ಗುಡ್ಡೆಯ ಮೇಲೆ ಗಾಯವಾಗಿ ಬಿಳಿಯ ಕಲೆಯಲ್ಲಿ ಕೊನೆಗಾಣುತ್ತದೆ

ಪ್ರತಿಬಂಧಕ:— ಈ ಕಾಯಿಲೆಯು ಬಾರದಂತೆ ಮಗುವು ಮೂರು ತಿಂಗಳಲ್ಲಿ ಕಾಲಿಟ್ಟ ಕೂಡಲೆ ಬೇವಿ ಹಾಕಿಸಿ, ವರ್ಷಕ್ಕೊಮ್ಮೆಯಾದರೂ ಪುನಃ ಪುನಃ ಹಾಕಿಸುವುದರಿಂದ ರೋಗ ಬರದಂತೆ ತಡೆಗಟ್ಟಬಹುದು. ರೋಗ ತಗುಲಿದರೆ ಕಣ್ಣನ್ನು ದಿವಸಕ್ಕೆ ಎರಡು-ಮೂರು ಬಾರಿ ಬೋರಿಕ್ ದ್ರಾವಣದಿಂದ ತೊಳೆಯಬೇಕು. ಕಣ್ಣಿಗೆ ಪಟ್ಟಿ ಕಟ್ಟಬಾರದು. ರೋಗಿಗಳನ್ನು ಉಪಚರಿಸುವವರು ಕ್ರಿಮಿನಾಶಕಗಳಿಂದ ಕೈಯನ್ನು ಶುಭ್ರಪಡಿಸಿಕೊಳ್ಳಬೇಕು. ಅವರಿಂದ ಉಪಯೋಗವಾದ ಬಟ್ಟೆಗಳನ್ನು ಬೇರೆಯವರು ಉಪಯೋಗಿಸಕೂಡದು.

(iii) ಪಾಪೆಯ ಪೊರೆ (Iris) ಮತ್ತು ಸಾ[illegible]ಯುವ ciliary body) ದ ಸಂಪರ್ಕ ದೋ[illegible] (Infection) :— ಬಹಳ ದಿನಗಳ "ಪಾ[illegible] ದಿಂದ ರೋಗವು ಪ್ರಾಪ್ತವಾಗಿ ಕಣ್ಮಣಿಯ ಪೊ[illegible] (complicated cataract) ಕಾರಣವಾ[illegible] ಸುಮಾರು ಶೇ. 5 ಭಾಗ ಅಂಧತೆಯು ಇದರಿಂದು[illegible]ಗುತ್ತದೆ.

ಪ್ರತಿಬಂಧಕ :- ರೋಗ ಪ್ರಾರಂಭವಾದ ತತ್‌ಕ್ಷಣ[illegible] ವೈದ್ಯರನ್ನು ಭೇಟಿ ಮಾಡುವುದು ಉತ್ತಮ. [illegible]ದ ಅಂಧತೆಯು ಯಾವ ವಯಸ್ಸಿನಲ್ಲಿ ಬೇಕಾದ[illegible] ಪ್ರಾಪ್ತವಾಗಬಹುದು.

(iv) ಜಲಧಾರಣಿಯ ಅಡಚಣೆ :— ಶೇ.[illegible] ಭಾಗ ವೃದ್ಧಾಪ್ಯದಲ್ಲಿ ಇದು ಕಾರಣ. ಈ ಧಾತ[illegible] ಹರಿಯುವಿಕೆಗೆ ಅಡ್ಡಿಯಾಗುವುದರಿಂದ ಕಣ್ಣಿನ [illegible]ದವು ಏರುತ್ತಾ ಹೋಗುತ್ತದೆ. ಕೊನೆಗೆ ಕಣ್ಣು [illegible] ಹೋಗಿ ಅಂಧತೆಯು ಪ್ರಾಪ್ತವಾಗುತ್ತದೆ. ಶಿರೋ[illegible] ಕಾಲಿಗೆ ಹೋಗುವ ವಯಸ್ಸಿನ ಮಕ್ಕಳು ಮತ್ತು[illegible]ರಿಂದ 70 ವರ್ಷ ವಯಸ್ಸಿನವರು ಈ ರೋಗಕ್ಕೆ ತು[illegible]ಗುತ್ತಾರೆ.

ಪ್ರತಿಬಂಧಕ :— ಅತಿಯಾದ ತಲೆಶೂಲೆ, ಕ[illegible] ಶೂಲೆ, ಹಳದಿಬಣ್ಣದ ವಮನ ಕಂಡ ತತ್‌ಕ್ಷಣವೇ [illegible]ರನ್ನು ಸಂಧಿಸಿ ಉತ್ತಮ ಸಲಹೆ ಮತ್ತು ಔಷಧ[illegible]ಯುವುದು ಒಳ್ಳೆಯದು.

(v) ಕಣ್ಮಣಿಯ ಪೊರೆ :— ಇಪ್ಪತ್ತು [illegible] ವಯಸ್ಸಿಗೂ ಮೇಲ್ಪಟ್ಟು ಶೇ. 30 ಮಂದಿ ಈ ರೋ[illegible]ದಿಂದಲೇ ಅಂಧರಾಗಿರುತ್ತಾರೆ. [illegible] ಯಿರುವಂತೆ ಇಲ್ಲಿ ಯಾವ ಪೊರೆಯೂ ಇದ್ದವರಾಗ[illegible]ದಿಲ್ಲ. ಐವತ್ತು ವರ್ಷ ವಯಸ್ಸಾದ ನಂತರ [illegible]ಣಿಗೆ ನಿಯಮಿತ ಅಂಶದಲ್ಲಿ ಆಹಾರಾಂಶಗಳು ದೊರೆ[illegible] ಇರುವುದರಿಂದ ಅದು ಅಪಾರದರ್ಶಕವಾಗು[illegible]

ಪ್ರಾರಂಭದಲ್ಲಿ ಕಣ್ಣಿನ ಎದುರಿನಲ್ಲಿ ಕರಿಗು ಚುಕ್ಕೆಗಳಿದ್ದಂತೆ ಕಂಡು ಪ್ರತಿ ವಸ್ತುವೂ ಒಂದಕ್ಕಿಂತ ಹೆಚ್ಚಿರುವಂತೆ ತೋರಿ ಕೊನೆಯಲ್ಲಿ ದೃಷ್ಟಿಯು ಹಾಳಾಗುತ್ತದೆ. ಕೇವಲ ಬೆಳಕು ಅಥವಾ ಕೈನ ಚಲನೆ ಮಾತ್ರ ಗುರ್ತಿಸಬಹುದು. ಈ ವಿಧದಲ್ಲಿ ಎರಡು ಕಣ್ಣುಗಳು ಕುರುಡಾಗುತ್ತವೆ. ಒಂದು ಕಣ್ಣು ಮತ್ತೊಂದು ಕಣ್ಣಿಗಿಂತ ಮೊದಲು ಕುರುಡಾಗಬಹುದು.

ಪ್ರತಿಬಂಧಕಗಳು :— ಇವನ್ನು ಯಾವ ಔಷಧದಿಂದಲೂ ಗುಣಪಡಿಸಲಾಗುವುದಿಲ್ಲ. ರೋಗಿಯು ಮೊದಲನೆಯ ಅಥವ ಎರಡನೆಯ ಹಂತದಲ್ಲಿದ್ದರೆ ಅದು ಊರ್ಧ್ವ ಒತ್ತಡವನ್ನು (glaucoma) ಹೋಲುತ್ತದೆ. ಆಗ ಅದಕ್ಕೆ ತಕ್ಕ ಔಷಧವನ್ನು ಪಡೆಯಬೇಕು. ಪೂರ್ತಿ ಬಲಿತನಂತರ ಕಣ್ಮಣಿಯನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಸಬೇಕು. ಬೀದಿಗಳಲ್ಲಿ ತಿರುಗುವ ವೈದ್ಯ-ವೇಷಧಾರಿಗಳು ಸರಿಯಾದ ತಿಳುವಳಿಕೆಯಿಲ್ಲದೆ ದೊಡ್ಡ ಸೂಜಿಯಿಂದ ಕಣ್ಮಣಿಯನ್ನು ಹಿಂದಕ್ಕೆ ನೂಕುತ್ತಾರೆ. ಇದರಿಂದ ದೃಷ್ಟಿಯು ತಾತ್ಕಾಲಿಕವಾಗಿ ಕಂಡರೂ ಮುಂದೆ ಹೆಚ್ಚಿನ ಗಂಡಾಂತರಕ್ಕೀಡಾಗುವುದರಿಂದ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆದು ಆರುವಾರಗಳನಂತರ ಅವರ ಸಲಹೆಯ ಮೇರೆಗೆ ಕನ್ನಡಕವನ್ನು ಹಾಕಿಕೊಳ್ಳಬೇಕು.

vi) **ಶಿಲಾಧಾತು ಅಥವ ಕಾಚಧಾತುವಿಗೆ ಸಂಬಂಧಿಸಿದ ಕಾರಣಗಳು** :— ಅನೇಕ ಕಾರಣಗಳಿಂದ ಪಾರದರ್ಶಕವಾದ ಶಿಲಾಧಾತುವು ಅಪಾರದರ್ಶಕವಾಗುವುದೇ ಅಂಧತೆಗೆ ಕಾರಣ. ಸಮೀಪದೃಷ್ಟಿದೋಷವು ಅತಿಯಾದಾಗ ಕಾಚಧಾತುವು ನಶಿಸಿ ಸ್ರಾವವಾಗುತ್ತವೆ. "ಈಲ್ಸ್"ನ ರೋಗದಲ್ಲಿಯೂ ಸಹ ಇದನ್ನು ಕಾಣಬಹುದು. ವಪೆ ಮತ್ತು ಪಾಶ್ವಿಕಯುವಿನಿಂದ ಕೀವು ಕಾಚಧಾತುವಿನೊಡನೆ ಬೆರೆಯುವುದರಿಂದ ಮಧುಮೇಹ, ರಕ್ತದ ಒತ್ತಡದ ಏರುವಿಕೆ, ಅಕ್ಷಿಪಟದ ರಕ್ತನಾಳಗಳ ಸ್ರಾವ ಮುಂತಾದುವುಗಳಿಂದ ಅದು ಅಪಾರದರ್ಶಕವಾಗುತ್ತದೆ.

ಪ್ರತಿಬಂಧಕ :— ಕಣ್ಣಿನ ಮುಂದೆ ಕಪ್ಪುಪದಾರ್ಥ ಹಾದು ಹೋದಂತಾದಾಗಲೇ ವೈದ್ಯರನ್ನು ಭೇಟಿಮಾಡಬೇಕು.

vii) **ಅಕ್ಷಿಪಟ ಮತ್ತು ದೃಷ್ಟಿನರಕ್ಕೆ ಸಂಬಂಧಿಸಿದ ಕಾರಣ** :— ಅಕ್ಷಿಪಟದ ಅರ್ಬುದ (Retinoblastoma) ಅಕ್ಷಿಪಟದ ನಶಿಸುವಿಕೆ (Maculardegeneration), ಅಕ್ಷಿಪಟದ ಬೇರ್ಪಡುವಿಕೆ (Retinal detachment) ಮತ್ತು ಸಮೀಪ ದೃಷ್ಟಿ ದೋಷಗಳು ಸಾಮಾನ್ಯ ಕಾರಣಗಳು.

(ಅ) **ಅಕ್ಷಿಪಟದ ಅರ್ಬುದ**:— ಇದು ಮಕ್ಕಳುಗಳಲ್ಲಿ ಶೇ. 5 ಭಾಗ ಅಂಧತೆಗೆ ಕಾರಣವಾಗುತ್ತದೆ. 3 ವರ್ಷ ವಯಸ್ಸಿನಿಂದ 5 ವರ್ಷ ವಯಸ್ಸಿನ ಮಕ್ಕಳಲ್ಲಿ ಅಕ್ಷಿಪಟದ ಗಡ್ಡೆಯು ಪ್ರಾರಂಭವಾಗಿ ಮೂರನೆಯ ಹಂತದಲ್ಲಿ ಅಂಧತೆಯು ತಲೆದೋರುತ್ತದೆ. ಇದು ತುಸು ಮಟ್ಟಿಗೆ ವಂಶಪಾರಂಪರ್ಯವೂ ಹೌದು. ಗಡ್ಡೆಯು ಪ್ರಾಪ್ತವಾದ ಕಣ್ಣನ್ನು ಚಿಕಿತ್ಸೆ ಹಾಗೇ ಬಿಟ್ಟಲ್ಲಿ ಮತ್ತೊಂದು ಕಣ್ಣು ಸಹ ಗಂಡಾಂತರಕ್ಕೀಡಾಗುತ್ತದೆ.

ಪ್ರತಿಬಂಧಕ:— ಕಣ್ಣಿನಲ್ಲಿ ಬಿಳಿಯ ಚುಕ್ಕೆ ಕಂಡ ತಕ್ಷಣವೇ ವೈದ್ಯರನ್ನು ಭೇಟಿ ಮಾಡಿ ತಜ್ಞವೈದ್ಯರಿಂದ ಕಣ್ಣನ್ನು ತೆಗೆಸಿ ಹಾಕುವುದು ಒಳ್ಳೆಯದು. ಮತ್ತೊಂದು ಕಣ್ಣನ್ನು ರಕ್ಷಿಸಲು ಇದೇ ಉತ್ತಮ ಮಾರ್ಗ.

(ಆ) **ಸಮೀಪ ದೃಷ್ಟಿದೋಷ** :— ಇದು ಅತಿಯಾದಾಗ ವೃದ್ಧರಲ್ಲಿ ಶೇ.5 ಭಾಗ ಅಂಧರಾಗಲು ಕಾರಣವಾಗುತ್ತದೆ. ಅಕ್ಷಿಪಟವು ನಶಿಸಿ ಹೋಗುತ್ತದೆ. ಶೇ. 28 ಭಾಗ ಕುರುಡತ್ವಕ್ಕೆ ಇದು ಕಾರಣ. ಅನಂತರ ಅಕ್ಷಿಪಟವು ಬೇರ್ಪಡುತ್ತದೆ.

ಯಾವ ಕಾರಣದಿಂದ ದೃಷ್ಟಿನರಕ್ಕೆ ರೋಗ ತಗುಲಿದರೂ ಅಂಧತೆಯಲ್ಲಿ ಕೊನೆಗಾಣುತ್ತದೆ. ಅಂಧ ಮಕ್ಕಳಲ್ಲಿ ಶೇ. 15 ಭಾಗ, ಅಂಧ ಪ್ರೌಢರಲ್ಲಿ ಶೇ. 20 ಭಾಗ ಇದಕ್ಕೆ ತುತ್ತಾಗುತ್ತಾರೆ.

ಪ್ರತಿಬಂಧಕ :— ಸಮೀಪ ದೃಷ್ಟಿದೋಷ ಅತಿಯಾಗಿರುವವರು ಮದುವೆಯಾಗಕೂಡದು. ಮದುವೆಯಾಗಿದ್ದ ಪಕ್ಷದಲ್ಲಿ ಮಕ್ಕಳಾಗದಂತೆ ಕುಟುಂಬ ನಿಯಂತ್ರಣವನ್ನು ಅನುಸರಿಸಬೇಕು. ಅಕ್ಷಿಪಟದ ಅರ್ಬುದ

ವಿರುವವರೂ ಈ ಕ್ರಮವನ್ನು ಅನುಸರಿಸಬೇಕು. ಅತಿ ಕಣ್ಣುನೋವು ಮತ್ತು ಗುಡ್ಡೆಯನ್ನು ತಿರುಗಿಸಲು ಬಾಧೆಯಾದ ತತ್‌ಕ್ಷಣವೇ ವೈದ್ಯರಿಂದ ಉತ್ತಮ ಸಲಹೆ ಪಡೆದು ಅಂಧತೆಯನ್ನು ತಪ್ಪಿಸಬಹುದು.

(viii) **ರಕ್ತ ಗಡ್ಡೆಕಟ್ಟುವಿಕೆ:**— ಶೇ. 1 ಭಾಗ ಅಂಧತೆಯು ಇದರಿಂದುಂಟಾಗುತ್ತದೆ. ದೇಹದ ಯಾವ ಭಾಗದ ರಕ್ತನಾಳದಲ್ಲಿ ರಕ್ತದ ಗಡ್ಡೆಯಾದರೂ (Thrombosis) ದೃಷ್ಟಿಯ ರಕ್ತನಾಳದ ಸೇರಿದರೆ (Embolism) ರಕ್ತದ ಹರಿಯುವಿಕೆಗೆ ತೊಂದರೆಯಾಗಿ ಅದರಿಂದ ಸರಬರಾಜು ಹೊಂದಿರುವ ಅಕ್ಷಿಪಟದ ಭಾಗವು ನಶಿಸಿ ಅಂಧತೆಯುಂಟಾಗುತ್ತದೆ.

ಪ್ರತಿಬಂಧಕ :—ಇದು ಸಾಮಾನ್ಯವಾಗಿ ಹೃದಯ ರೋಗದಿಂದ ನರಳುತ್ತಿರುವವರಿಗೆ ಪ್ರಾಪ್ತವಾಗುತ್ತದೆ. ಇದ್ದಕ್ಕಿದ್ದ ಹಾಗೆ ಕಣ್ಣು ಕಾಣಿಸದಂತಾದ ತತ್‌ಕ್ಷಣವೇ ವೈದ್ಯರನ್ನು ಕರೆದರೆ ಕಣ್ಣಿನ ಗುಡ್ಡೆಯನ್ನು ತೀಡಿ (Massage) ರಕ್ತದ ಗಡ್ಡೆಯನ್ನು ಮುಂದೆ ಹೋಗುವಂತೆ ಮಾಡಿ ಅಂಧತೆಯನ್ನು ತಪ್ಪಿಸುತ್ತಾರೆ : ತಡವಾದರೆ ಅಪಾಯಕರವೆಂಬುದನ್ನು ಮರೆಯಬಾರದು.

(ix) ದೃಷ್ಟಿ ದೋಷ :—ಮೇಲೆ ವಿವರಿಸಿದೆ.

(c) **ಕಾರ್ಖಾನೆಗಳು** :-ಲೋಹಗಳ ಅದುರು ಮಾನವನ ದೇಹದಲ್ಲಾಗಲಿ ಅಥವ ಕಣ್ಣಿನೊಳಗಾಗಲಿ ಸೇರಿ ಹಾನಿಯನ್ನುಂಟು ಮಾಡುವುದರಿಂದ ಅಥವ ಕೆಲಸಗಾರರು ಕಾರ್ಖಾನೆಗಳಲ್ಲಿ ಕೆಲಸ ಮಾಡುವಾಗ ಉಂಟಾಗಬಹುದಾದ ಅಪಘಾತದಿಂದ ಅಂಧತೆಯುಂಟಾಗುತ್ತದೆ. ಸೀಸ ಮತ್ತು ಬೆಂಜೀನ್‌ನ ಪಾಷಾಣ ಹಾಗೂ ಗಾಜು ಮತ್ತು ಕಬ್ಬಿಣದ ಕೆಲಸಗಾರರ ಕಣ್ಣಿನ ಪರೆ ರೋಗಗಳು ಸಾಮಾನ್ಯ ಕಾರಣಗಳಲ್ಲಿ ಹಲವು. ಅಂಧತೆಯು ಸಾಮಾನ್ಯವಾಗಿ ಯಂತ್ರೋಪಕರಣಗಳೊಡನೆ ಕೆಲಸ ಮಾಡುವವರಲ್ಲಿ ಮತ್ತು ಗಣಿಗಳಲ್ಲಿ ಕೆಲಸಮಾಡುವವರಲ್ಲಿ ಕಾಣಬರುತ್ತದೆ. ಭಾರತದಲ್ಲಿ ಕಾರ್ಖಾನೆಗಳಿಂದ ಶೇ 3 ಭಾಗ ಅಂಧತೆಯುಂಟಾಗುತ್ತದೆ.

ಬ್ರಿಟನ್‌ನಲ್ಲಿ ಶೇ 1 ಭಾಗದಿಂದ 1.7 ಭಾಗ ಅಂಧತೆಯು ಇದರಿಂದುಂಟಾಗುತ್ತದೆ. ವರ್ಷಕ್ಕೆ 3ಲಕ್ಷ ಜನಗಳು ಕಣ್ಣಿನ ಅಪಘಾತಕ್ಕೆ ತುತ್ತಾಗುತ್ತಾರೆ.

ಯು.ಎಸ್.ಎ. ಯಲ್ಲಿ ಪ್ರತಿಕೆಲಸದ ದಿನವೂ ಪ್ರತಿ 30ಸೆಕೆಂಡಿಗೂ ಒಂದು ಕಣ್ಣಿಗಾದರೂ ಅಪಾಯ ತಪ್ಪದಿರುವುದಿಲ್ಲ. ಅಂದರೆ ಪ್ರತಿವರ್ಷವೂ 2[illegible],000 ಜನಗಳಿಗೆ ಅಪಘಾತವಾಗಿ 1000 ಅಮೇರಿಕನ್ನರು ಒಂದು ಕಣ್ಣಿನ ದೃಷ್ಟಿಯನ್ನೂ, ನೂರು ಮಂದಿಗಿಂತ ಮೇಲ್ಪಟ್ಟು ಎರಡು ಕಣ್ಣುಗಳ ದೃಷ್ಟಿಯನ್ನೂ ಕಳೆದುಕೊಳ್ಳುತ್ತಾರೆ.

ಪ್ರತಿಬಂಧಕ:— ಲೋಹದ ಅದುರು ಕಣ್ಣಿಗೆ ಬೀಳದಂತೆ ಕೆಲಸಗಾರರು ತಮ್ಮ ಕಣ್ಣುಗಳನ್ನು ರಕ್ಷಿಸಿಕೊಳ್ಳಬೇಕು. ಚೂಪಾದ ಆಯುಧಗಳು ಕಣ್ಣಿಗೆ ಚುಚ್ಚಿಕೊಳ್ಳಲು ಆಸ್ಪದ ಕೊಡಕೂಡದು. ಆಕಸ್ಮಿಕವಾಗಿ ಅಪಾಯ ಸಂಭವಿಸಿದರೆ ತತ್‌ಕ್ಷಣ ಕಣ್ಣಿನ ಪರೀಕ್ಷೆ ಮಾಡಿಸಿಕೊಂಡು ಅಪಾಯವಾದ ಕಣ್ಣಿನ ದೃಷ್ಟಿಯು ಸಂಪೂರ್ಣ ಹಾಳಾಗಿದ್ದರೆ ಆ ಕಣ್ಣನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಸಿಹಾಕಿ ಮತ್ತೊಂದು ಕಣ್ಣನ್ನು ರಕ್ಷಿಸಿಕೊಳ್ಳಬೇಕು; ಇಲ್ಲದಿದ್ದಲ್ಲಿ ಮತ್ತೊಂದು ಕಣ್ಣೂ ಗೊಂದಲಕ್ಕೀಡಾಗಿ (Sympathetic ophthalmitis) ಅದರ ದೃಷ್ಟಿಯು ಹಾಳಾಗಿ ಎರಡು ಕಣ್ಣುಗಳೂ ಹಾಳಾಗುತ್ತವೆ.

a) **ಸಾಮಾನ್ಯ ರೋಗಗಳು:**—(General diseases):—ಅ) ಮಧುಮೇಹ (Diabetes Melitas) ದಿಂದ ಶೇ. 15 ಭಾಗ (ವೃದ್ಧರಲ್ಲಿ)

ಆ) ಕುಷ್ಟರೋಗದಿಂದ :—ಶೇ 2 ಭಾಗ.

ಇ) ರಕ್ತಒತ್ತಡದ ಏರುವಿಕೆ (High blood pressure) ಯು ವೃದ್ಧರಲ್ಲಿ ಶೇ 1ಭಾಗ ಅಂಧತೆಗೆ ಕಾರಣವಾಗುತ್ತದೆ.

ಈ) ಮೇಹ ರೋಗದಿಂದ:—ಶೇ 1 ಭಾಗ.

II **ವರ್ಣಾಂಧತೆ** :—ಕೆಲವರಿಗೆ ಕೇವಲ ಕೆಲವು ಬಣ್ಣಗಳನ್ನು ಮಾತ್ರಗುರುತಿಸಲಾಗುವುದಿಲ್ಲ. ಉ.ಹ:- ಕೆಲವರಿಗೆ ಕೆಂಪು ಬಣ್ಣ, ಕೆಲವರಿಗೆ ಹಳದಿ ಅಥವ ಬಿಳಿ ಬಣ್ಣಗಳನ್ನು ಗುರುತಿಸುವುದಕ್ಕಾಗುವುದಿಲ್ಲವಾದುದ


ದ ಅವರನ್ನು ವರ್ಣಾಂಧರು (Colour blind
ople) ಎಂದು ಕರೆಯುತ್ತೇವೆ.

ಇಂತಹವರನ್ನು ಹೊಗೆಯ ಬಂಡಿಯ ಚಾಲಕ
ನ್ನಾಗಿ (Engine driver) ನಿಯಮಿಸಿಕೊಳ್ಳು
ಕ್ಕೆ ಮುಂಚೆ ಪರೀಕ್ಷಿಸಿ ಎಲ್ಲ ಬಣ್ಣಗಳನ್ನು ಗುರು
ವ ಶಕ್ತಿ ಇವರ ಕಣ್ಣುಗಳಿಗಿದ್ದರೆ ಮಾತ್ರ ಇವರಿಗೆ
ಸ ಕೊಡಬೇಕಾದುದು ಮುಖ್ಯವಾದ ಸಲಹೆ.
ಂದರೆ ಪ್ರಯಾಣಿಕರೆಲ್ಲರಿಗೂ ಇವರು ಕಂಟಕಪ್ರಾಯ
ಗಬಹುದು. ಇವರ ಕಣ್ಣುಗಳು ವಿವಿಧವರ್ಣದ
ಪಗಳು ಮತ್ತು ಬಾವುಟಗಳನ್ನು ಗುರುತಿಸುವಷ್ಟಿ
ೆ ಸಾಕು.

ಸಮಾಜ ಮತ್ತು ಅಂಧರು:—ಕುರುಡರು ಎಂದ
ತ್ರಕ್ಕೆ ಅವರು (ದೇಶಕ್ಕೆ) ಅಪ್ರಯೋಜಕರು ಎಂದು
ಾಜವು ಅವರನ್ನು ಹೀನಾಯವಾಗಿ ಬಯ್ಯುತ್ತಾ
ತುಚ್ಛವಾಗಿ ಕಾಣುವುದರಿಂದ ಅವರ ಹೃದಯದ
ಲೆ ಆಘಾತವಾಗುತ್ತದೆ. ದುಷ್ಟಪ್ರಾಣಿಗಳಾದ ಹುಲಿ,
ಸಿಂಹ, ಹಾವು ಮುಂತಾದವುಗಳನ್ನು ನ್ಯಾಯರೀತಿಯಲ್ಲಿ
ಪಳಗಿಸಿ ಅವುಗಳಿಂದ ಪ್ರಯೋಜನ ಪಡೆಯುತ್ತಿರುವ
ಮನುಷ್ಯನಿಗೆ ಅಂಧರಿಂದ ಪ್ರಯೋಜನ ಪಡೆಯುವುದು
ಕಷ್ಟವೆ ?

ಒಂದು ಕಣ್ಣು ಮಾತ್ರ ಅಪ್ರಯೋಜಕವಾಗಿದ್ದರೆ
ಮತ್ತೊಂದು ಕಣ್ಣಿನಿಂದ ಯಾವ ಕೆಲಸವನ್ನು ಬೇಕಾ
ದರೂ ಮಾಡಬಹುದಾದುದರಿಂದ ಎಂತಹ ಕೆಲಸಗಳನ್ನು
ಬೇಕಾದರೂ ಇವರಿಗೆ ಒದಗಿಸಬಹುದು.

ಎರಡು ಕಣ್ಣುಗಳೂ ಅಪ್ರಯೋಜಕವಾಗಿದ್ದರೆ ಅವ
ರನ್ನು ಅಂಧರ ಶಾಲೆಗೆ ಸೇರಿಸಿ ಉಪಧ್ಯಾಯರುಗಳನ್ನಾ
ಗಿಯೂ, ಸಂಗೀತ ವಿದ್ವಾಂಸರನ್ನಾಗಿಯೂ ಮಾಡಿ
ದೇಶಕ್ಕೆ ಅಂಧರಿಂದುಂಟಾಗುತ್ತಿರುವ ನಷ್ಟವನ್ನು ತಪ್ಪಿಸಿ
ದೇಶದ ಪ್ರಗತಿಗೆ ಶ್ರಮಿಸುವಂತೆ ಅವರನ್ನು ಉಪ
ಯೋಗಿಸಿಕೊಳ್ಳುವುದು ದೇಶಾಭಿಮಾನಿಗಳಾದ ಪ್ರತಿ
ಪೌರನ ಕರ್ತವ್ಯ.



ಮೃದುವಾಗಿ ಮಾತಾಡು

" ಪುಲಿಕೇಶಿ "

ಮೃದುವಾಗಿ ಮಾತಾಡು ! ಸಕಲ ಜನಗಳೊಳೆಲ್ಲ
ಭಯಕಿಂತ ಆದರದಿ ಆಳುವುದು–ಅದು ಲೇಸು ;
ಮೃದುವಾಗಿ ಮಾತಾಡು– ಕಠಿಣ ವಚನಗಳಿಲ್ಲಿ
ನಾವು ಮಾಡುವ ಒಳಿತ ಹಾಳು ಮಾಡದೆ ಇರಲಿ.

ಮೃದುವಾಗಿ ಮಾತಾಡು. ಶಿಶುಗಳಾವೃಂದದೊಳು !
ಅವರ ಒಲವನು ನೀನು ನಿಜಕು ಸಂಪಾದಿಸುವೆ ;
ಅವಕೆ ಬೋಧಿಸು ನೀನು ಮೃದು ಮಧುರ ಮಾತಿನೊಳು,
ಅಲ್ಲದಿರೆ ತಾನಸುವೆ ಬಹುಕಾಲ ಉಳಿಯದೈ.

ಮೃದುವಾಗಿ ಮಾತಾಡು ಬಾಲಕರಿಗೇ ನೀನು,
ಸಾಕಷ್ಟು ಇಹುದಲ್ಲಿ ಅವರು ಹೋರುವುದು ಮುಂದೆ ;
ಅವರು ಪಡೆಯುವುದಷ್ಟು ನೀಡು ನೀ ಜೀವನದಿ,
ಎಚ್ಚರಿಕೆಯೊಳಗೊಂಡ ಆತಂಕ ನಿನಗಿರಲಿ.

ಮೃದುವಾಗಿ ಮಾತಾಡು ವೃದ್ಧರಾದವರಲ್ಲಿ,
ಬೆಂದ ಹೃದಯವ ಮತ್ತೆ ಬೇಯುಗೊಡುವುದು ಬೇಡ ;
ಜೀವನದ ಕಣಗಳವು ಮುಗಿಸುತಿವೆ ಓಟವನು.
ಬೀಳ್ಕೊಳ್ಳಲಂಥವರು ಶಾಂತಿಯಲಿ ಬೇರ್ಪಟ್ಟು.

ಮೃದುವಾಗಿ ಮಾತಾಡು, ದಯೆಯಿಂದ ಬಡವರಿಗೆ,
ಅವರು ಕೇಳದೆಯಿರಲಿ ಕರ್ಕಶದ ದನಿಯನ್ನು ;
ಸಾಕಷ್ಟು ದುಃಖವಿದೆ, ಸಹಿಸಲೇ ಬೇಕವರು
ನಿರ್ದಯೆಯ ಮಾತೊಂದು ಇಲ್ಲದಿರಲು.

ಮೃದುವಾಗಿ ಮಾತಾಡು, ತಪ್ಪನ್ನು ಮಾಡುವಗೆ
ಅವರ ಯತ್ನಗಳೆಲ್ಲ ವಿಫಲವಾಗಿರಬಹುದು ;
ದಯೆಯು ಕೂರತೆಯೆ ಅವರನಿಂತು ಗೈದಿರಬಹುದು,
ಓ ! ಗೆಲ್ಲು, ನೀನವರ ಮತ್ತೆ ಮೊದಲಿನ ತೆರದಿ !

David Bates ರವರ—"Speak Gently"
ಕನ್ನಡ ಭಾವಾನುವಾದ.

ಭಾಷಾ ಸಮಸ್ಯೆ

ಆರ್. ಶಿವಲಿಂಗಯ್ಯ ಎಂ.ಎ. (ಬ್ಯಾಡರಹಳ್ಳಿ)

ಭಾರತದಲ್ಲಿ ಹದಿನೈದು ರಾಜ್ಯಗಳಿದ್ದು, ಹದಿನಾಲ್ಕು ರಾಜ್ಯಾಂಗ-ಭಾಷೆಗಳಿವೆ. ಲಿಪಿಯಿಲ್ಲದಿರುವ ಕೇವಲ ಮಾತನಾಡುವ ಭಾಷೆಗಳು ಅನೇಕವಿವೆ. ಸ್ವಾತಂತ್ರ್ಯ ಬಂದ ಮೇಲೆ 1950 ರಲ್ಲಿ ನಮ್ಮದೇ ಆದ ರಾಜ್ಯಾಂಗವನ್ನು ಸೃಜಿಸಲಾಯಿತು. ಆಗ ಹಿಂದಿಯನ್ನು (ದೇವನಾಗರಿ ಲಿಪಿಯುಳ್ಳ) ರಾಷ್ಟ್ರಭಾಷೆಯನ್ನಾಗಿ ಮಾಡಲು ಸಂಕಲ್ಪಿಸಿ, ಇಂಗ್ಲೀಷನ್ನು ಹದಿನೈದು ವರ್ಷಗಳ ಕಾಲ ಸಂಪರ್ಕ ಭಾಷೆ (Link Language) ಯನ್ನಾಗಿ ಇಟ್ಟುಕೊಳ್ಳತಕ್ಕದೆಂದೂ, ಅನಂತರದಲ್ಲಿ 'ಹಿಂದಿ'ಯನ್ನೇ ಪ್ರತಿಷ್ಠಾಪಿಸತಕ್ಕದ್ದೆಂದೂ ನಿರ್ಣಯಿಸಲಾಯಿತು. ಈ ಭಾಷಾವಿಧಿಯ ಸಂಖ್ಯೆ 343 ರಿಂದ 351.

ಆದರೆ, ಹದಿನೈದು ವರ್ಷಗಳಾದ ಮೇಲೆ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವಲ್ಲಿ ವಾದ—ವಿವಾದಗಳು ತಲೆದೋರಿದವು. ರಾಜಾಜಿಯವರು 'ಸ್ವರಾಜ್ಯ'-ಪತ್ರಿಕೆಯಲ್ಲಿ ಹೊರಗಿನಿಂದ ಬರುವ ಜನತಂತವು ಭಾಷೆಯ ಪ್ರಾಂತದಲ್ಲಿಯೇ ನೆಲೆಸುವಂತಾಗಬೇಕು—ಎಂದು ತಿಳಿಸಿದ್ದಾರೆ. ಉದಾಹರಣೆಗೆ ಮದರಾಸು ರಾಜ್ಯ ಸಿಲೋನಿನ ತಮಿಳರಿಗೆ ಪುನರ್ವಸತಿ ಕಲ್ಪಿಸಬೇಕು. ಮುಂದಾಗಿ ಭಾರತೀಯರಲ್ಲಿ ಭಾವೈಕ್ಯ (Emotional integration) ಅಗತವಾಗಿ ಉಂಟಾಗಬೇಕು. ರಾಷ್ಟ್ರದಲ್ಲಿ ಯಾರು ಎಲ್ಲಿ ಬೇಕಾದರೂ ವೃತ್ತಿಯನ್ನು ಅವಲಂಬಿಸಿ ಜೀವನ ನಡೆಸಲು ನಮ್ಮ ಸಂವಿಧಾನ ಅಧಿಕಾರ ನೀಡಿದೆ. ಪ್ರಜ್ಞಾವಂತರಾದ ಭಾರತೀಯರು ಅತಿರೇಕಕ್ಕೆ ಅವಕಾಶವೀಯದೆ ಸಂಯಮದಿಂದ ವರ್ತಿಸಿ, ಒದಗಿರುವ ಅವಕಾಶವನ್ನು ಸದುಪಯೋಗ ಪಥದಲ್ಲಿ ಕೊಂಡೊಯ್ಯಬೇಕು.

ಭಾಷಾವಾರು ಪ್ರಾಂತ್ಯರಚನೆಯಾದ ಹತ್ತು ವರ್ಷಗಳಲ್ಲಿ ಅಖಂಡ ಬಾರತದ ಪ್ರಗತಿ ಎಷ್ಟರಮಟ್ಟಿಗೆ ಸಾಗಿದೆ? ಸಾಮಾನ್ಯ ಜನತೆ ಭಾಷೆಯ ವಿಷಯವನ್ನು 'ಸಮಸ್ಯೆ'ಯನ್ನಾಗಿ ಪರಿಭಾವಿಸಿದೆಯೇ ಎನ್ನುವ ಸಂಗತಿಗಳು ನಿಜಕ್ಕೂ ವಿಚಾರಣೀಯ.

ಪ್ರತಿರಾಜ್ಯವೂ ತನ್ನ ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಮಾತ್ರವಲ್ಲದೆ ಆರ್ಥಿಕವಾಗಿ, ಸಾಮಾಜಿಕವಾಗಿ, ತಾಂತ್ರಿಕವಾಗಿ ಮುಂದುವರಿಯಲು ಸಾಕಷ್ಟು ಪ್ರಯತ್ನ ಮಾಡಿರುವುದು ನಿಜ. ಆದರೆ ಕನ್ನಡಿಗರು-ತಮಿಳರು-ತೆಲುಗರು ಎಂದು ಮುಂತಾಗಿ ಬೇರೆ ಬೇರೆ ಹೆಸರಿನಿಂದ ಪ್ರತ್ಯೇಕತಾ ಭಾವನೆಯನ್ನು ತೋರಿಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ ನಾವು ಭಾರತೀಯರೆಲ್ಲ ಒಂದು ಎಂಬ ವಿಶಾಲ ಭಾವನೆಯನ್ನು ಪ್ರತಿ ವಿಷಯದಲ್ಲಿಯೂ ತೋರಿಸಬೇಕು.

ಸ್ವಾತಂತ್ರ್ಯ-ಪೂರ್ವದಲ್ಲಿ ಆಸೇತು ಹಿಮಾಚಲ ಪರ್ಯಂತ ಇರುವ ಜನರೆಲ್ಲ ಒಂದು-ಎಂದು ಬಹುತೇಕವಾಗಿ ಇದ್ದ ಅಭಿಮಾನ, ಸ್ವಾತಂತ್ರ್ಯೋತ್ತರ ಕಾಲದಲ್ಲಿ


ತತ್ರಾಪಿ ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಕ್ರಮೇಣ ಮಾಯವಾಗುತ್ತಿರುವುದು ನಿಜಕ್ಕೂ ಶೋಚನೀಯ.

ಮೈಸೂರು–ಮಹಾರಾಷ್ಟ್ರ ಗಡಿ ಪ್ರಶ್ನೆಯಂತಹ ಕೆಲವು ಉದಾಹರಣೆಗಳನ್ನು ಬಿಟ್ಟರೆ, ರಾಜ್ಯ-ಪುನರ್ ರಚನೆಯಿಂದ ಸಾಕಷ್ಟು ಪ್ರಯೋಜನವಾಗಿದೆಯೆಂದು ತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ. ಉಕ್ಕಿನ ಕಾರ್ಖಾನೆ ಕುರಿತು ಆಂಧ್ರದ ಹಟಮಾರಿತನ, ಆಹಾರ ಸರಬರಾಜು ವಿಷಯದಲ್ಲಿ ಸಮೃದ್ಧ ರಾಜ್ಯಗಳ ಬಿಗುಮಾನ, ಕೃಷ್ಣಾ ಗೋದಾವರಿ ನೀರಿನ ವಿವಾದ-ಮುಂತಾದುವು ಸಮಸ್ಯೆಗಳಾಗಿಯೇ ಉಳಿದಿವೆ.

“ಭಾ ಷಾ ಭಿ ಮಾ ನ ವು ಸಾಂಸ್ಕೃತಿಕ ಜ್ಞಾನದ (ಪ್ರಜ್ಞೆಯ) ಉಸಿರು” ಎನ್ನುವ ಅಂಶ ನಿಜವಾದರೂ ಅದು ವಿಶಾಲ ಮನೋಭಾವನೆಯ ತತ್ತ್ವದಿಂದ ಕೂಡಿರಲೇಬೇಕು.

ನಮ್ಮ ಆರ್ಥಿಕಸ್ಥಿತಿ ಸಾಕಷ್ಟು ಸುಧಾರಿಸಿದ ಮೇಲೆ ರಾಜ್ಯಗಳ ರಚನೆಯಾಗಿದ್ದ ಪಕ್ಷದಲ್ಲಿ ನಾವು ಪ್ರಗತಿಯ ಪಥದಲ್ಲಿ ಮುನ್ನಡೆಯಲು ಸಾಧ್ಯವಾಗುತ್ತಿದ್ದಿತು. ಸಾಕಷ್ಟು ದುಷ್ಪರಿಣಾಮವನ್ನು ಕಂಡುಂಡ ಈ (ಪರ್ವ) ಸಮಯದಲ್ಲಿಯಾದರೂ—ಮತ್ತೊಮ್ಮೆ ಯೋಗ್ಯ ತಳಹದಿಯ ಮೇಲೆ ಭಾರತದ ನಕ್ಷೆಯನ್ನು ರಚಿಸಿಕೊಳ್ಳಬೇಕಾಗಿದೆ.

ಭಾಷಾಸಮಸ್ಯೆಯ ವಿಷಯದಲ್ಲಿಯಂತೂ ಪ್ರತಿಯೊಬ್ಬ ಭಾರತೀಯನೂ ತನ್ನ ಧೋರಣೆಯೇನೆಂಬುದನ್ನು ತೋರಿಸಲೇಬೇಕು. ವಿದ್ಯಾರ್ಥಿಗಳ ಚಳುವಳಿ ಅದಕ್ಕೆ ತಕ್ಕ ನಿದರ್ಶನ. ಉತ್ತರದವರು-ದಕ್ಷಿಣದವರು ಎಂಬ ಭೇದಬುದ್ಧಿಯುಂಟುಮಾಡದೆ ನಿಷ್ಪಕ್ಷಪಾತ ದೃಷ್ಟಿಯಿಂದ ಕೇಂದ್ರಸರ್ಕಾರ ನ್ಯಾಯವಹಿಸಬೇಕು-ಎಂದು ನಾವೆಲ್ಲ ಸ್ಪಷ್ಟಪಡಿಸದೆ ಗತ್ಯಂತರವಿಲ್ಲ.



ಅನುತ್ತೀರ್ಣತೆ

ಧ್ರುವಕುಮಾರ ಎಂ. ಕುಲಕರ್ಣಿ

ಇಂದು ನಾವು ಯಾವುದೇ ಪಬ್ಲಿಕ್ ಪರೀಕ್ಷೆಯ
ಪರಿಣಾಮದ ಕಡೆ ದೃಷ್ಟಿ ಬೀರಿದಾಗ ೫೦ % ಕ್ಕಿಂತಲೂ
ಹೆಚ್ಚು ಉತ್ತೀರ್ಣತೆಯನ್ನು, ಯಾವ ಪರೀಕ್ಷೆಯ
ಪರಿಣಾಮದಲ್ಲಿಯೂ ಕಾಣೆವು ಇದಕ್ಕೆ ಕಾರಣವೇನಿ
ರಬಹುದು ? ಇಂದಿನ ಶಿಕ್ಷಣದಲ್ಲಿ ಬಿಗುವಿಲ್ಲ ; ಶಿಕ್ಷಕರಿಗೆ
ಶಿಕ್ಷಣ ಒದಗಿಸುವ ಪದ್ಧತಿ ಚೆನ್ನಾಗಿ ಗೊತ್ತಿಲ್ಲ ;
ಮೊದಲು ವಿದ್ಯಾರ್ಥಿಗಳೇ ಚನ್ನಾಗಿಲ್ಲ ; ವಿದ್ಯಾರ್ಥಿಗಳ
ಪಾಲಕರು ವಿದ್ಯಾರ್ಥಿಗಳನ್ನು ಸರಿಯಾಗಿ ನೋಡುತ್ತಿ
ಲ್ಲ ಎಂಬಿವೇ ಮುಂತಾದ ಉತ್ತರಗಳು ಕಿವಿಗೆ ಬೀಳುವವು–
ನಾನಾ ಜನರಿಂದ.

ಪ್ರಾಥಮಿಕ ಶಿಕ್ಷಣ :

ಇಂದು ನಾವು ಪ್ರಾಥಮಿಕ ಶಿಕ್ಷಣದ ಬಗ್ಗೆ ದೃಷ್ಟಿ
ಹಾಯಿಸಿದಾಗ:—

ನಾವು ಮಗುವನ್ನು ಶಿಕ್ಷಣ ಕೊಡಿಸಬೇಕೆಂದು
ಪ್ರಾಥಮಿಕ ಶಾಲೆಗೆ ಸೇರಿಸಿದ ಮರುದಿನವೇ "ಕನ್ನಡ
ಒಂದನೆಯ ಪುಸ್ತಕ"ವನ್ನು ಕೈಯ್ಯಲ್ಲಿ ಹಿಡಿದುಕೊಂಡು
ಮನೆಗೆ ಬರುತ್ತದೆ. ಪಾಠವನ್ನು ತೆಗೆದು ಓದಿಸಿದಾಗ
ಸರಿಯಾಗಿ ಓದುತ್ತದೆ. ಆದರೆ........."ಇವನು ಬಸವ"
ಎಂದು ಓದಿತೆಂದು ಇಟ್ಟುಕೊಳ್ಳಿ. 'ಬ' ಮತ್ತು 'ವ'
ಗಳ ಮೇಲೆ ಬೆರಳಿಟ್ಟು ಇದು ಯಾವ ಅಕ್ಷರ ? ಎಂದು
ಕೇಳಿದರೆ ಆಗ ಮಗುವಿನಿಂದ ಯಾವ ಉತ್ತರವೂ
ಬಾರದು. ಇದಕ್ಕೆ ಕಾರಣವೆಂದರೆ ಪಾಠದಲ್ಲಿಯ
ವಾಕ್ಯಗಳನ್ನು ಶಿಕ್ಷಕರಿಂದಾಗಲಿ ಅಥವಾ ತನ್ನ ಸಂಗಡಿ
ಗರಿಂದಾಗಲಿ ಕೇವಲ ಮುಖಪಾಠ ಮಾಡಿರುತ್ತದೆಯೇ
ವಿನಾ ಎಳ್ಳಷ್ಟೂ ಅಕ್ಷರಜ್ಞಾನ ಆ ಮಗುವಿಗಿರುವುದಿಲ್ಲ.
ಪ್ರಾಥಮಿಕ ವಿದ್ಯೆಯೇ ಪ್ರೌಢವಿದ್ಯೆಯ ಬುನಾದಿ
ಯಾಗಿರುವುದರಿಂದ, ಪ್ರಾಥಮಿಕ ವಿದ್ಯೆ ಚೆನ್ನಾಗಿರಲೇ
ಬೇಕು. ಮಗುವಿಗೆ ಅಕ್ಷರಜ್ಞಾನವಾಗುವವರೆಗೂ
ಪುಸ್ತಕವನ್ನು ಅಪ್ಪಿ-ತಪ್ಪಿ ಸುಮ್ಮನೆ ಕಣ್ಣಿನಿಂದ
ನೋಡಲೂ ಕೊಡಬಾರದು. ಅದಕ್ಕಾಗಿ ಒಂದನೆಯ
ವರ್ಗಕ್ಕೆ ಸೇರಿಸುವುದಕ್ಕಿಂತಲೂ ಮುಂಚೆ ಬಾಲ
ಬೋಧೆಯನ್ನು ಕಲಿಸಿ ನಂತರ ಒಂದನೇ ವರ್ಗಕ್ಕೆ ಸೇರಿ
ದರೆ ಮಗುವಿನ ಅಕ್ಷರಜ್ಞಾನವೂ ಹೆಚ್ಚುವುದು, ಅಲ್ಲದೆ
ಮುಂದಿನ ವರ್ಗಗಳಲ್ಲಿ ಆ ಮಗು ಯಾವ ಅಡ್ಡಿ–ಆತಂಕ
ಗಳಿಲ್ಲದೆ ಉತ್ತೀರ್ಣವಾಗುತ್ತ ಹೋಗಬಹುದು.
ಎಳ್ಳಷ್ಟೂ ಅಕ್ಷರಜ್ಞಾನವಿಲ್ಲದ ವಿದ್ಯಾರ್ಥಿಗಳನ್ನು ೩ ನೇ
೪ ನೇ ತರಗತಿಗಳಲ್ಲಿ ಕಾಣಬಹುದು. ಇಂದು ಇದಕ್ಕೆ
ಕಾರಣವೆಂದರೆ:

ಒಬ್ಬ ಶಿಕ್ಷಕನು ಹಳ್ಳಿಯ ಶಿಕ್ಷಕನಾಗಿರುವನೆಂದಿಟ್ಟು
ಕೊಳ್ಳಿ. ಹಳ್ಳಿಯ ಹಿರಿಯರ ಮಕ್ಕಳು ವಿದ್ಯಾಭ್ಯಾಸ
ಕ್ಕಾಗಿ ಶಿಕ್ಷಕನಲ್ಲಿ ಬರುತ್ತಿದ್ದರೆ ಶಿಕ್ಷಕನು ಆ ಹಿರಿಯರ
ಮಕ್ಕಳನ್ನು, ಯೋಗ್ಯತೆ ಇಲ್ಲದಿದ್ದರೂ ಅವರನ್ನು
ಉತ್ತೀರ್ಣರನ್ನಾಗಿ ಮಾಡಲೇಬೇಕು. ಇಲ್ಲದಿದ್ದರೆ
ಶಿಕ್ಷಕನು ತುಂಬ ತೊಂದರೆಗೊಳಗಾಗ
ಬೇಕಾಗುತ್ತದೆ. ಒಂದು ವೇಳೆ ಇಂಥ ವಿದ್ಯಾರ್ಥಿ

ಗಳು ಪ್ರೌಢಶಾಲೆಯ ಮೆಟ್ಟಲನ್ನು ಹತ್ತಿ ಪಬ್ಲಿಕ್ ಪರೀಕ್ಷೆಗೆ ಕುಳಿತಾಗ 'ಅನುತ್ತೀರ್ಣತೆ' ಅವರ ಪಾಲಿಗೆ ಕಟ್ಟಿಟ್ಟದ್ದು. ಇದು ಹಳ್ಳಿಯಲ್ಲಿರುವ ಪರಿಸ್ಥಿತಿಯಾದರೆ, ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚಾಗಿರುವುದರಿಂದ ಕೇವಲ ಸರಕಾರಿ (Government) ಶಾಲೆಗಳಲ್ಲದೆ, ಖಾಸಗಿ (Private) ಶಾಲೆಗಳೂ ಇರುವುದು ಅನಿವಾರ್ಯ. ಕೆಲವೊಂದುಸಲ ಅನಿವಾರ್ಯವಾಗಿ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಬೇಕಾಗುತ್ತದೆ. ಕೆಲವು ಖಾಸಗಿ ಶಾಲೆಗಳ ಮುಖ್ಯ ಗುರಿ ಎಂದರೆ 'ದುಡ್ಡು ಮಾಡುವುದು !' ವಿದ್ಯಾರ್ಥಿಯಲ್ಲಿ ಯೋಗ್ಯತೆ ಇರಲಿ, ಇಲ್ಲದಿರಲಿ, 'ಫೀ' ಕೊಟ್ಟ ವಿದ್ಯಾರ್ಥಿಯು ಮಾತ್ರ 'ಪಾಸ್' ! ಇಂತಹ ವಿದ್ಯಾರ್ಥಿ ಪಬ್ಲಿಕ್ ಪರೀಕ್ಷೆಯಲ್ಲಿ ಪಾಸಾಗಬಹುದೆ ?

ಪ್ರೌಢಶಿಕ್ಷಣ :—

ಇನ್ನು ಪ್ರೌಢಶಾಲೆಯ ಶಿಕ್ಷಣದ ಬಗ್ಗೆ ಕಣ್ಣು ಹಾಯಿಸಿದಾಗ :

ಸಾಮಾನ್ಯವಾಗಿ ಪ್ರೌಢಶಾಲೆಯಲ್ಲಿ ಕಾಲಿರಿಸಿದಾಗ ವಿದ್ಯಾರ್ಥಿಯು 'ನನ್ನ ಸಮಾನರಾರಿಹರು ?' ಎಂಬ ಹಾಡನ್ನು ಸಿದ್ಧಪಡಿಸಲು ಪ್ರಯತ್ನಿಸುತ್ತಿರುತ್ತಾನೆ. ಕೆಲವು ವೇಳೆ ಶಿಕ್ಷಕರ ನೀತಿಯ ಮಾತುಗಳಿಗೆ ಅವಿವೇಕ ಉತ್ತರವೀಯಲು ಅವನ ಗಂಡೆದೆ ಸಿದ್ಧವಾಗಿರುತ್ತದೆ. ಇದು ಕೆಲವು ವಿದ್ಯಾರ್ಥಿಗಳ ಸ್ವಭಾವವಾಗಿದ್ದರೆ ಇನ್ನು ಕೆಲವು ವಿದ್ಯಾರ್ಥಿಗಳು ಮಾನಸಿಕ ತೊಂದರೆಗೊಳಗಾಗಿರುತ್ತಾರೆ. ಇನ್ನೂ ಕೆಲವರಿಗೆ ಜೀವನವೇ ಒಂದು ಪ್ರಶ್ನೆಯಾಗಿರುತ್ತದೆ. ಇಂಥ ಆತಂಕಗಳಿಂದ ವಿದ್ಯಾರ್ಥಿಯು ಅಶಕ್ತನಾಗುವುದು (ಅಭ್ಯಾಸದಲ್ಲಿ) ಸಹಜ. ವಿದ್ಯಾರ್ಥಿಯು ಅಭ್ಯಾಸದಲ್ಲಿ ಅಶಕ್ತನಾಗಲು ಇನ್ನೊಂದು ಬಹುಮುಖ್ಯ ಕಾರಣವೆಂದರೆ ಐಚ್ಛಿಕ ವಿಷಯಗಳ (Electives) ಆಯ್ಕೆ. ನಿಜವಾಗಿಯೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಐಚ್ಛಿಕ ವಿಷಯದ ಬಗ್ಗೆ ಪರಿಪೂರ್ಣ ಜ್ಞಾನವಿರುವುದಿಲ್ಲ. ತನ್ನ ಮಿತ್ರನು P.C.M. ತೆಗೆದುಕೊಂಡರೆ ತಾನೂ P.C.M. ತೆಗೆದುಕೊಳ್ಳುವನು (ಇಚ್ಛೆ ಇರಲಿ-ಬಿಡಲಿ) ಇನ್ನು ಕೆಲವು ವಿದ್ಯಾರ್ಥಿಗಳಿಗೆ ಐಚ್ಛಿಕ ವಿಷಯವೆಂದರೇನು ?

ಎಂಬುದು ಗೊತ್ತಿರುತ್ತದೆ ತನಗೆ ಅಭಿರುಚಿ ಇ
ವಿಷಯಗಳನ್ನು ಆಯ್ದುಕೊಂಡರೆ ಆಗ ಅವನ ಪೋಷ
ಅಭ್ಯಂತರದಿಂದ ಅವರು ಸೂಚಿಸಿದ ಅನೈಚ್ಛಿಕ ವಿಷ
ಗಳನ್ನೇ ತನ್ನ ಐಚ್ಛಿಕ ವಿಷಯಗಳನ್ನಾಗಿ ಆಯ್ದುಕೊ
ಬೇಕಾಗುತ್ತದೆ. ಉದಾಹರಣೆಗೆ—ಸಾಹಿತ್ಯದಲ್ಲಿ
ರುಚಿ ಇದ್ದವನು 'ಗಣಿತ' ವನ್ನು ಆರಿಸುವುದು; ಗ
ದಲ್ಲಿ ಇಚ್ಛೆಯಿದ್ದವನು 'ಜೀವಶಾಸ್ತ್ರ' (ಡಾಕ್ಟರಾಗ
ಬಯಸುವದು ಇತ್ಯಾದಿ. ಹೀಗೆ ಆಗುವುದರಿಂದ ವಿ
ರ್ಥಿಯು ತನ್ನ ಗುರಿಯನ್ನೇ ಮುಟ್ಟದೆ ಇರಬಹು
ಆದುದರಿಂದ ಐಚ್ಛಿಕ ವಿಷಯಗಳನ್ನು ಕೊಡಿಸುವ
ಪಾಲಕರೂ ಹಾಗು ಶಿಕ್ಷಕರೂ ವಿದ್ಯಾರ್ಥಿಯ ಅಭಿರು
ಯಾವ ವಿಷಯಗಳಮೇಲೆ ಇದೆ ಎಂಬುದನ್ನು ಅರಿ
ಐಚ್ಛಿಕ ವಿಷಯಗಳನ್ನು ಕೊಡಿಸಬೇಕು. ಕಲೆ(Ar
ಯಲ್ಲಿ ಅಭಿರುಚಿ ಇದ್ದ ವಿದ್ಯಾರ್ಥಿಗೆ ಡಾಕ್ಟರ್ ಅಥ
ಇಂಜಿನಿಯರ್ ಆಗಿ ಮಾಡಬೇಕೆಂಬ ಉದ್ದೇಶವುಳ್ಳ
ರಾಗಿ ಒಂದುವೇಳೆ ಜೀವಶಾಸ್ತ್ರ ಅಥವಾ 'ಗಣಿ
ಗಳನ್ನು ಐಚ್ಛಿಕ ವಿಷಯಗಳನ್ನಾಗಿ ಕೊಡಿಸಿದರೆ,
ವಿದ್ಯಾರ್ಥಿಯು ಕೊನೆಗೆ ಗುರಿಯನ್ನೇ ಮುಟ್ಟದೆ
ಬಹುದು. ಇಲ್ಲವೇ ಹಲವಾರು ದಂಡಯಾತ್ರೆಗಳ
ಕೈಕೊಳ್ಳಬೇಕಾಗಬಹುದು. ಇದರಿಂದ ಧನಹಾ
ಜಿಗುಪ್ಸೆ, ವಿದ್ಯೆಯ ಬಗ್ಗೆ ಅನಾದರ ಹುಟ್ಟುವ
ಸ್ವಾಭಾವಿಕ.

ಕಾಲೇಜು ಶಿಕ್ಷಣ :

ಪ್ರೌಢ ಶಿಕ್ಷಣದನಂತರ ವಿದ್ಯಾರ್ಥಿಯು ಕಾಲೇ
ಅಥವಾ 'ಡಿಪ್ಲೋಮಾ' ಜೀವನದತ್ತ- ದೃಷ್ಟಿಹಾ
ದಾಗ—

ಈ ಮಟ್ಟಕ್ಕೆ ಬಂದ ಕೆಲ ವಿದ್ಯಾರ್ಥಿಗಳಿಗ
ಭೂಮಿ, ಆಕಾಶಗಳ ಅರಿವೂ ಇರುವುದಿಲ್ಲವೆನ್ನಬಹು
ಬೇಕಾದಾಗ ಕ್ಲಾಸಿಗೆ ಬರುವದು, ಬೇಡವಾದ
ಎದ್ದು ಹೋಗುವದು ತಮ್ಮ 'ಜನ್ಮಸಿದ್ಧ ಹಕ್ಕು' ವ
ಭಾವಿಸಿರುತ್ತಾರೆ. ಇಂಥ ಬೆಳೆದ ವಿದ್ಯಾರ್ಥಿಗ
ಬುದ್ಧಿವಾದ ಹೇಳಲು ಗುರುಗಳೆನಿಸಿಕೊಂಡ ಲೆಕ್ಚ
ಪ್ರೊಫೆಸರ್ ಅಷ್ಟಾಗಿ ಇಷ್ಟಪಡುವುದಿಲ್ಲ. ಅಲ್ಲದೆ
—ಚಿಕ್ಕ ಬೇಡಿಕೆಗಳಿಗೆಲ್ಲ ಮುಷ್ಕರ ಹೂಡುವುದು ಇ

ಕಾಲೇಜು ವಿದ್ಯಾರ್ಥಿಗಳಲ್ಲಿ ಒಂದು ತರದ 'ಫ್ಯಾಶನ್' ಆಗಿದೆ. ಈ ರೀತಿಯಾಗುವುದರಿಂದ ಅಭ್ಯಾಸಕ್ಕೆ ತೊಂದರೆಯಾಗಿ ಅನುತ್ತೀರ್ಣ—ವಿದ್ಯಾರ್ಥಿಗಳ ಸಂಖೆ ಹೆಚ್ಚಾಗಿ ಬೆಳೆಯುವದು. ಆಗ "ಕೋಚಿಂಗ್ ಚೆನ್ನಾಗಿರಲಿಲ್ಲ ;" "ಮೇಷ್ಟ್ರಿಗೆ ಲೆಕ್ಚರ್ ಕೊಡೋದಕ್ಕೇ ಬರೋದಿಲ್ಲ ;" ಎಂದು ಮುಂತಾಗಿ ಕೆಲ ವಿದ್ಯಾರ್ಥಿಗಳು ಗೊಣಗುವುದುಂಟು. ಈ ತರದ ಉದ್ಗಾರವನ್ನು ಕೇಳಿದ ಲೆಕ್ಚರರು ವಿದ್ಯಾರ್ಥಿಗಳ ಯೋಗ್ಯತೆಯನ್ನು ಪರೀಕ್ಷಿಸಲು ಟೆಸ್ಟ್(Test)ಇಟ್ಟರೆ, ವಿದ್ಯಾರ್ಥಿಗಳೆಲ್ಲರೂ ಆ ಟೆಸ್ಟಿಗೆ ಹಾಜರ್ (Attend) ಆಗುವದೇ ಇಲ್ಲ. ಅಭಿರುಚಿಯುಳ್ಳ ವಿದ್ಯಾರ್ಥಿಗಳು ಒಂದು ವೇಳೆ ಅದರಲ್ಲಿ ಉತ್ಸಾಹ ತೋರಿದರೆ, ಬೇರೆ ವಿದ್ಯಾರ್ಥಿಗಳು ಅವರನ್ನು ತಡೆಯುವರು. ಈ ರೀತಿಯಾಗುವದರಿಂದ ವಿದ್ಯಾರ್ಥಿಗೆ ತನ್ನ ಅಭ್ಯಾಸದ ಮಟ್ಟದ ಬಗ್ಗೆ ಯಾವ ತರದ ಆತ್ಮ-ವಿಶ್ವಾಸವೂ ಬೆಳೆಯದೆ ಹೋಗುವದು. ಇದರಿಂದ ಅವನು ಪಬ್ಲಿಕ್ ಪರೀಕ್ಷೆಯಲ್ಲಿ ಅನುತ್ತೀರ್ಣನಾಗುವದು ಖಂಡಿತ.

ಪಬ್ಲಿಕ್ ಪರೀಕ್ಷೆಗಳ ಉತ್ತೀರ್ಣತೆ ಚೆನ್ನಾಗಿರಬೇಕಾದರೆ :—

೧) ಪ್ರಾಥಮಿಕ ಶಿಕ್ಷಣದಿಂದಲೂ ವಿದ್ಯಾರ್ಥಿಯ ವಿದ್ಯೆಯು ಬೆಳವಣಿಗೆ ಸರಿಯಾಗಿರಬೇಕು. ಇದರ ಬಗ್ಗೆ ಶಿಕ್ಷಕರಿಗಿಂತಲೂ ಹೆಚ್ಚಾಗಿ ವಿದ್ಯಾವಂತ-ಪಾಲಕರು ಲಕ್ಷ್ಯ ಕೊಡಬೇಕು.

೨) ಪ್ರೌಢಶಾಲೆಯಲ್ಲಿ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳುವಾಗ ವಿದ್ಯಾರ್ಥಿಯ ಅಭಿರುಚಿಯನ್ನರಿತು ಕೊಡಿಸಬೇಕು. ಇದರ ಬಗ್ಗೆ ಪಾಲಕರಾಗಲೀ, ಶಿಕ್ಷಕರಾಗಲೀ, ಯಾವರೀತಿಯ ಒತ್ತಾಯವನ್ನೂ ವಿದ್ಯಾರ್ಥಿಗೆ ಮಾಡದಿರುವುದು ಉತ್ತಮ.

೩) ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ-ಶಿಕ್ಷಣದ ಜೀವನದಲ್ಲಿ ವಿದ್ಯಾರ್ಥಿಯು ಆಲಸ್ಯದಿಂದಿರದೆ, ಬಹು ಪರಿಶ್ರಮಿಯಾಗಿದ್ದು, ಗುರುಗಳು ಹೇಳುವುದನ್ನು ಚೆನ್ನಾಗಿ ಕೇಳಿ ಅದರ ಬಗ್ಗೆ ಹೆಚ್ಚಿನ ಜ್ಞಾನಗಳಿಸಲು ಪ್ರಯತ್ನಿಸಬೇಕು. ವಿನಾಕಾರಣ-ಚಿಕ್ಕಪುಟ್ಟ ಬೇಡಿಕೆಗಳಿಗೂ ಸಹ ಮುಷ್ಕರ (Strike) ಹೂಡುವುದನ್ನು ಕಾಲೇಜು ವಿದ್ಯಾರ್ಥಿಗಳು ಖಂಡಿತ ಬಿಡಬೇಕು.

ಈ ರೀತಿಯಾಗಿ, ಸ್ವತಃ ವಿದ್ಯಾರ್ಥಿಗಳು ಶಿಕ್ಷಕರು ಮತ್ತು ಪಾಲಕರು ತಂತಮ್ಮ ಕರ್ತವ್ಯಗಳನ್ನು ಅರಿತು ಪ್ರಾಮಾಣಿಕರಾಗಿ ವರ್ತಿಸಿದರೆ ಮಾತ್ರ ಪಬ್ಲಿಕ್ ಪರೀಕ್ಷೆಗಳ ಅನುತ್ತೀರ್ಣತೆಯನ್ನು ಕಡಿಮೆಮಾಡಲು ಸಾಧ್ಯ.

ಜೈಹಿಂದ್



ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆಯಲಿರುವ

ಸುವರ್ಣ ಮತ್ತು ರಜತ

ಮಹೋತ್ಸವಗಳ ಬಗೆಗೆ ಒಂದು ಮನವಿ

ಈ ಶ್ರೀ ಸಿದ್ಧಗಂಗಾ ಕ್ಷೇತ್ರವು ಪುರಾತನ ಕಾಲದಿಂದ ಪರಂಪರೆಯಾಗಿ ಶಿವಯೋಗಿವರ್ಯರ ಆವಾಸದಿಂದ ಪಾವನ ಪುಣ್ಯಸ್ಥಳವಾಗಿದೆ. ತುಮಕೂರು ನಗರ ಸಮೀಪ ಗಿರಿಗಹ್ವರಗಳ ತಪ್ಪಲಿನ ಮನೋಹರ ವನಪ್ರದೇಶದಲ್ಲಿ ಪ್ರಶಾಂತವಾದ ಈ ಪವಿತ್ರಾಶ್ರಮದಲ್ಲಿ ಮಾನವನ ಲೇಸಬಯಸಿ ಅವತರಿಸಿದ ಶರಣರ ಶ್ರೇಣಿಯಲ್ಲಿ ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ಉದ್ದಾನ ಶಿವಯೋಗೀಂದ್ರರು ಶಿವಭಕ್ತಿ–ಜ್ಞಾನ-ಯೋಗ ಕ್ರಿಯಾಚಾರ ಸಂಪನ್ನರಾಗಿ ಸಮಾಜದ ಸಮಸ್ತರ ಪೂಜ್ಯತೆಯನ್ನು ಪಡೆದು ಸುಪ್ರಸಿದ್ಧರಾಗಿದ್ದರು. ಜ್ಞಾನ ಪಕ್ಷಪಾತಿ, ಬಡವರ ಬಂಧುವಾದ ಅವರು ವರ್ಣಭೇದಗಳನ್ನೆಣಿಸದೆ ಎಲ್ಲಾ ಮತೀಯ ವಿದ್ಯಾರ್ಥಿಗಳಿಗಾಗಿ ಒಂದು ಶ್ರೀಸಿದ್ಧಲಿಂಗೇಶ್ವರ "ವೇದ ಮತ್ತು ಸಂಸ್ಕೃತ ಪಾಠಶಾಲೆ" ಮತ್ತು ಅದರ ಅಂಗವಾಗಿ "ಉಚಿತ ವಿದ್ಯಾರ್ಥಿನಿಲಯ"ವನ್ನು 1917ನೇ ವರ್ಷದಲ್ಲಿ ಪ್ರಾರಂಭಿಸಿದರು. ಸತ್ಕೀರ್ತಿಕಾಯರಾದ ಅವರ ತರುವಾಯ ಶ್ರೀಮಠದ ಕಾರ್ಯಭಾರವನ್ನು ವಹಿಸಿರುವ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ತಮ್ಮ 26-27 ವರ್ಷಗಳ ದಕ್ಷಆಡಳಿತಾವಧಿಯಲ್ಲಿ ಈ ಪಾಠಶಾಲೆಯನ್ನು "ವೇದ ಮತ್ತು ಸಂಸ್ಕೃತ ಮಹಾಪಾಠಶಾಲೆ" ಯನ್ನಾಗಿ (*Samskita College*) ಅಭಿವೃದ್ಧಿಗೊಳಿಸಿರುವುದಲ್ಲದೆ, ಅತಿ ದೊಡ್ಡ ಪ್ರಮಾಣದ ರೆಸಿಡೆನ್ಷಿಯಲ್ ಹೈಸ್ಕೂಲು, ಟೀಚರ್ಸ್ ಟ್ರೈನಿಂಗ್ ಕಾಲೇಜು, ಪಂಡಿತ ಪರೀಕ್ಷೆಯ ಸ್ಕೂಲು, ಮಾಧ್ಯಮಿಕ ಪಾಠಶಾಲೆಗಳನ್ನು ನಡೆಸುತ್ತ ಜಾತಿ-ಮತಗಳೆಂಬ ಸಂಕುಚಿತ ಭಾವವಿಲ್ಲದೆ 3,00[illegible] ಮೀರಿದ ಸರ್ವ ಮತಸ್ಥರ ವಿದ್ಯಾರ್ಥಿಗಳ ಅಶನ-ವಸ[illegible] "ಉಚಿತ ವಿದ್ಯಾರ್ಥಿನಿಲಯ"ವನ್ನು ವಿಸ್ತರಿಸಿದ್ದಾ[illegible] ಮಠದ ಆವರಣದಲ್ಲಿರುವ ದಿವ್ಯ-ಭವ್ಯ ವಿದ್ಯಾಮಂ[illegible]ಗಳು, ವಿದ್ಯಾರ್ಥಿನಿಲಯಗಳು, ಅವುಗಳಲ್ಲಿ ಜೇನು[illegible]ಡಿನಂತೆ ತುಂಬಿ ತುಳುಕುತ್ತಿರುವ ವಿದ್ಯಾರ್ಥಿಗ[illegible] ಕಾಲಕಾಲಕ್ಕೆ ಶ್ರೀಗಳವರ ಸನ್ನಿಧಿಯಲ್ಲಿ ಸಾಮೂ[illegible]ವಾಗಿ ಭಯಭಕ್ತಿಯಿಂದ ದೇವರ ಪ್ರಾರ್ಥನೆಯ[illegible] ಮಾಡುವುದು, ವಿದ್ಯಾವ್ಯಾಸಂಗವನ್ನು ಸಾಂಗವ[illegible] ಮಾಡುತ್ತಾ, ಊಟ-ವಸತಿಗಳಿಂದ ಸಂತೃಪ್ತರ[illegible] ಆಟ-ಪಾಟವಾಡುತ್ತ ಝೇಂಕರಿಸುತ್ತಿರುವುದು ಸ[illegible]ಗಿನ ಸುಗ್ಗಿ.

ಶ್ರೀಗಳ ಆತ್ಮೀಯ ಪ್ರೇಮ ಪುತ್ಥಳಿಯಂತಿ[illegible] "ವೇದ ಮತ್ತು ಸಂಸ್ಕೃತ ಮಹಾಪಾಠಶಾಲೆ"ಯ ಮ[illegible] "ಉಚಿತ ವಿದ್ಯಾರ್ಥಿನಿಲಯ"ದ ಐವತ್ತು ವರ[illegible] ಪ್ರಾಯವು ವೈಭವದಿಂದ ತುಂಬಿ ತುಳುಕುತ್ತಿರುವ ಸಂತೋಷಭರಿತ ಸಮಯದಲ್ಲಿ ಅವುಗಳ "ಸುವ[illegible] **ಮಹೋತ್ಸವ**'ಗಳನ್ನು ಸ್ಮರಣೀಯವಾಗಿ ಮೆರೆಯ[illegible] ಬೇಕೆಂಬ ಶ್ರೀಸ್ವಾಮಿಗಳ ಇಚ್ಛೆಯು ಸಹಜ ಮಾ[illegible]ವಾತ್ಸಲ್ಯವೇ ಸರಿ.

ಶ್ರೀಗಳ ಚರಿತ್ರಾರ್ಹವಾದ ಆಡಳಿತವು 26[illegible] ವರ್ಷಗಳ ಪ್ರಾಪ್ತವಯಸ್ಸನ್ನು ಯಶಸ್ವಿಯಾಗಿ ದ[illegible] ಮುಂದುವರಿಯುತ್ತಿರುವ ಇದೇ ಸಮಯದಲ್ಲಿ [illegible]

ದಿಂದ ಉಪಕೃತರಾಗಿ ದೇಶ ವಿದೇಶದ ನಾನಾ ಕ್ಷೇತ್ರ ಗಳಲ್ಲಿ ಗಣ್ಯರಾಗಿ ಬಾಳುತ್ತಿರುವ ಹತ್ತಾರು ಸಾವಿರ ಶ್ರೀ ಕ್ಷೇತ್ರದ ಹಳೇ ವಿದ್ಯಾರ್ಥಿ ಮಹಾಶಯರು ಸ್ವಾಮಿಗಳವರ ರಜತ ಮಹೋತ್ಸವವನ್ನು, ಮೇಲ್ಕಂಡ ಸಂಸ್ಥೆಗಳ ಸುವರ್ಣ ಮಹೋತ್ಸವಗಳ ಕಾಲದಲ್ಲಿ ವಿಜೃಂಭಣೆಯಿಂದ ಆಚರಿಸಿ, ಏನಿಲ್ಲೆಂದರೂ ಕೆಲವು ಲಕ್ಷರೂಪಾಯಿ ಮೊತ್ತದ ನಿಧಿಯೊಂದನ್ನು "ಹೆತ್ತ ತಾಯಿಪಕೃತಿಗೆ ನಿವೃತ್ತಿ ಶಿಶುಗಳಲುಂಟೆ" ಎಂಬ ವಿನಮ್ರ ಭಾವದಿಂದ ಅರ್ಪಿಸಬೇಕೆಂದು ಸಿದ್ಧರಾಗುತ್ತಿರುವರು.

ಶ್ರೀಸ್ವಾಮಿಗಳವರು ಈ ಲೋಕದ ಕಷ್ಟನಿಷ್ಟ ನಿವಾರಕವೂ. ಕಾಮಧೇನು–ಕಲ್ಪವೃಕ್ಷ ಸದೃಶವೂ ಆದ "ಕಾಯಕವೇ ಕೈಲಾಸ'' ವೆಂಬ ಪರಮ ಭಕ್ತಿ–ತತ್ವಾಧಾರದ ಮೇಲೆ ದಿವ್ಯ-ಭವ್ಯ ಸಮಾಜವನ್ನು ರಚಿಸುವ ಉದ್ಯೋಗಶೀಲರು. ಸದಾ ಶಿವಪ್ರಸಾದ ಸಂತುಷ್ಟರೂ, ಜಿತೇಂದ್ರಿಯರೂ, "ಶಿವಂ ಸತ್ಯಂ ಸುಂದರಂ" ಎಂಬ ಪರಮಾರ್ಥವಿದರೂ ಆಗಿರುವ ಅವರು, ಜೀವನು ತನ್ನ ಸಾಮರಸ್ಯ ಭಕ್ತಿ-ಶಕ್ತಿ ಸಾಮರ್ಥ್ಯದಿಂದ ತನಗೆ ದೈವದತ್ತವಾದ ಸಲಕರಣೆ-ಸಾಮಗ್ರಿಗಳನ್ನು ಹದವಾಗಿ ಉಪಯೋಗಿಸಿ ನಿರಾಕಾರನಾದ ದೇವದೇವನನ್ನು ಸಾಕಾರನನ್ನಾಗಿ ತನ್ನಲ್ಲಿ ಮೂಡಿಸಬೇಕೆಂಬ ಧೀರೋದಾತ್ತ ವಿಶ್ವಾಸವಂತರಾಗಿ, ಸಮಾಜದ ಸರ್ವತೋಮುಖ ಅಭ್ಯುದಯಕ್ಕಾಗಿ ನಿಸ್ಸೀಮ ಕಾಯಕದಲ್ಲಿ ನಿರಂತರ ನಿರತರರಾಗಿರುವುದು ಅವರ ಸಹಜಾನಂದವೃತ್ತಿ. ಪ್ರತಿನಿತ್ಯ ತ್ರಿಕಾಲದಲ್ಲಿ ಪರಮ ನಿಷ್ಠೆಯಿಂದ ಶಿವನ ಧ್ಯಾನ–ಪೂಜಾಸಕ್ತರಾಗಿ ಸಚ್ಚಿತ್ಸುಖರಸ–ಮಗ್ನ ಚಿತ್ತರಾಗಿರುವುದೇ ಅವರ ಅವ್ಯಯ, ಅಚ್ಯುತ ಶಕ್ತಿಯ ಮೂಲದ ಮಹಾ ಮೂಲವಾಗಿದೆ.

ಶ್ರೀಗಳ ಕಾರ್ಯ ಕ್ಷೇತ್ರವು ಸ್ಥೂಲ ಸೂಕ್ಷ್ಮ ರೂಪದಿಂದ ವಿಸ್ತಾರವಾಗಿದೆ. "ಬೀಸುವ ಗಾಳಿಗೆ ಮೈಯೆಲ್ಲ ಕೈ" ಎಂಬಂತೆ ಅವರ ಚಲನ-ವಲನಗಳು ಅಖಂಡ ಅವಿರಳ ಸತ್ಕ್ರಿಯಾತ್ಮಕವಾಗಿವೆ. ಅವುಗಳನ್ನು ತುಂಡು ತುಂಡಾಗಿ ವಿಂಗಡಿಸಿದರೆ ಅಂದಗೆಡಿಸಿದ ಅಪಚಾರವಾಗಬಹುದಾದರೂ, ಮಗುವಿನ ತೊದಲು ಮಾತುಗಳು ತಾಯಿಗೆ ವಿನೋದವೆಂಬ ವಿಶ್ವಾಸದಿಂದ, ಅವರ ಕೆಲವು ಕಾರ್ಯಗಳನ್ನು ಸಂಕ್ಷೇಪವಾಗಿ ಉಲ್ಲೇಖಿಸಬಹುದು. ಶ್ರೀಕ್ಷೇತ್ರದಲ್ಲಿರುವ ವಿದ್ಯಾ ಸಂಸ್ಥೆಗಳ ಜೊತೆಗೆ ಶ್ರೀ ಕ್ಷೇತ್ರಕ್ಕೆ ಸಮೀಪವಾಗಿ ತುಮಕೂರು ನಗರದ ಸರಹದ್ದಿನಲ್ಲಿ ಸರ್ವಾಂಗಭರಿತ ಇಂಜಿನೀಯರಿಂಗ್ ಕಾಲೇಜು, ಫಸ್ಟ್‌ಗ್ರೇಡ್ ಸೈನ್ಸ್ ಮತ್ತು ಸಂಜೆ ಕಾಲೇಜುಗಳು, ಟೀಚರ್ಸ್ ಟ್ರೈನಿಂಗ್ ಕಾಲೇಜು, ಹೈಸ್ಕೂಲು, ಗ್ರಾಮಾಂತರ ಪ್ರದೇಶದಲ್ಲಿ ಎಂಟು ಹೈಸ್ಕೂಲುಗಳು ಮತ್ತು ಮೂರು ವಿದ್ಯಾರ್ಥಿ ನಿಲಯಗಳು, ಇವಿಷ್ಟನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಮುಂದೆ ಅಸ್ತಿತ್ವಕ್ಕೆ ಬರಲೆಂದು ಹಾರೈಸಬಹುದಾದ ಶ್ರೀ ಸಿದ್ಧಗಂಗಾ ವಿಶ್ವವಿದ್ಯಾನಿಲಯಭಾನುವಿನ ಅರುಣೋದಯದ ಮುನ್ಸೂಚಿಗಳಂತಿವೆ ಈ ಎಲ್ಲಾ ಸಂಸ್ಥೆಗಳು. ವರ್ಷಂಪ್ರತಿ ಮಹಾಶಿವರಾತ್ರಿ ಸಮಯದಲ್ಲಿ ನಡೆಸುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ರಥೋತ್ಸವದ ಜಾತ್ರೆಯಲ್ಲಿ ಅತಿ ಉತ್ತಮ ತರದ ವ್ಯವಸಾಯ ಮತ್ತು ಕೈಗಾರಿಕಾ ವಸ್ತು ಪ್ರದರ್ಶನವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಿ ಮಠದ ಆವರಣದಲ್ಲಿ ನೆರೆಯುವ ಜನಗಳು ವಿವಿಧ ಉದ್ಯೋಗಗಳಲ್ಲಿ ವಿಶೇಷ ಪರಿಚಯ-ಪರಿಶ್ರಮ ಸಂಪಾದಿಸುವ ; ಮತ್ತು ವಿಶೇಷ ಪೂಜೆ-ಉತ್ಸವ, ಸಂಗೀತ-ನಾಟಕ-ನೃತ್ಯ-ಲಾವಣಿ ಮುಂತಾದ ಕಾರ್ಯಕಲಾಪಗಳಿಂದ ಅವರು ಸದ್ಭಾವೋತ್ಕರ್ಷಿತರಾಗಿ ಸುಸಂಸ್ಕೃತರಾಗುವ ಅವಕಾಶವನ್ನು ಶ್ರೀಗಳು ಕಲ್ಪಿಸಿಕೊಡುತ್ತಾರೆ. ಜಾತ್ರೆಯ 10-12 ದಿನ ಸೇರುವ 4-5 ಲಕ್ಷ ಸಂಖ್ಯೆಯ ಜನ ಸಮೂಹಕ್ಕೆ ದಾಸೋಹವನ್ನು ನಡೆಸುತ್ತಾರೆ. ಅನಾಥರಿಗೂ ಮತ್ತು ದೇವರ ಪೂಜೆ, ಪರಮಪಾವನ ಶ್ರೀ ಸಿದ್ಧಗಂಗಾ ತೀರ್ಥಸ್ನಾನ, ಶ್ರೀಗಳ ದರ್ಶನಾಶೀರ್ವಾದಗಳಿಗೆ ಬರುವ ಯಾತ್ರಿಕರಿಗೂ, ಹೀಗೆ ಸಹಸ್ರಾರು ಜನರಿಗೆ ಪ್ರತಿನಿತ್ಯ ದಾಸೋಹದಲ್ಲಿ ಊಟವಾಗುತ್ತದೆ. ವರ್ಷವಿಡೀ ಹತ್ತಾರು ಲಕ್ಷ ಜನಗಳಿಗಾಗಿ ಶ್ರೀಗಳವರು ನಡೆಸುತ್ತಿರುವ ದಾಸೋಹದ ಪ್ರಮಾಣ, ಮತ್ತು ಅದರ ಪೂರ್ವ ಸಿದ್ಧತೆಗಾಗಿ ಬೇಕಾದ ಸನ್ನಾಹ, ಶ್ರಮ, ವ್ಯವಸ್ಥೆಗಳು ಅಳತೆಗೆ ಅಪಾರ. ಇಲ್ಲಿ ಉದಾರವಾಗಿ ದೊರೆಯುವ ಸೌಕರ್ಯ-ಸೌಲಭ್ಯಗಳಿಂದಾಗಿ, ಹೊರಗಿನ ಅನೇಕ ಸಂಘ-ಸಂಸ್ಥೆಗಳು ಶಿಬಿರ-ಸೆಮಿನಾರ್

ಸಭೆಗಳನ್ನು ಮಠದ ಆವರಣದಲ್ಲಿ ಆಗಾಗ್ಗೆ ನಡೆಸುತ್ತಾರೆ. ಅನೇಕ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಸಭೆ-ಸಮಾರಂಭ-ಉತ್ಸವಾದಿಗಳಲ್ಲಿ ಅಧ್ಯಕ್ಷರಾಗಿಯೋ, ಪ್ರವಚನಕಾರರಾಗಿಯೋ ಭಾಗವಹಿಸಲು ಮೇಲಿಂದ ಮೇಲೆ ಪ್ರೀತ್ಯಾದರಗಳಿಂದ ಬರುವ ಆಹ್ವಾನಗಳನ್ನು ಮನ್ನಿಸಿ,ಆ ಕೂಟಗಳಲ್ಲಿ ತಮ್ಮ ನಿರರ್ಗಳ ದಿವ್ಯ ವಾಕ್‌ಝರಿಯಿಂದ ಜನರ ಮನವನ್ನು ಸದಸದ್ವಿವೇಕದತ್ತ ಒಲಿಸುತ್ತಾರೆ ಮತ್ತು ಜನರೊಡನೆ ಸೌಜನ್ಯ ವಚನ-ವರ್ತನೆಗಳಿಂದ ಆತ್ಮೀಯ ಸಂಪರ್ಕವನ್ನು ಬೆಳೆಸುತ್ತಾರೆ. ತಮ್ಮ ಘನತೆ-ಗೌರವಗಳನ್ನು ಬೆಳಗಿಸಲು ಕರ್ಣಾಟಕ ವಿಶ್ವವಿದ್ಯಾನಿಲಯದವರು ಸಂಸ್ಕೃತ-ಕನ್ನಡ-ಇಂಗ್ಲೀಷ್ ಭಾಷಾ ವಿಶಾರದ ಶ್ರೀಗಳನ್ನು "ಸಾಹಿತ್ಯ ಸಿದ್ಧಾಂತ ಶಿರೋಮಣಿ" (*Doctor of Literature*) ಎಂಬ ಪದವೀಧರರನ್ನಾಗಿ ಸನ್ಮಾನಿಸಿದ್ದಾರೆ.

ಶ್ರೀಗಳು ಹೀಗೆ ನಿರ್ಮಲ ತೇಜಸ್ವಿಗಳು, ವಿಶ್ವಾತ್ಮ—ವಿಜ್ಞಾಪಕರು, ದಾಸೋಹಂಭಾವದಿಂದ ಸಮಾಜದ ಅಭ್ಯುದಯಕ್ಕೆ ತನು-ಮನ-ಧನಗಳನ್ನು ಮುಡುಪಿಟ್ಟಿರುವವರು ಆಗಿರುವುದು ನಮ್ಮ ಸೌಭಾಗ್ಯವೇ ಸರಿ. ಈ ಸಚ್ಚರಿತ್ರರನ್ನು ಮತ್ತು ಅವರ ಸತ್ಕೃತಿರತ್ನಗಳನ್ನು ಸಮುಚಿತವಾದ ಘನತೆ-ಗೌರವ-ಪೂಜ್ಯತೆಗಳಿಂದ ಸತ್ವಪೂರಿತವಾಗಿ ಕಾಲಕಾಲಕ್ಕೆ ಉತ್ಸವಿಸಿ, ಬೋಧಪ್ರದವಾಗಿ ಸ್ಮರಿಸುವ ನಮ್ಮ ಸಂಸ್ಕೃತಿಯ ಸತ್ಸಂಪ್ರದಾಯದಂತೆ ಮಠದ ಭಕ್ತರೂ ಮತ್ತು ಅಭಿಮಾನಿಗಳೂ ಆದ ನೀವು—ನಾವೆಲ್ಲರು ಮೇಲೆ ಉಲ್ಲೇಖಿಸಿರುವ ಸುವರ್ಣ ಮತ್ತು ರಜತ ಮಹೋತ್ಸವಗಳನ್ನು ವಿಜೃಂಭಣೆಯಿಂದ ಆಚರಿಸಲು ಆವಶ್ಯಕವಾದ ಪೂರ್ವ ಸನ್ನಾಹ ಸಿದ್ಧತೆಗಳನ್ನು ವ್ಯವಸ್ಥಿತವಾಗಿ ಪೂರೈಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಇವುಗಳ ವಸತಿ ಸೌಕರ್ಯವನ್ನೂ ಮತ್ತು ನಿತ್ಯಕಟ್ಟಳೆಗೆ ಬೇಕಾಗುವ ಖರ್ಚನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುತ್ತಿರಲು ಯಥೇಚ್ಛವಾಗಿ ಹಣದ ಸಹಾಯವು ಅತ್ಯಾವಶ್ಯಕವಾಗಿದೆ. ಮತ್ತು ಇನ್ನೂ ಅತಿಶಯವಾಗಿ ಸಂಪತ್ಸಹಾಯವು ದೊರಕುವುದಾದರೆ ಪ್ರತಿಭಾವಂತರೂ, ಪ್ರಭಾವಶಾಲಿಗಳಾದ ಶ್ರೀಗಳು ಅಗ್ರಿಕಲ್ಚರಲ್ ಕಾಲೇಜ್, ವಿಶ್ವವಿದ್ಯಾಲಯ ಮುಂತಾದ ಉನ್ನತ ಮಟ್ಟದ ಸಂಸ್ಥೆಗಳನ್ನೂ ಸ್ಥಾಪಿಸಿ, ಯಶಸ್ವಿಯಾಗಿ ನಡೆಸುವುದರಲ್ಲಿ ಸಂದೇಹವೇ ಇಲ್ಲ ಇದನ್ನು ಮನಗಂಡು ಇಂಥಾ ಸದಾವಕಾಶವನ್ನು ಸಮಾಜದ ಕ್ಷೇಮಾಭ್ಯುದಯಕ್ಕೆ ಉಪಯೋಗಿಸಿಕೊಳ್ಳಬೇಕೆಂದೂ ಈ ಮಹತ್ಕಾರ್ಯಗಳಿಗಾಗಿ 50 ಲಕ್ಷ ರೂಪಾಯಿಗಳ ಮೇಲ್ಪಟ್ಟು ಹಣವನ್ನು ಸಂಗ್ರಹಿಸಬೇಕೆಂದೂ ಮಹಾಜನಗಳು ಭಕ್ತರ ಸಭೆಯಲ್ಲಿ ಸಂಕಲ್ಪಿಸಿರುತ್ತಾರೆ ಆದ್ದರಿಂದ ಮಾನ್ಯ ಓದುಗರು ಕ್ಷೇತ್ರದ ಹಳೆಯ ವಿದ್ಯಾರ್ಥಿಗಳು, ಕ್ಷೇತ್ರದ ಸದ್ಭಕ್ತರು ಮತ್ತು ಹಿತೈಷಿಗಳು ಆ ಸಮಿತಿಗೆ ಉದಾರ ಮನಸ್ಸಿನಿಂದ ಧಾರಾಳವಾಗಿ ಧನಸಹಾಯ ಮಾಡಬೇಕೆಂದುಪ್ರಾರ್ಥಿಸುತ್ತೇವೆ.

ಕೆ. ಶಿಪ್ಪೇರುದ್ರಯ್ಯ, ಐ.ಎ.ಎಸ್. (ರಿಟೈರ್ಡ್)

ಸಿದ್ಧಗಂಗಾ ಮಠ **ಸಮಿತಿಯ ಅಧ್ಯಕ್ಷ**



ಹಳೆಯ ವಿದ್ಯಾರ್ಥಿಗಳ ಸಂಘ

ಶ್ರೀ ಸಿದ್ಧಗಂಗಾ ಕ್ಷೇತ್ರ ತುಮಕೂರು ತಾಲ್ಲೋಕ್—ಜಿಲ್ಲಾ

ಸರ್ವಸದಸ್ಯರ ಮಹಾಧಿವೇಶನ 1968

ದಿನಾಂಕ 12-5-1968 ನೇ ಭಾನುವಾರದ ದಿವಸ ಪ್ರಾತಃಕಾಲ 10 ಗಂಟೆಗೆ ಸಂಘದ ಮಹಾಧಿವೇಶನವು ಶ್ರೀ ಶ್ರೀ ಪೂಜ್ಯಪಾದರ ಘನ ಅಧ್ಯಕ್ಷತೆಯಲ್ಲಿ ಸೇರಿ ತೀರ್ಮಾನಿಸಿದ ವಿಷಯಗಳು.

ಪ್ರಥಮದಲ್ಲಿ ಶ್ರೀ ಎರೇಸೀಮೆಯವರಿಂದ ಪ್ರಾರ್ಥನೆಯು ನಡೆಯಿತು. ನಂತರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಪಿ. ಶಿವಶಂಕರ್‌ರವರಿಂದ ಸ್ವಾಗತ ಭಾಷಣವಾಯಿತು.

ಸಂಘದ ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿಗಳು ಸಭೆಯ ಮುಂದೆ ಓದಿದರು.

ಪತ್ರಿಕಾವಿಭಾಗದ ವಾರ್ಷಿಕವರದಿಯನ್ನು ಕಾರ್ಯದರ್ಶಿಗಳಾದ ಹೆಚ್. ಬಿ. ಗಂಗಾಧರಯ್ಯನವರು ಓದಿದರು ಮತ್ತು ಲೆಖ್ಖಪತ್ರಗಳನ್ನು ಸಭೆಯ ಮುಂದಿಟ್ಟರು. ಸಭೆಯು ಒಪ್ಪಿಗೆಯನ್ನು ಕೊಟ್ಟಿತು.

ವಸ್ತುಪ್ರದರ್ಶನದ ಲೆಖ್ಖಪತ್ರಗಳನ್ನು ಕಾರ್ಯದರ್ಶಿಗಳಾದ ಡಿ. ಚಂದ್ರಶೇಖರ್‌ರವರು ಮಂಡಿಸಿದರು. ಅದನ್ನು ಸಭೆಯು ಅನುಮೋದಿಸುತ್ತಾ, ಅದನ್ನು ಮುಂದೆ ಆಡಿಟರ್ ಮಾಡತಕ್ಕದೆಂದು ಒಪ್ಪಿಗೆ ನೀಡಿತು.

ಶ್ರೀ ಸಿದ್ಧಲಿಂಗೇಶ್ವರ ಮಹಾಪಾಠಶಾಲೆ ಹಾಗೂ ಉಚಿತ ವಿದ್ಯಾರ್ಥಿನಿಲಯಗಳ ಸುವರ್ಣ ಮಹೋತ್ಸವ ಸಮಿತಿಯನ್ನು ರಚಿಸುವುದು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ನಿಧಿ ಶೇಖರಣೆ ಮಾಡುವ ಆವಶ್ಯಕತೆಯನ್ನು ಸಭೆಯು ಒಪ್ಪಿ ಒಂದು ಸಮಿತಿಯು ರಚನೆಯಾಗುವುದು ಅವಶ್ಯಕವೆಂದು ಒಪ್ಪಿಗೆ ನೀಡುತ್ತಾ ಕಾರ್ಯಕಾರೀ ಸಮಿತಿಯವರೇ ರಚನೆ ಮಾಡಿಕೊಳ್ಳಬಹುದೆಂದು ಒಪ್ಪಿತು.

1868-69 ನೆಯ ಸಾಲಿಗೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಚುನಾವಣೆ. ಹಿಂದಿದ್ದ ಕಾರ್ಯಕಾರಿ ಸಮಿತಿಯ ಸದಸ್ಯರುಗಳೇ ಮುಂದುವರಿಯಬಹುದೆಂದು ತೀರ್ಮಾನಿಸಲಾಯ್ತು. ಹಳೆ ವಿದ್ಯಾರ್ಥಿ ಸಂಘದ ಚಂದಾ ವಸೂಲಿಯನ್ನು ರಜತ ಮಹೋತ್ಸವದ ನಿಧಿಶೇಖರಣೆಯನ್ನು ಮಾಡುವುದರಿಂದ ಪ್ರಸಕ್ತ ಸಾಲಿಗೆ ಚಂದಾ ವಸೂಲಿ ವಿಭಾಗಕ್ಕೆ ಪ್ರತ್ಯೇಕವಾದ ಕಾರ್ಯದರ್ಶಿಗಳ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಲಾಯಿತು. ಅಧ್ಯಕ್ಷರ ಅನುಮತಿಯನ್ನು ಪಡೆದು ಕೊಂಡು—ಕಾರ್ಯಕಾರಿ ಸಮಿತಿಯುವರು ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬಹುದೆಂದು ತೀರ್ಮಾನಿಸಿತು. ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಒಂದೇ ಸಮನಾಗಿ ಎರಡು ಅಥವಾ ಮೂರು ಮೀಟಿಂಗ್‌ಗಳಿಗೆ ಅವರು ಸಕಾರಣ ಕೊಡದೆ ಗೈರುಹಾಜರಾಗಿದ್ದಲ್ಲಿ ಅವರ ಮೆಂಬರುತನವು ರದ್ದಾಗ ತಕ್ಕದ್ದು.

ಸಂಘದ ಎಲ್ಲಾ ಹಣಕಾಸುಗಳ ವ್ಯವಹಾರವೂ ಪ್ರಧಾನ ಕಾರ್ಯದರ್ಶಿಯವರ ಮೂಲಕವೇ

"ಇಂಪ್ರೆಸ್" ಸಿಸ್ಟಮ್ಮಿನಲ್ಲಿ ನಡೆಯತಕ್ಕದೆಂದು ತೀರ್ಮಾನಿಸಲಾಯಿತು.

ವಸ್ತುಪ್ರದರ್ಶನ ಸಮಿತಿಯ ಕಾರ್ಯದರ್ಶಿಗಳನ್ನಾಗಿ ಶ್ರೀ ಡಿ. ಚಂದ್ರಶೇಖರ್‌ರವರನ್ನೇ ಮುಂದುವರಿಸಬೇಕೆಂದು ತೀರ್ಮಾನಿಸಲಾಯಿತು.

ಪತ್ರಿಕಾವಿಭಾಗದ ಕಾರ್ಯದರ್ಶಿಗಳನ್ನಾಗಿ ಶ್ರೀ ಹೆಚ್. ಬಿ. ಗಂಗಾಧರಯ್ಯನವರೇ ಮುಂದುವರಿಯಬೇಕೆಂದು ತೀರ್ಮಾನಿಸಿತು.

ಪ್ರಸಕ್ತ ಸಾಲಿಗೆ ಶ್ರೀ ಎರೇಸೀಮೆಯವರು ಸಂಪಾದಕರಾಗಿರತಕ್ಕದ್ದೆಂದು ತೀರ್ಮಾನಿಸಲಾಯಿತು. ಮತ್ತು ಅವರು ಎಕ್ಸ್‌ಅಫಿಷಿಯೋ ಮೆಂಬರಾಗಿರತಕ್ಕದೆಂದು ತೀರ್ಮಾನಿಸಲಾಯಿತು.

ಸುವರ್ಣ ಮಹೋತ್ಸವ ಸಮಿತಿಯ ಕಾರ್ಯದರ್ಶಿಗಳನ್ನು ಚುನಾಯಿಸಿಕೊಳ್ಳುವ ವಿಚಾರದಲ್ಲಿ ಕಾರ್ಯಕಾರಿ ಸಮಿತಿಯವರೇ ಕಾರ್ಯದರ್ಶಿಗಳನ್ನು ಚುನಾಯಿಸಿ ಕೊಳ್ಳಲು ಸಭೆಯು ಅನುಮತಿಕೊಟ್ಟಿದೆ. ನಿಧಿಶೇಖರಣೆಯ ಕಾಲದಲ್ಲಿ ಹಳೆಯ ವಿದ್ಯಾರ್ಥಿಗಳೆಲ್ಲರೂ ಸಹ ಕೊನೆಯ ಪಕ್ಷ ಹತ್ತು ಅಥವಾ ಹದಿನೈದು ದಿವಸಗಳು ವಿರಾಮ ಮಾಡಿಕೊಂಡು ಈ ಮಹತ್ತರವಾದ ಕಾರ್ಯದಲ್ಲಿ ಸೇವೆ ಸಲ್ಲಿಸಲು ಒಪ್ಪಿರುತ್ತಾರೆ. ಈ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ವ್ಯವಹರಿಸುವುದು.

ಸಂಘದ ಕೆಲಸ ಕಾರ್ಯಗಳು ಹೆಚ್ಚಾಗುತ್ತಿರುವುದರಿಂದ ಪ್ರಸ್ತುತದಲ್ಲಿರತಕ್ಕ ವಸ್ತುಪ್ರದರ್ಶನ ಸಮಿತಿಗಾಗಿ ನೇಮಿಸಿಕೊಂಡಿರತಕ್ಕ ಗುಮಾಸ್ತರನ್ನು ವಸ್ತುಪ್ರದರ್ಶನ ಕಾಲದಲ್ಲಿ ಆರುತಿಂಗಳು ಪೂರ್ತಿಯಾಗಿ ವಸ್ತು ಪ್ರದರ್ಶನ ಸಮಿತಿಯ ಕಾರ್ಯದರ್ಶಿಗಳ ಕೆಲಸವನ್ನು ಮಾಡಬೇಕೆಂತಲೂ ಉಳಿದ ಆರು ತಿಂಗಳು ಪ್ರಧಾನ ಕಾರ್ಯದರ್ಶಿಗಳು ಕೊಡುವ ಕೆಲಸ ಕಾರ್ಯಗಳನ್ನು ಮಾಡುವುದರ ಜೊತೆಗೆ ವಸ್ತು ಪ್ರದರ್ಶನ ಸಮಿತಿಯ ಕಾರ್ಯವನ್ನೂ ಸಹ ಮಾಡುತ್ತಲೇ ಇರಬೇಕೆಂದೂ ತೀರ್ಮಾನಿಸಿತು.

ಅಲ್ಲದೆ ಸುವರ್ಣ ಮಹೋತ್ಸವ ಹಾಗೂ ರಜತ ಮಹೋತ್ಸವವು ನಡೆಯುವ ತನಕ, ಹಾಲಿಇರತಕ್ಕ ಗುಮಾಸ್ತರ ಜೊತೆಗೆ ಮತ್ತೊಬ್ಬ ಫುಲ್‌ಟೈಂ ಗುಮಾಸ್ತರನ್ನು ನೇಮಿಸಿಕೊಳ್ಳಬೇಕೆಂದು ತೀರ್ಮಾನಿಸಿತು.

ಸಂಘದ ನಾನಾ ವಿಭಾಗಗಳ ಲೆಖ್ಖಪತ್ರಗಳನ್ನು ತನಿಖೆ ಮಾಡಲು ಇಂಟರ್ನಲ್ ಆಡಿಟರೊಬ್ಬರನ್ನು ಸಂಭಾವನೆ ಇಲ್ಲದೆ ನೇಮಿಸಿಕೊಳ್ಳಬಹುದೆಂದು ತೀರ್ಮಾನಿಸಿತು.

ಶ್ರೀ ಶ್ರೀಯವರು ತಮ್ಮ ಅಮೃತ ಉಪದೇಶ ಭಾಷಣದಲ್ಲಿ ಸಂಸ್ಥೆಯು ಉತ್ತಮವಾದ ಕಾರ್ಯವನ್ನು ಮಾಡಿದೆ ಎಂತಲೂ ಮೊದಲನೆಯದಾಗಿ ಸಂಘದ ಪತ್ರಿಕೆಯಾಗಿರುತ್ತೆಂತಲೂ, ಅದು ಇನ್ನು ಉತ್ತಮ ರೀತಿಯಲ್ಲಿ ಬರಬೇಕೆಂತಲೂ, ಅದಕ್ಕೆ ಲೇಖನ ಕೊಡತಕ್ಕ ಲೇಖಕರಿಗೆ ಸಂಭಾವನೆಯನ್ನು ಕೊಡಬೇಕೆಂತಲೂ, ಇದರಿಂದ ಉತ್ತಮವಾದ ಲೇಖನಗಳು ಬಂದು ಪತ್ರಿಕೆಯು ಉತ್ತಮತರಗತಿಯದಾಗುತ್ತದೆಂದು ಹೇಳುತ್ತಾ, ವಸ್ತುಪ್ರದರ್ಶನ ಸಮಿತಿಯು ಬಹು ಉತ್ತಮ ಮಟ್ಟದಲ್ಲಿ ಕಾರ್ಯವನ್ನು ಮಾಡುತ್ತಿದೆ ಎಂತಲೂ, ವಸ್ತುಪ್ರದರ್ಶನದ ಕಾಲಾವಧಿಯು ಕೇವಲ ಒಂದು ವಾರವಾದರೂ ಸಹ ಉತ್ತಮವಾಗಿ ಕಾರ್ಯಸಾಧನೆ ಮಾಡಿರುವುದು ಸಂಘದ ಶ್ರಮವೆಂತಲೂ, ಸಂಘದವರು ಇನ್ನೂ ಹೆಚ್ಚು ಶ್ರಮಿಸಬೇಕೆಂದೂ ತಿಳಿಸಿದರು. ತಾವೆಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ಸತ್ಯ-ನಿಷ್ಠೆಯಿಂದ ಮಾಡುತ್ತಾ ಬಂದಲ್ಲಿ ಅದು ಈ ಕ್ಷೇತ್ರಕ್ಕೆ ತಾವು ಸಲ್ಲಿಸುವ ಕಾಣಿಕೆಯೆಂದು ಹಿತವಚನವನ್ನು ಅಪ್ಪಣೆ ಕೊಡಿಸಿದರು. ಇದರಿಂದ ಶ್ರೀಮಠದ ಕೀರ್ತಿ ಹೆಚ್ಚುತ್ತದೆಂದು ಅಭಿಪ್ರಾಯಪಟ್ಟರು.